

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 8 ಮಂಗಳವಾರ 2023

ಸಂಪುಟ: 44 | ಸಂಚಿಕೆ: 114 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಜನಪ್ರತಿನಿಧಿಗಳೇ 'ಜನ ಪರ' ಇಲ್ಲವೇ...!?
ಮೈಸೂರು ಪಾಲಿಕೆ ಫುಟ್‌ಪಾತ್ ಅತಿಕ್ರಮಣ ತೆರವು ನಾಮಕಾವಸ್ತೆ: ಮತ್ತೆ ಪಾದಚಾರಿ ಮಾರ್ಗದಲ್ಲಿ ಶುರುವಾಯ್ತು ವ್ಯಾಪಾರ ವಹಿವಾಟು
■ ಪುಟ–5

ಮೂಲ ಸೌಕರ್ಯ ಕಲ್ಪಿಸದ ಮೈಸೂರಿನ ಖಾಸಗಿ ಬಡಾವಣೆಗಳ

ಡೆವಲಪರ್ಸ್ ವಿರುದ್ಧ ಕ್ರಮ ಕೈಗೊಳ್ಳಿ

- ಜಿ.ಟಿ.ದೇವೇಗೌಡರ ಪ್ರಸ್ತಾಪಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಧಿಕಾರಿಗಳಿಗೆ ತಾಕೀತು
- ಸೌಕರ್ಯ ಕಲ್ಪಿಸದೆ ಸೈಟ್ ಮಾರಾಟಕ್ಕೆ ಅನುಮತಿ ನೀಡಿದ ಮುಡಾಗೆ ತರಾಟೆ
- ಇನ್ನು ಮುಂದೆ ಯುಜಿಡಿ ನೀರು ರಾಜಕಾಲುವೆ, ಮೋರಿ ಸೇರಬಾರದು
- ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿ ರಚನೆ

ಮೈಸೂರು, ಆ.7(ಬಿಎಲ್‌ಯು)– ಮೈಸೂರಿನ ಖಾಸಗಿ ಬಡಾವಣೆಗಳಲ್ಲಿ ಮೂಲ ಸೌಕರ್ಯ ಕಲ್ಪಿಸದಿರುವಂತಹ ಬಡಾವಣೆಯ ಅಭಿವೃದ್ಧಿಪಡಿಸಿದವರು ಇಲ್ಲವೇ ಡೆವಲಪರ್‌ಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಖಡಕ್ ಆದೇಶ ನೀಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯ ದೇವರಾಜ ಅರಸ್ ಸಭಾಂಗಣದಲ್ಲಿ ಇಂದು ಶಾಸಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮೊದಲು ಈ ವಿಚಾರವನ್ನು ಶಾಸಕ ಜಿ.ಟಿ.ದೇವೇಗೌಡರು ಪ್ರಸ್ತಾಪ ಮಾಡಿದರು. ಕಳೆದ 25 ವರ್ಷಗಳಿಂದ ನಿರ್ಮಾಣವಾಗಿರುವಂತಹ ಖಾಸಗಿ ಬಡಾವಣೆಗಳಲ್ಲಿ ಮೂಲ ಸೌಕರ್ಯಗಳಿಲ್ಲ. ಇಲ್ಲಿ ನಿವೇಶನ ಖರೀದಿಸಿ ಮನೆ ನಿರ್ಮಾಣ ಮಾಡಿಕೊಂಡು ವಾಸಿಸುತ್ತಿರುವ ಜನರು ಹೈರಾಣಾಗಿದ್ದಾರೆ ಎಂದು ಇತ್ತೀಚೆಗೆ ತಮ್ಮನ್ನು ಭೇಟಿ ಮಾಡಿ ತಮ್ಮ ಅಳಲು ತೋಡಿಕೊಂಡ ಇಂತಹ ಬಡಾವಣೆಗಳಲ್ಲಿನ ನಿವಾಸಿಗಳ ದಯಾನೀಯ ಪರಿಸ್ಥಿತಿಯ ಬಗ್ಗೆ ಉಸ್ತುವಾರಿ ಸಚಿವರ ಗಮನ ಸೆಳೆದರು. ತರುವಾಯ ಮಾತನಾಡಿದ ಡಾ.ಮಹದೇವಪ್ಪ, ಮೂಲಭೂತ ಸೌಕರ್ಯ ಕಲ್ಪಿಸದೆ ಖಾಸಗಿ ಬಡಾವಣೆ ಡೆವಲಪರ್ಸ್‌ಗೆ ಹೇಗೆ ನಿರಪೇಕ್ಷಣಾ ಪತ್ರ ಕೊಟ್ಟಿದ್ದೀರಾ? ನಿವೇಶನಗಳ ಮಾರಾಟಕ್ಕೆ ಹೇಗೆ ಅನುಮತಿ ಕೊಟ್ಟಿದ್ದೀರಾ? ಎಂದು ಮುಡಾ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಮೂಲಭೂತ ಸೌಕರ್ಯ ಕಲ್ಪಿಸದಿರುವ ಖಾಸಗಿ ಬಡಾವಣೆ ಡೆವಲಪರ್ಸ್ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ● 9ನೇ ಪುಟಕ್ಕೆ



■ ಲೋಕಸಭಾ ಚುನಾವಣೆಗೆ ವಿಶ್ವನಾಥ್ ಕಾಂಗ್ರೆಸ್ ಟಿಕೆಟ್ ಕೇಳುವುದರಲ್ಲಿ ತಪ್ಪೇನಿಲ್ಲ
■ ಜನರ ಸಮಸ್ಯೆ ಕೇಳಿದರೆ ಅದರ ಪರಿಹಾರಕ್ಕೆ ಲಂಡನ್‌ಗೆ ಕಳುಹಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಅಂತಾರೆ
■ ಮೈಸೂರಿನ ಒಳಚರಂಡಿ ನೀರು ಕಾವೇರಿ ನದಿ ಸೇರುತ್ತಿದೆ: ಶಾಸಕ ತನ್ವೀರ್‌ಸೇಠ್ ಆತಂಕ
■ ಪುಟ–3

ಸಂಚಾರಕ್ಕೆ ಅಡ್ಡಿಯಾಗುವಂತಹ ಮೈಸೂರು ಎಂಜಿ ರಸ್ತೆಯಲ್ಲಿನ ವ್ಯಾಪಾರ ವಹಿವಾಟು ನಿರ್ಬಂಧಿಸಿ

ಮಿತ್ರನ ಫಲಶ್ರುತಿ

ಪೊಲೀಸ್ ಆಯುಕ್ತರಿಗೆ ಉಸ್ತುವಾರಿ ಸಚಿವರ ಸೂಚನೆ

ಮೈಸೂರು, ಆ.7(ಬಿಎಲ್‌ಯು)– ಮೈಸೂರಿನ ಎಂ.ಜಿ.ರಸ್ತೆಯಲ್ಲಿನ ರೈತ ಸಂತೆ ಬಳಿ ಹಣ್ಣು, ತರಕಾರಿ ಮಾರಾಟಗಾರರು ರಸ್ತೆಯಲ್ಲಿ ವಾಹನಗಳ ನಿಲ್ಲಿಸಿಕೊಂಡು, ಫುಟ್‌ಪಾತ್‌ನಲ್ಲಿ ಹಣ್ಣು, ತರಕಾರಿ ಇಳಿಸಿ, ವ್ಯಾಪಾರ–ವಹಿವಾಟು ಮಾಡುವುದರಿಂದ ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಹಾಗಾಗಿ ಇತರ ವಾಹನ ಚಾಲಕರು, ಸವಾರರಿಗೆ ತೊಂದರೆ ಆಗುವಂತಹ ಇಲ್ಲಿನ ವ್ಯಾಪಾರ ವಹಿವಾಟು ನಿರ್ಬಂಧಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ಕಚೇರಿಯ ದೇವರಾಜ ಅರಸು ಸಭಾಂಗಣದಲ್ಲಿ ಶಾಸಕರು ಹಾಗೂ ಜಿಲ್ಲೆಯ ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಉಸ್ತುವಾರಿ ಸಚಿವರು ಈ ಸೂಚನೆ ನೀಡಿದರು. ಸಭೆಯಲ್ಲಿ ಮೊದಲು ಈ ವಿಚಾರ ಪ್ರಸ್ತಾಪಿಸಿದ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಎಂ.ಜಿ.ರಸ್ತೆಯ ರೈತ ಸಂತೆಯಲ್ಲಿ ಹಣ್ಣು, ತರಕಾರಿ ಮಾರಾಟಗಾರರಿಗೆ ಮಾರಾಟಕ್ಕೆ ಸ್ಥಳ ನಿಗದಿ ಮಾಡಲಾಗಿದೆ. ಆದರೆ ಅವರು ಅಲ್ಲಿಗೆ ಹೋಗದೆ, ● 9ನೇ ಪುಟಕ್ಕೆ

'ಗ್ಯಾರಂಟಿ'ಗಳಿಗೆ ಆದ್ಯತೆ; ಅಭಿವೃದ್ಧಿ ಅನುದಾನವಿಲ್ಲ

- ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವರಿಕೆ
- ಲೋಕಸಭೆ ಚುನಾವಣೆ ಬರುತ್ತಿದೆ 'ಗ್ಯಾರಂಟಿ' ಜಾರಿ ಮಾಡಲೇಬೇಕು
- ಸ್ವಲ್ಪ ಕಾಲ ಹೇಗಾದರೂ ಸಹಿಸಿಕೊಂಡಿರಿ; ನಂತರ ನೋಡೋಣ




ಬೆಂಗಳೂರು, ಆ. 7– ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಬೇಕಾಗಿರುವುದರಿಂದ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಸದ್ಯಕ್ಕೆ ಅನುದಾನ ನೀಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪಕ್ಷದ ಶಾಸಕರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಕ್ಷೇತ್ರದ ಅಭಿವೃದ್ಧಿಗೆ ಅನುದಾನ ದೊರೆಯುತ್ತಿಲ್ಲ ಹಾಗೂ ಸಚಿವರು ತಮ್ಮ ಮಾತನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ದರ್ಪದಿಂದ ಮೆರೆಯುತ್ತಿದ್ದಾರೆ ಎಂಬ ಶಾಸಕರ ಆರೋಪಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಪಕ್ಷದ ಶಾಸಕರ ಜಿಲ್ಲಾವಾರು ಸಭೆಯನ್ನು ಸಚಿವರ ಸಮ್ಮುಖದಲ್ಲಿ ನಡೆಸಿ ಅಸಮಾಧಾನ ಶಮನಗೊಳಿಸುವ ನಿಟ್ಟಿನಲ್ಲಿ ತಮ್ಮ ಗೃಹಕಚೇರಿ ಕೃಷ್ಣಾದಲ್ಲಿ ತುಮಕೂರು, ಯಾದಗಿರಿ, ಚಿತ್ರದುರ್ಗ, ಬಾಗಲಕೋಟೆ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳ ಶಾಸಕರು ಮತ್ತು ಸಚಿವರ ಸಭೆ ನಡೆಸಿದರು. ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲದೇ ಯಾವ ಕೆಲಸವೂ ನಡೆಯುತ್ತಿಲ್ಲ. ಶಾಸಕರಾದ ನಾವು ಜನರ ನಿರೀಕ್ಷೆಗಳಿಗೆ ಸ್ಪಂದಿಸಲು ಕಷ್ಟವಾಗುತ್ತಿದೆ. ಜನರು ಸಮಸ್ಯೆ ಹೇಳಿಕೊಂಡು ಬಂದಾಗ ● 9ನೇ ಪುಟಕ್ಕೆ

ಬ್ಯಾಂಕಾಕ್‌ನಲ್ಲಿ ನಟ ವಿಜಯರಾಘವೇಂದ್ರರ ಪತ್ನಿ ಸ್ಪಂದನಾ ಹೃದಯಾಘಾತದಿಂದ ನಿಧನ

ಬೆಂಗಳೂರು,ಆ.7– ಸ್ಯಾಂಡಲ್‌ವುಡ್ ನಟ ವಿಜಯರಾಘವೇಂದ್ರ ಪತ್ನಿ ಸ್ಪಂದನಾ ವಿಜಯರಾಘವೇಂದ್ರ ಅವರು ಹೃದಯಾಘಾತದಿಂಧ ನಿಧನರಾಗಿದ್ದಾರೆ. ಸ್ನೇಹಿತರು ಮತ್ತು ಕುಟುಂಬದವರ ಜೊತೆ ಬ್ಯಾಂಕಾಕ್‌ಗೆ ತೆರಳಿದ್ದು, ಅಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ ಅವರ ಪುತ್ರಿಯಾಗಿರುವ ಸ್ಪಂದನಾ ಅವರನ್ನು ವಿಜಯರಾಘವೇಂದ್ರ 2007, ಆಗಸ್ಟ್ 26ರಲ್ಲಿ ಪ್ರೀತಿಸಿ ಮದುವೆಯಾಗಿದ್ದರು. ಇವರ 16ನೇ ವಿವಾಹ ವಾರ್ಷಿಕೋತ್ಸವಕ್ಕೆ ಕೇವಲ 19 ದಿನಗಳು ಬಾಕಿ ಇರುವಂತೆ ಈ ದುರಂತ ನಡೆದಿದೆ ಮರಣೋತ್ತರ ಪರೀಕ್ಷೆ ಮುಕ್ತಾಯವಾಗಿದ್ದು, ವಿದೇಶಾಂಗ ಸಚಿವಾಲಯದ ಶಿಷ್ಟಾಚಾರ ಮುಗಿದ ನಂತರ ನಾಳೆ ಅಥವಾ ನಾಳಿದ್ದು, ಪಾರ್ಥಿವ ಶರೀರ ರಾಜ್ಯಕ್ಕೆ ಬರಬಹುದು ಎಂದು ಸ್ಪಂದನಾ ಅವರ ದೊಡ್ಡಪ್ಪ, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ತಿಳಿಸಿದ್ದಾರೆ. 2016ರಲ್ಲಿ ಬಿಡುಗಡೆಯಾದ 'ಅಪೂರ್ವ' ಸಿನಿಮಾದಲ್ಲಿ ಅತಿಥಿ ಪಾತ್ರದಲ್ಲಿ ಸ್ಪಂದನಾ ನಟಿಸಿದ್ದರು. ದಂಪತಿಗೆ ● 10ನೇ ಪುಟಕ್ಕೆ



ಮೈಸೂರು ಅರಮನೆ ವ್ಯಾಪ್ತಿಯಲ್ಲಿ ಡ್ರೋಣ್ ಹಾರಾಟಕ್ಕೆ ನಿರ್ಬಂಧ



ಮೈಸೂರು, ಆ.7(ಎಸ್‌ಬಿಡಿ)– ಮೈಸೂರು ಅರಮನೆ ಸುತ್ತಮುತ್ತ ಡ್ರೋಣ್ ಕ್ಯಾಮರಾ ಬಳಕೆಗೆ ನಿರ್ಬಂಧವಿದ್ದು, ಅರಮನೆ ಮಂಡಳಿಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ.

ಈ ಸಂಬಂಧ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಪತ್ರಿಕಾ ಪ್ರಕಟಣೆ ನೀಡಿದ್ದು, ಅರಮನೆ ಸುತ್ತಮುತ್ತಲಿನ ಪ್ರದೇಶವನ್ನು ಹಳದಿ ವಲಯ(ಯಲ್ಲೋ ಝೋನ್) ಎಂದು ಗುರುತಿಸಿರುವ ಹಿನ್ನೆಲೆಯಲ್ಲಿ ಡ್ರೋಣ್ ಕ್ಯಾಮರಾ ಬಳಕೆಯನ್ನು ನಿರ್ಬಂಧಿಸಲಾಗಿದೆ. ಅರಮನೆ ಹೊರಾಂಗಣ ಸೇರಿದಂತೆ ನಿರ್ಬಂಧಿತ ಪ್ರದೇಶದಲ್ಲಿ ಡ್ರೋಣ್ ಬಳಸಲು ಕಡ್ಡಾಯವಾಗಿ ಅರಮನೆ ಮಂಡಳಿಯಿಂದ ಅನುಮತಿ ಪಡೆಯಬೇಕು ಎಂದು ತಿಳಿಸಿದ್ದಾರೆ.

ಅರಮನೆ ಮಂಡಳಿ ಪೂರ್ವಾನುಮತಿ ಇಲ್ಲದೆ ಹಳದಿ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಡ್ರೋಣ್ ಕ್ಯಾಮರಾ ಬಳಸಿದರೆ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ. ಅರಮನೆ ಸುತ್ತ ಡ್ರೋಣ್ ಕ್ಯಾಮರಾ ಬಳಕೆ ಹೆಚ್ಚಿದ್ದರಿಂದ ಇದಕ್ಕೆ ನಿರ್ಬಂಧವಿರುವುದರ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಈ ನಿಟ್ಟಿನಲ್ಲಿ ಅರಮನೆ ಆವರಣದಲ್ಲಿ ಸೂಚನಾ ಫಲಕವನ್ನೂ ಅಳವಡಿಸಲಾಗಿದೆ. ಅನಧಿಕೃತವಾಗಿ ಡ್ರೋಣ್ ಬಳಸಿದವರ ವಿರುದ್ಧ ಕ್ರಮಕ್ಕೆ ಮಂಡಳಿ ಮುಂದಾಗಿದೆ.

ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

ಮೈಸೂರು,ಆ.7– 2023–24ನೇ ಸಾಲಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ಅರ್ಹ ವಿಕಲಚೇತನ ವ್ಯಕ್ತಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲು ಹಾಗೂ 8 ಫಲಾನುಭವಿ ಆಧಾರಿತ ಯೋಜನೆಗಳ (ಡಿಟಿಬಿ) ನೇರ ನಗದು ವರ್ಗಾವಣೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೆರಿಟ್ ವಿದ್ಯಾರ್ಥಿವೇತನಕ್ಕಾಗಿ ಬಹುಮಾನ ಹಣ, ಶಿಶುಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಆಧಾರ ಯೋಜನೆ, ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭೆ ಯೋಜನೆ ಹಾಗೂ ವೈದ್ಯಕೀಯ ಪರಿಹಾರ ನಿಧಿ ಯೋಜನೆಗಳಿಗೆ https://seva sindhuservices.karnataka.gov.in ಆನ್‌ಲೈನ್ ಮೂಲಕ ಆ.31ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿಯ ವಿಕಲಚೇತನರ ಸಹಾಯವಾಣಿ ಕೇಂದ್ರದ ದೂ.ಸಂ: 0821–2490333 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗ ಪಡೆದ ಎಂಎಂಕೆ, ಎಸ್‌ಡಿಎಂ ಮಹಿಳಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ



ಮೈಸೂರು,ಆ.7–ಮೈಸೂರಿನ ಎಂ.ಎಂ.ಕೆ. ಮತ್ತು ಎಸ್.ಡಿ.ಎಂ.ಮಹಿಳಾ ಮಹಾವಿದ್ಯಾಲಯದ 2022–2023ನೇ ಶೈಕ್ಷಣಿಕ ಸಾಲಿನ ಅಂತಿಮ ವರ್ಷದ ಬಿ.ಕಾಂ ಬಿ.ಸಿ.ಎ. ಬಿ.ಬಿ.ಎ. ಮತ್ತು ಬಿ.ಎಸ್ಸಿ ವಿಭಾಗದ 83 ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಬಹುರಾಷ್ಟ್ರೀಯ ಉದ್ಯಮ ಸಂಸ್ಥೆಗಳಲ್ಲಿ ಉತ್ತಮ ವೇತನ ಮತ್ತು ಸ್ಥಾನಮಾನಗಳೊಂದಿಗೆ ಉದ್ಯೋಗ ಲಭಿಸಿದೆ.

ಇನ್ಫೋಸಿಸ್ ಸಂಸ್ಥೆಯಲ್ಲಿ 4 ಮಂದಿ, ಕೋಡ್ ಯಂಗ್ ಸಂಸ್ಥೆಯಲ್ಲಿ 4 ಮಂದಿ, ಆಕ್ಸೆಂಚರ್ ಸಂಸ್ಥೆಯಲ್ಲಿ 6 ಮಂದಿ, ಈಕ್ವಲೈಸ್ ಆರ್‌ಸಿಎಂ ಸಂಸ್ಥೆಯಲ್ಲಿ–20 ಮಂದಿ, ಕ್ರಿಯಾ ನೆಕ್ಸ್ಟ್ ವೆಲ್ತ್ ಸಂಸ್ಥೆಯಲ್ಲಿ 28 ಮಂದಿ, ವಿವಿಧ ಬ್ಯಾಂಕಿಂಗ್ ಕ್ಷೇತ್ರದ ವಲಯಗಳಲ್ಲಿ–20 ಮಂದಿ, ಟಿಸಿಎಸ್ ಸಂಸ್ಥೆಯಲ್ಲಿ–1 ಈ ಬಹು ರಾಷ್ಟ್ರೀಯ ಸಂಸ್ಥೆಗಳು ಕಾಲೇಜಿನ 83 ವಿದ್ಯಾರ್ಥಿಗಳಿಗೆ ನೇಮಕಾತಿಯನ್ನು ನೀಡಿವೆ.

ಈ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಕಾಲೇಜಿನ ಉದ್ಯೋಗ ಮಾರ್ಗದರ್ಶನ ನೇಮಕಾತಿ ಸಮಿತಿ ಸಂಚಾಲಕಿ ಪ್ರೊ.ರಮ್ಯ, ಕಾಲೇಜು ಐಕ್ಯೂಎಸಿ ಸಂಚಾಲಕರಾದ ಪ್ರೊ.ಸುಕೃತ, ಸಮಿತಿ ಸದಸ್ಯರಾದ ಮಹದೇವಸ್ವಾಮಿ, ಸೈಯದ್ ಸಾದತ್, ಹೇಮಾ, ದುರ್ಗಶ್ರೀ ಅವರೊಂದಿಗೆ ಉದ್ಯೋಗ ಪಡೆದ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಇಲವಾಲ ಪೊಲೀಸ್ ಠಾಣೆಯ ನೂತನ ಆರಕ್ಷಕ ಉಪನಿರೀಕ್ಷಕ ಮಂಜುನಾಯಕ ಅವರನ್ನು ಮೈಸೂರು ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾ ಅಧ್ಯಕ್ಷ ಚಿದಂಬರ, ಇಲವಾಲ ಗ್ರಾಮದ ಮುಖಂಡರಾದ ದೊಡ್ಡಸ್ವಾಮಿನಾಯಕ, ದಂಡನಾಯಕ, ಅಂದಾನಿ ಅಭಿನಂದಿಸಿದರು.

ಪಿಎಚ್.ಡಿ ಪದವೀಧರರು

ಪ್ರೊ. ಎನ್.ಎಸ್.ಸತೀಶ್



ಮೈಸೂರು,ಆ.7–ಡಾ.ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎನ್.ಎಸ್.ಸತೀಶ್ ಅವರು ಅನಂತಮೂರ್ತಿ, ಲಂಕೇಶ್ ಹಾಗೂ ಪೂರ್ಣಚಂದ್ರ ತೇಜಸ್ವಿ ಅವರ ಸಣ್ಣಕತೆಗಳಲ್ಲಿ ಲೋಹಿಯಾ ಚಿಂತನೆಗಳು ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಜೈನ್ ವಿಶ್ವವಿದ್ಯಾಲಯವು ಪಿಹೆಚ್.ಡಿ ಪದವಿ ನೀಡಿದೆ.

ಪಿ.ಶಾಲಿನಿ



ಪಿ.ಶಾಲಿನಿ ಅವರು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎನ್.ಪವಿತ್ರ



ಡಾ. ಆಯಿಷಾ ಎಂ. ಶರೀಫ್ ಅವರ ಮಾರ್ಗದರ್ಶನದಲ್ಲಿ ಎನ್. ಪವಿತ್ರ ಅವರು ನಿರ್ವಹಣೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ದರ್ಶನ್ ವುಶು ತಂಡದ ಕೋಚ್



ಮೈಸೂರು,ಆ.7–ಮೈಸೂರಿನ ಯು. ದರ್ಶನ್ ಅವರು ಕರ್ನಾಟಕ ರಾಜ್ಯ ಜೂನಿಯರ್ ವುಶು ತಂಡದ ಕೋಚ್ ಆಗಿ ನೇಮಕಗೊಂಡಿದ್ದಾರೆ. ಬಿಹಾರದ ಪಾಟ್ನಾದ ಪಾಟಲೀಪುತ್ರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ 22ನೇ ಜೂನಿಯರ್ ರಾಷ್ಟ್ರೀಯ ವುಶು ಚಾಂಪಿಯನ್‌ಶಿಪ್‌ನಲ್ಲಿ ಇವರು ಪಾಲ್ಗೊಳ್ಳುತ್ತಿದ್ದಾರೆ. ಈ ಪಂದ್ಯಾವಳಿಯು ಆ.11ರವರೆಗೆ ನಡೆಯಲಿದೆ. ದರ್ಶನ್ ಅವರು ನೇತಾಜಿ ಸುಭಾಷ್ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನ ವುಶು ವಿಭಾಗದಲ್ಲಿ ಕ್ರೀಡಾ ತರಬೇತಿಯಲ್ಲಿ ಡಿಪ್ಲೋಮಾ ಪಡೆಯುವ ಮೂಲಕ ಉತ್ತೀರ್ಣರಾಗಿದ್ದಾರೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಂ.ಎ. ಧರ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಪ್ರಮುಖ 25 ಸರ್ಕಲ್‌ಗಳಲ್ಲಿ AI ಸಿಸಿ ಕ್ಯಾಮರಾ ಅಳವಡಿಸಲು ಪ್ರಸ್ತಾವನೆ

ದಿನದ 24 ಗಂಟೆಯೂ ಸ್ವಯಂಚಾಲಿತ ಕ್ಯಾಮರಾ ಮೂಲಕ ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳ ಮಾಲೀಕರಿಗೆ ನೋಟೀಸ್ ಜಾರಿ

ಎಸ್.ಟಿ. ರವಿಕುಮಾರ್

ಮೈಸೂರು,ಆ.7–ವಾಹನ ಮಾಲೀಕರೇ ಎಚ್ಚರ, ಸಂಚಾರ ನಿಯಮ ಉಲ್ಲಂಘಿಸಿದರೆ ನಿಮ್ಮ ಗಮನಕ್ಕೆ ಬಾರದೆಯೇ ನಿಮ್ಮ ಮನೆಗೆ ದಂಡವಿಧಿಸಿದ ನೋಟಿಸ್ ಬರುತ್ತದೆ.

ಮೈಸೂರು ನಗರದಲ್ಲಿ ಸಂಚಾರ ಸುವ್ಯವಸ್ಥೆಗೆ ಮುಂದಾಗಿರುವ ಪೊಲೀಸರು, ಸ್ವಯಂಚಾಲಿತ ಪ್ರಕರಣ ದಾಖಲಿಸಿ ದಂಡದ ನೋಟಿಸ್ ಸೃಷ್ಟಿಸುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (AI) ಆಧಾರಿತ ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನೇಷನ್ (ANPR) ಕ್ಯಾಮರಾಗಳನ್ನು ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ITMS) ಅಡಿ ಮೈಸೂರಿನ 25 ಸರ್ಕಲ್, ಜಂಕ್ಷನ್ ಹಾಗೂ ಸಿಗ್ನಲ್‌ಲೈಟ್ ಸರ್ಕಲ್‌ಗಳಲ್ಲಿ ಅಳವಡಿಸಲು ಮುಂದಾಗಿದ್ದಾರೆ.

ಅರಮನೆ ಸುತ್ತಲಿನ ಪ್ರದೇಶ, ರಾಜಮಾರ್ಗ, ಹುಣಸೂರು ರಸ್ತೆ, ಬಿಎನ್ ರಸ್ತೆ, ಲಲಿತ ಮಹಲ್ ರೋಡ್, ಎಂ.ಜಿ ರಸ್ತೆ, ಸಿಗ್ನಲ್ ಲೈಟ್ ಸರ್ಕಲ್‌ಗಳೂ ಸೇರಿದಂತೆ ಮೈಸೂರು ನಗರದಾದ್ಯಂತ ಒಟ್ಟು 108 ಸಿಸಿ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿದ್ದರೂ, ಆ ಪೈಕಿ 45 ಕ್ಯಾಮರಾಗಳು ಮಾತ್ರ ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳ ನಂಬರ್ ಪ್ಲೇಟ್ ಕ್ಲಿಕ್ಕಿಸಿ ಮೈಸೂರು ನಗರ ಪೊಲೀಸ್ ಆಯುಕ್ತ ಕಚೇರಿಗಳಲ್ಲಿರುವ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್ (TNC)ಗೆ ಮಾಹಿತಿ ರವಾನಿಸುವ ವ್ಯವಸ್ಥೆ ಚಾಲ್ತಿಯಲ್ಲಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿನ ಅಪಘಾತ ನಿಯಂತ್ರಿಸುವ



ಸಲುವಾಗಿ ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್‌ಕುಮಾರ್, ಜುಲೈ 25ರಂದು ಸ್ಥಳ ಪರಿಶೀಲನೆ ಮಾಡಿದ ನಂತರ ಮೈಸೂರಿಗೆ ಆಗಮಿಸಿ ಇಲ್ಲಿನ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಹಾಗೂ ಸಂಚಾರ ನಿಯಮ ಜಾರಿಗೊಳಿಸುತ್ತಿರುವ ಬಗ್ಗೆ ಖುದ್ದು ಪರಿಶೀಲನೆ ನಡೆಸಿದ್ದರು.

ನಂತರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಳವಡಿಸಿರುವಂತೆ ಮೈಸೂರು ನಗರದಲ್ಲೂ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆಧಾರಿತ ಸಿಸಿ ಕ್ಯಾಮರಾಗಳನ್ನು ಅಳವಡಿಸುವಂತೆ ಅವರು ಸಲಹೆ ನೀಡಿದ್ದರು. ಅದರನ್ವಯ ಮೈಸೂರು ನಗರದ ಕೆ.ಆರ್. ಸರ್ಕಲ್, ಹಾರ್ಡಿಂಜ್ ಸರ್ಕಲ್, ಅಗ್ರಹಾರ ಸರ್ಕಲ್, ಲಲಿತಮಹಲ್ ರಸ್ತೆಯ ಸಂಗೊಳ್ಳಿ ರಾಯಣ್ಣ ಸರ್ಕಲ್, ಸಿದ್ದಪ್ಪ ಸ್ಕ್ವೇರ್, ಆರ್‌ಟಿಓ ಸರ್ಕಲ್, ರಾಮಸ್ವಾಮಿ ಸರ್ಕಲ್, ಮೆಟ್ರೋಪೋಲ್ ಸರ್ಕಲ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಓಲ್ಡ್ ಆರ್‌ಎಂಸಿ ಸರ್ಕಲ್, ಪಡುವಾರಹಳ್ಳಿ ಜಂಕ್ಷನ್, ರಿಂಗ್ ಜಂಕ್ಷನ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಬೋಗಾದಿ ಜಂಕ್ಷನ್, ಹೆಚ್.ಡಿ.ಕೋಟೆ ರಿಂಗ್ ರೋಡ್ ಜಂಕ್ಷನ್, ನಂಜನಗೂಡು ರಸ್ತೆ, ಬನ್ನೂರು ರಸ್ತೆ, ಮಹದೇವಪುರ ರಸ್ತೆ ಜಂಕ್ಷನ್ ಸೇರಿದಂತೆ ನಗರ ಪೊಲೀಸ್ ಆಯುಕ್ತರ ವ್ಯಾಪ್ತಿಯ 25 ಸರ್ಕಲ್‌ಗಳನ್ನು ಗುರ್ತಿಸಲಾಗಿದೆ.

ಒಂದು ಜಂಕ್ಷನ್‌ನಲ್ಲಿ 2ರಿಂದ 3 ಕ್ಯಾಮರಾದಂತೆ 25 ಕಡೆ ಎಐ ಆಧಾರಿತ ಸಿಸಿ ಕ್ಯಾಮರಾ ಅಳವಡಿಸಲು ಅನುದಾನ ಕೋರಿ ಮೈಸೂರು ನಗರ ಪೊಲೀಸ್ ಘಟಕದಿಂದ ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆಯಾಗಿ ಹಣ ಮಂಜೂರಾದರೆ ಟೆಂಡರ್ ಕರೆದು ಯೋಜನೆಯನ್ನು ದಸರಾ ಮಹೋತ್ಸವದೊಳಗಾಗಿ ಅನುಷ್ಠಾನಗೊಳಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಿಗ್ನಲ್ ಜಂಪಿಂಗ್, ಹೆಲ್ಮೆಟ್, ಸೀಟ್ ಬೆಲ್ಟ್ ರಹಿತ ವಾಹನ ಚಾಲನೆ, ದೋಷಪೂರಿತ ನಂಬರ್ ನಿಯಮ ಉಲ್ಲಂಘಿಸಿದ ವಾಹನಗಳ ನಂಬರ್ ಕ್ಲಿಕ್ ಮಾಡಲಿರುವ ಈ ಕ್ಯಾಮರಾಗಳು ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಟೆಕ್ನಾಲಜಿ ಮೂಲಕ ಆರ್‌ಟಿಓ ಕಚೇರಿಯಲ್ಲಿ ನೋಂದಣಿಯಾಗಿರುವ ವಾಹನಗಳ ಮಾಲೀಕರ ವಿಳಾಸಕ್ಕೆ ನೋಟಿಸ್ ಚಲನ್ ಜಾರಿ ಮಾಡುವುದಲ್ಲದೆ, ಅವರ ಮೊಬೈಲ್‌ಗೆ ಸಂದೇಶ ರವಾನೆಯಾಗಲಿದೆ. ಸುಮಾರು 500 ಮೀಟರ್ ದೂರದವರೆಗೂ ವಾಹನದ ನೋಂದಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಕಾಣುವಂತೆ ಸೆರೆ ಹಿಡಿಯುವ ಸಾಮರ್ಥ್ಯ ಹೊಂದಿದ ಎಐ ಆಧಾರಿತ ಕ್ಯಾಮರಾಗಳೂ, ಮೈಸೂರಿನ ಸಂಚಾರ ಸುರಕ್ಷತೆ ಮತ್ತು ಟ್ರಾಫಿಕ್ ರೂಲ್ಸ್ ಅನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಸಹಕಾರಿಯಾಗಲಿವೆ.

ಇಂದು ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ

ಮೈಸೂರು,ಆ.7–ಕಂದಾಯ ಸಚಿವ ಕೃಷ್ಣಭೈರೇಗೌಡರ ಅಧ್ಯಕ್ಷತೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ವಿಪತ್ತು ನಿರ್ವಹಣೆಯ ಪ್ರಧಾನ ಕಾರ್ಯದರ್ಶಿಗಳ ಉಪಸ್ಥಿತಿಯಲ್ಲಿ ಆ.8ರಂದು ಬೆಳಗ್ಗೆ 10.30ಕ್ಕೆ ಪ್ರಾದೇಶಿಕ ಆಯುಕ್ತರ ಕಚೇರಿ ಚಾಮುಂಡೇಶ್ವರಿ ಸಭಾಂಗಣದಲ್ಲಿ ಕಂದಾಯ ಇಲಾಖೆ ವಿವಿಧ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾದಯಾತ್ರೆ ಮೂಲಕ ಅಹವಾಲು ಸ್ವೀಕರಿಸಿದ ಶಾಸಕ ಶ್ರೀವತ್ಸ

ಮೈಸೂರು, ಆ.7 (ಎಸ್‌ಬಿಡಿ)– ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಸೋಮವಾರ ಹಲವೆಡೆ ಪಾದಯಾತ್ರೆ ಮೂಲಕ ಸಾರ್ವಜನಿಕರ ಅಹವಾಲು ಆಲಿಸಿದರು.

ಹುಲ್ಲಿನಬೀದಿ, ಆದಂಖಾನ ಮಸೀದಿ ರಸ್ತೆ, ಹೊಸಕೇರಿ, ಮಧ್ವಾಚಾರ್ ರಸ್ತೆ, ಸೀತಾ ರಾಮರಾವ್ ರಸ್ತೆ, ಬಸವೇಶ್ವರ ರಸ್ತೆ ಮತ್ತಿತರ ಭಾಗದಲ್ಲಿ ಪಾದಯಾತ್ರೆ ನಡೆಸಿದ ಶಾಸಕರು, ಮೂಲಸೌಕರ್ಯಗಳನ್ನು ಸ್ವತಃ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕರನ್ನು ಮಾತನಾಡಿಸಿ, ಸಮಸ್ಯೆ ಆಲಿಸಿದರು.

ರಸ್ತೆ, ಚರಂಡಿ, ನೀರು, ವಿದ್ಯುತ್ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು, ಕೂಡಲೇ ಪರಿಹಾರ ಕ್ರಮ ವಹಿಸುವಂತೆ ಶಾಸಕ ಶ್ರೀವತ್ಸ ಅಧಿಕಾರಿಗಳಿಗೆ ಸೂಚಿಸಿದರು.



ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಸೋಮವಾರ ಹಲವೆಡೆ ಪಾದಯಾತ್ರೆ ಮೂಲಕ ಸಾರ್ವಜನಿಕರ ಅಹವಾಲು ಆಲಿಸಿದರು.

ಮರಗಳ ಟ್ರಿಮ್ಮಿಂಗ್, ಸ್ವಚ್ಛತೆ, ಒಳಚರಂಡಿ ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು. ಈ ವೇಳೆ ಸ್ಥಳದಲ್ಲಿ ಪಾಲಿಕೆ ಸದಸ್ಯೆ ಸೌಮ್ಯ ಉಮೇಶ್, ಒಂದು ತಿಂಗಳೊಳಗೆ ರಸ್ತೆಗೆ ಡಾಂಬರೀಕರಣ ಮಾಡಿಸಿಕೊಡಲಾಗುವುದು ಎಂದು ಶಾಸಕರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಸ್ಥಳೀಯರಾದ ಅರುಣ್, ಗುರುದತ್, ಶಂಕರ್ ಸಿಂಗ್, ದೀನ ಮಣಿ, ಅನ್ನಪೂರ್ಣ, ಕಿಶೋರ್, ಉಷಾ, ಶಂಕರ್, ಉಮೇಶ್, ಅಭಿ, ರವಿನಾಯಕ್, ರವಿಕುಮಾರ್, ನಿತೀಶ್‌ಕುಮಾರ್, ಮಹದೇವ ನಾಯಕ್, ಸೋಮ, ಲೋಕೇಶ್, ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಣಕೊಟ್ಟು ನಗು, ಶಾಂತಿಯನ್ನು ಪಡೆಯುವಂತಾಗಿದೆ

ಮಂಡ್ಯ ಶಾಸಕ ರವಿಕುಮಾರ್ ಗಣಿಗ ವಿಷಾದ

ಮೈಸೂರು,ಆ.7(ಎಸ್‌ಪಿಎನ್)–ಸ್ಪರ್ಧಾತ್ಮಕ ಜಗತ್ತಿನಲ್ಲಿ 'ನಗು' ಮತ್ತು 'ಶಾಂತಿ'ಯನ್ನು ಹಣ ಕೊಟ್ಟು ಪಡೆದುಕೊಳ್ಳಬೇಕಾದ ಪರಿಸ್ಥಿತಿ ಬರುತ್ತಿದೆ ಎಂದು ಮಂಡ್ಯ ಶಾಸಕ ರವಿಕುಮಾರ್ ಗಣಿಗ ವಿಷಾದಿಸಿದರು.

ಮೈಸೂರು ಯಾದವಗಿರಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ಮೈಸೂರು ಘಟಕದ ಜ್ಞಾನಪ್ರಕಾಶ ಭವನದಲ್ಲಿ '2023–24: ಸಕಾರಾತ್ಮಕ ಬದಲಾವಣೆಯ ವರ್ಷ' ಕಾರ್ಯ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ನಮ್ಮ ರಾಜ್ಯದ ಮಠ–ಮಾನ್ಯ ಹಾಗೂ ಬ್ರಹ್ಮಕುಮಾರಿ ಆಶ್ರಮಗಳು ಸದಾ ಒತ್ತಡದಲ್ಲಿರುವ ಜನರಿಗೆ ಮನಃಶಾಂತಿ, ನಗು ಹಾಗೂ ಆಧ್ಯಾತ್ಮಿಕತೆ ಪ್ರಯೋಜನಗಳ ಕುರಿತು ಜಾಗೃತಿ ಮೂಡಿಸುತ್ತಿರುವ ಕಾರ್ಯ ಶ್ಲಾಘನೀಯ. ಈ ದಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಅಕಸ್ಮಾತ್ ಆಶೀರ್ವಾದ ಪಡೆಯಲು ಮೈಸೂರಿಗೆ ಆಗಮಿಸಿದ್ದೆ. ಶ್ರೀಗಳು, ಈ ಕಾರ್ಯಕ್ರಮದಲ್ಲಿರುವುದಾಗಿ ತಿಳಿಸಿ, ಇಲ್ಲಿಗೆ ಬರ ಹೇಳಿದ್ದರಿಂದ ಈ ಕಾರ್ಯಕ್ರಮಕ್ಕೆ ನಾನು ಆಕಸ್ಮಿಕ ಅತಿಥಿಯಾಗಿ ಬಂದಿದ್ದೇನೆ ಎಂದು ತಿಳಿಸಿದರು.

ಯಾರೂ ಏನೇ ಹೇಳಿದರೂ ಭಾರತೀಯ ಪರಂಪರೆಯಲ್ಲಿ ಮಠ–ಮಾನ್ಯಗಳ ಪಾತ್ರ ಹಿರಿದು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಿನ ಅಮೂಲ್ಯ ಕ್ಷಣಗಳನ್ನು ಸ್ಪರ್ಧೆಯ ಅಮಲಿನಲ್ಲಿ ಮೈಮರೆಯುತ್ತಿರುವ ಯುವಕರಿಗೆ, ಇವುಗಳಿಂದ ಮುಕ್ತಿ ಹೊಂದಲು ಜಾಗೃತಿ



ಅಗತ್ಯವಿದೆ. ಈ ಕೆಲಸವನ್ನು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಮ್ಮಿಕೊಂಡಿರುವುದು ಉತ್ತಮ ಸಂಗತಿ ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ಫಿಸಿಷಿಯನ್ ಡಾ.ಶಿಲ್ಪ ಅವರೇಬೀಳ್ ಅವರು 'ರಾಜಯೋಗ' ಶಿಬಿರದ ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ, ವೈದ್ಯಕೀಯ ವೃತ್ತಿಯಲ್ಲಿರುವ ನಾನು ದೈನಂದಿನ ಬದುಕಿನ ಜಂಜಾಟಗಳ ನಡುವೆಯೂ ಕರ್ತವ್ಯಕ್ಕೆ ದಿನನಿತ್ಯ ಹಾಜರಾಗುತ್ತೇನೆ. ಆ ಮನಸ್ಥಿತಿಯಲ್ಲೇ ರೋಗಿಗಳಿಗೆ ಚಿಕಿತ್ಸೆ ನೀಡುತ್ತೇನೆ. ಈ ಮನಸ್ಥಿತಿಯಿಂದ ಹೊರಬಂದು ರೋಗಿಗಳಿಗೆ ಚಿಕಿತ್ಸೆ ನೀಡುವುದು ಹೇಗೆ ಎಂಬುದನ್ನು 'ರಾಜಯೋಗ' ಶಿಬಿರ ಕಲಿಸಿತು. ಹಾಗಾಗಿ ಪ್ರತಿಯೊಬ್ಬರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ನಂತರ ದೆಹಲಿ ಓಂ ಶಾಂತಿ ರಿಟ್ರೀಟ್ ಸೆಂಟರ್ ಅಧ್ಯಕ್ಷರಾದ ರಾಜಯೋಗಿನಿ ಬ್ರಹ್ಮಕುಮಾರಿ(ಬಿಕೆ) ಆಶಾಜಿ ದಿಕ್ಸೂಚಿ ಭಾಷಣ ಮಾಡುತ್ತಾ, ಜಗತ್ತು ಸ್ಪರ್ಧೆಗಳ ಹಿಂದೆ ಓಡುತ್ತಿದೆ. ಜನರನ್ನು ಅದರ ವೇಗಕ್ಕೆ ಓಡುವಂತೆ ಮಾಡಿದೆ. ಈ ಶೈಲಿಗೆ ಜನರು ಹೊಂದಿಕೊಳ್ಳಲಾಗದೆ, ಕೆಲವರು ಬೇರೆಬೇರೆ ಕಾಯಿಲೆಗಳಿಂದ ಬಳಲಿ, ಜೀವನದಲ್ಲಿ ಸಂತೋಷ, ನಗು, ನೆಮ್ಮದಿ ಜೀವನವೇ ಮಾಯವಾಗಿದೆ. ಇವೆಲ್ಲವನ್ನು ಪಡೆದುಕೊಳ್ಳಬೇಕಾದರೆ, ಪ್ರತಿಯೊಬ್ಬರು ಒತ್ತಡದ ಜಗತ್ತಿನಿಂದ ಹೊರಬರಬೇಕು ಹಾಗೂ ವೃತ್ತಿಯಲ್ಲಿ ಶಾಂತಿ ಕಾಪಾಡಿಕೊಳ್ಳಬೇಕು. ಇದರ ಕುರಿತು ರಾಜಯೋಗದಲ್ಲಿ ಅನೇಕ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಇದರಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಈ ವೇಳೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ಮಂಡ್ಯ ಘಟಕದ ಸಂಚಾಲಕಿ ರಾಜಯೋಗಿನಿ ಬಿಕೆ ಶಾರದಾಜಿ ಅವರು ರಾಜ ಯೋಗ ಧ್ಯಾನ ಕುರಿತು ಮಾತನಾಡಿದರು. ರಾಜಯೋಗಿನಿ ಬಿಕೆ ಲಕ್ಷ್ಮೀಜಿ ಅಧ್ಯಕ್ಷೀಯ ನುಡಿಗಳನ್ನಾಡಿದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ದಂತ ವೈದ್ಯೆ ಡಾ.ಶಿಲ್ಪ ಹೆಗಡೆ ದಿವ್ಯಗೀತೆ ಹಾಡಿದರು. ಸಹೋದರ ಬಿ.ಕೆ.ರಾಮಚಂದ್ರರಾವ್ ಗಣ್ಯರನ್ನು ಸ್ವಾಗತಿಸಿದರು. ವಿಶ್ರಾಂತ ಡಿವೈಎಸ್‌ಪಿ ಬಿ.ಕೆ.ಕೃಷ್ಣಮೂರ್ತಿ ವಂದಿಸಿದರು.

> “ನಾವು ದಾರಿಯಲ್ಲಿ ಯಾವುದೋ ಕಾರಣಕ್ಕೆ ನೆಲಕ್ಕೆ ಬಿದ್ದಾಗ ಯಾರಿಗೂ ಕಾಣದಂತೆ ಮೇಲೇಳಬೇಕು. ಅದೇ ರೀತಿ ಜೀವನದಲ್ಲಿ ಒಮ್ಮೆ ಬಿದ್ದಾಗ ಎಲ್ಲರಿಗೂ ಕಾಣುವಂತೆ ಮೇಲೇಳಬೇಕು. ಹಾಗೆಯೇ ಆಧ್ಯಾತ್ಮ ಶಿಬಿರಗಳಲ್ಲಿ 'ಬಿ ಪಾಸಿಟಿವ್' ಎನ್ನುತ್ತಾರೆ. 3 ವರ್ಷಗಳ ಹಿಂದೆ ಈ ಹೆಸರು ಕೇಳಿದರೆ ಜನರು ಬೆಚ್ಚುತ್ತಿದ್ದರು. ಈಗ ದೇಶದಲ್ಲಿ ಆ ಪರಿಸ್ಥಿತಿ ಇಲ್ಲ ಹಾಗಾಗಿ ಎಲ್ಲರೂ 'ಬಿ ಪಾಸಿಟಿವ್' ಎಂದರೆ, ಎಲ್ಲದ್ದಕ್ಕೂ ನಕಾರಾತ್ಮಕವಾಗಿ ಚಿಂತಿಸಬೇಡಿ.
> **–ಸಿ.ಎಸ್. ರಮೇಶ್, ಜಂಟಿ ನಿರ್ದೇಶಕ, ಭೂ ದಾಖಲೆಗಳು ಹಾಗೂ ಪ್ರಾಂಶುಪಾಲ, ಭೂಮಾಪನಾ ತರಬೇತಿ ಸಂಸ್ಥೆ, ಮೈಸೂರು.**

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.8.2023 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** ಪಾಲಿಸಿಸ್ಟಿಕ್ ಓವೇರಿಯನ್ ಸಿಂಡ್ರೋಮ್ ಬಗ್ಗೆ ಉಚಿತ ಸಲಹೆ ಮತ್ತು ಔಷಧ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9 ರಿಂದ.
- **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ–ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಆದ್ಯಗೋವಿಂದಾಚಾರ್ಯ ಅವರಿಂದ ಭಾಗವತ ಸಪ್ತಾಹ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 4.45ರಿಂದ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಮಾಧವಚಾರ್ಯ ಅವರಿಂದ ಕಿಷ್ಕಿಂದಾ ಕಾಂಡ ಕುರಿತು ಪ್ರವಚನ, ಸ್ಥಳ:ವಿದ್ಯಾಪೀಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.
- **ಸುಶೀರ (ಶ್ರೀ ವಿ.ದೇಶಿಕಚಾರ್, ಅಕಾಡೆಮಿ ಆಫ್ ಮ್ಯೂಸಿಕ್):** 21ನೇ ವರ್ಷದ ಸಂಗೀತ ಮಹೋತ್ಸವ, ವಿದ್ವಾನ್ ರಾಜ್‌ಕಮಲ್ ಅವರಿಂದ ಕೊಳಲು ವಾದನ, ವಿದ್ವಾನ್ ಮಾತೂರ ಶ್ರೀನಿಧಿ–ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ತುಮಕೂರು ಬಿ. ಶಶಿಶಂಕರ್–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಗೀತ ಕಲಾನಿಧಿ, ಮೈಸೂರು ಕೆ.ವಾಸುದೇವಚಾರ್ಯ ಭವನ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ. ಹೆಚ್.ವಿ. ನಾಗರಾಜ ರಾವ್, 7.15 ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್.ಎಸ್.ಎಸ್., 8.30 ಕರೆಗೊಂದು ಗೀತೆ, 9.05 ವಸುದೈವ ಕುಟುಂಬಕಂ–ಭಾರತ ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಹೆಚ್.ಕೆ. ನರಸಿಂಹಮೂರ್ತಿ ಮತ್ತು ಹೆಚ್.ಎನ್. ಭಾಸ್ಕರ್–ಯುಗಳ ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00 ವನಿತಾ ವಿಹಾರ, 12.30 ದೇವರನಾಮ–ಮಾನಸ ನಯನ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಸಿ.ವಿಶ್ವನಾಥ್, ವಾಣಿ ಸತೀಶ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ಮಿತಾ ಶ್ರೀಕಿರಣ್ – ವೇಣುವಾದನ, 4.00 ಕಥಾ ಕಾಲಕ್ಷೇಪ ಮಯಾ ಬಜಾರ್ ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ರಂಗನತಿಟ್ಟು ಪಕ್ಷಿಧಾಮದ ಪ್ರಾಮುಖ್ಯತೆ ಕುರಿತು ಸಂವಾದದಲ್ಲಿ ಭಾಗವಹಿಸುವವರು ಸಂತೋಶ್ ಹೂಗಾರ್, ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಸಂಸದ್ ಸಮೀಕ್ಷಾ, 9.30 ಎಂ. ರಾಘವೇಂದ್ರ –ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

ಮೈಸೂರು ಮಿತ್ರ ಮಂಗಳವಾರ 8 ಆಗಸ್ಟ್ 2023

ಜನರ ಸಮಸ್ಯೆ ಹೇಳಿದರೆ ಪರಿಹಾರಕ್ಕೆ ಲಂಡನ್‌ಗೆ ಕಳುಹಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಅಂತಾರೆ...!

ಅಧಿಕಾರಿಗಳ ಕುಂಟುನೆಪಕ್ಕೆ ಶಾಸಕ ಜಿ.ಟಿ.ದೇವೇಗೌಡರ ಆಕ್ರೋಶ

ಮೈಸೂರು, ಆ.7(ಬಿಎಲ್‌ಯು)– ಜನರ ಸಮಸ್ಯೆ ಪರಿಹಾರ ಮಾಡುವಂತೆ ಅಧಿಕಾರಿಗಳಿಗೆ ಹೇಳಿದರೆ, ಅವರು ಎಂತಹ ಬೇಜವಾಬ್ದಾರಿ ಪ್ರತಿಕ್ರಿಯೆ ನೀಡುತ್ತಾರೆ. ಯಾವುದಕ್ಕೂ ಸಕಾರಾತ್ಮಕವಾಗಿ ಸ್ಪಂದಿಸುವ ಗುಣ ಲಕ್ಷಣವೇ ಅಧಿಕಾರಿ ವರ್ಗದಲ್ಲಿಲ್ಲ ಎಂದು ಶಾಸಕ ಜಿ.ಟಿ. ದೇವೇಗೌಡರು ತೀವ್ರ ಬೇಸರ ವ್ಯಕ್ತಪಡಿಸಿದರು.



ಏನಾದರೂ ಜನರ ಸಮಸ್ಯೆ ಹೇಳಿದರೆ ಸಾಕು; ಅದು ಇಲ್ಲಿ ಸಾಧ್ಯವಿಲ್ಲ ಲಂಡನ್‌ಗೆ ಕಳುಹಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಎಂದು ಸಬೂಬು ಹೇಳುತ್ತಾರೆ ಎಂದು ಗೌಡರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ನಗರ ನಾಲ್ಕು ಪಟ್ಟು ಬೆಳೆದಿದೆ. ನನ್ನ ಕ್ಷೇತ್ರದಲ್ಲೇ 300ಕ್ಕೂ ಹೆಚ್ಚು ಬಡಾವಣೆಗಳಿವೆ. ಮೂಲ ಸೌಕರ್ಯ ಇಲ್ಲದ ಕಾರಣ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಪರಿಹಾರ ಮಾಡಲು ನಗರಪಾಲಿಕೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ನಡುವೆ ಸಮನ್ವಯತೆ ಇಲ್ಲ. ಜನರ ಯಾವುದಾದರೂ ಸಮಸ್ಯೆ ಪರಿಹಾರ ಮಾಡಿ ಎಂದು ಹೇಳಿದರೆ, ಲಂಡನ್‌ಗೆ ಕಳುಹಿಸುವಂತೆ ಸಣ್ಣಪುಟ್ಟದ್ದಕ್ಕೆಲ್ಲಾ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಎಂದು ಕುಂಟುನೆಪ ಹೇಳುತ್ತಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಇಂಜಿನಿಯರ್‌ಗಳಂತೂ ಸಮಸ್ಯೆ ಹೇಳಿದ್ರೆ ಮಾತ್ರ ಆ ಸ್ಥಳಕ್ಕೆ ಹೋಗುತ್ತಾರೆ, ಇಲ್ಲ ಅಂದರೆ ಇಲ್ಲ. ಇದರಿಂದ ಸಮಸ್ಯೆಗಳು ಶಾಶ್ವತವಾಗಿ ಬೇರೂರಿದೆ. ಈ ಕಾರಣದಿಂದ ಮಹಾರಾಜರು ಕಟ್ಟಿದ ಮೈಸೂರಿನ ಹಿರಿಮೆ ಹಾಳಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಂಜರಾಜ ಬಹದ್ದೂರ್ ಛತ್ರ ಆವರಣದಲ್ಲಿ ವಾಹನ ನಿಲುಗಡೆ: ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ದೇವರಾಜ ಅರಸ್ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಲು ತೊಂದರೆ ಆಗುತ್ತಿದೆ. ಈ ಕಾರಣದಿಂದ ವಿನೋಬಾ ರಸ್ತೆಯ ನಂಜರಾಜ ಬಹದ್ದೂರ್ ಛತ್ರದ ಹಿಂದಿನ ವಿಶಾಲ ಜಾಗದಲ್ಲಿ ವಾಹನ ನಿಲ್ದಾಣಕ್ಕೆ ಅವಕಾಶ ಮಾಡಿಕೊಡಬಹುದು. ಇದರಿಂದ ನಂಜರಾಜ ಬಹದ್ದೂರ್ ಛತ್ರಕ್ಕೂ ಆದಾಯ ಬರುತ್ತದೆ ಎಂದು ಡಿಸಿ ಡಾ.ರಾಜೇಂದ್ರ ಮಾಡಿದ ಪ್ರಸ್ತಾಪಕ್ಕೆ ಡಾ.ಮಹದೇವಪ್ಪ ಸೇರಿದಂತೆ ಶಾಸಕರು ಸಮ್ಮತಿಸಿದರು.

ಬೃಹತ್ ಮೈಸೂರು ಪಾಲಿಕೆ ಮಾಡಿ; ಎ, ಬಿ ಖಾತೆ ನೀಡಿದರೆ ಆದಾಯ ಬರುತ್ತೆ...

ಮೈಸೂರು,ಆ.7–ಬೃಹತ್ ಮೈಸೂರು ಮಹಾನಗರ ಪಾಲಿಕೆಯಾಗಿ ರೂಪಿಸಿ, ಬಿಬಿಎಂಪಿ ಮಾದರಿಯಲ್ಲಿ ಆಸ್ತಿಗಳಿಗೆ ಎ ಮತ್ತು ಬಿ ಖಾತೆ ನೀಡುವ ವ್ಯವಸ್ಥೆ ಜಾರಿಗೊಳಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಆಗ್ರಹಿಸಿದರು. ನಗರದ ಸುತ್ತ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ 300ಕ್ಕೂ ಹೆಚ್ಚು ಬಡಾವಣೆಗಳಿದ್ದು, ಇವುಗಳ ಅಭಿವೃದ್ಧಿಗೆ ಸರ್ಕಾರವಾಗಲೀ, ಪಾಲಿಕೆಯಾಗಲೀ ಅಥವಾ ಮೈಸೂರು ನಗಾರಾಭಿವೃದ್ಧಿ ಪ್ರಾಧಿಕಾರವಾಗಲೀ ಅನುದಾನ ನೀಡುವುದಿಲ್ಲ. ಹಾಗಾಗಿ ಬೃಹತ್ ಮಹಾನಗರ ಪಾಲಿಕೆಯಾಗಿ ವಿಸ್ತರಿಸಿ, ಆಸ್ತಿಗಳಿಗೆ ಎ ಮತ್ತು ಬಿ ಖಾತೆ ನೀಡಬೇಕು. ಅಧಿಕೃತ ಖಾತೆ ಸಿಕ್ಕರೆ ಬ್ಯಾಂಕ್ ಸಾಲ ಇನ್ನಿತರ ಸೌಲಭ್ಯ ಪಡೆಯಲು ಸಾಧ್ಯವಾಗುತ್ತದೆ. ಈ ಮೂಲಕ ತೆರಿಗೆಯನ್ನೂ ಸಂಗ್ರಹಿಸಬಹುದು. ಕಾಂಗ್ರೆಸ್ ಸರ್ಕಾರ ಬಂದರೆ ಖಂಡಿತ ಬೃಹತ್ ಮೈಸೂರು ನಗರ ಪಾಲಿಕೆ ಮಾಡುವುದಾಗಿ ಹೇಳಲಾಗಿತ್ತು. ಈಗ ಕಾಂಗ್ರೆಸ್ ಸರ್ಕಾರವೇ ಇರುವುದರಿಂದ ಇದನ್ನು ಸಾಕಾರಗೊಳಿಸಬೇಕು. ಈ ಸಂಬಂಧ ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೂ ಮನವಿ ಸಲ್ಲಿಸಿದ್ದೇನೆ ಎಂದು ಜಿಟಿಡಿ ತಿಳಿಸಿದರು.

ಲೋಕಸಭಾ ಚುನಾವಣೆಗೆ ಹೆಚ್.ವಿಶ್ವನಾಥ್ ಕಾಂಗ್ರೆಸ್ ಟಿಕೆಟ್ ಕೇಳಿರುವುದರಲ್ಲಿ ತಪ್ಪೇನಿಲ್ಲ

- ಮೈಸೂರು ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಭಿಮತ
- ನಾನು ಆಕಾಂಕ್ಷಿ ಅಂತ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಲ್ಲ
- ಆದರೆ ನನ್ನ ಮಗ ಸುನೀಲ್ ಬೋಸ್ ಚಾ.ನಗರ ಪ್ರಬಲ ಆಕಾಂಕ್ಷಿ
- ಸ್ಪರ್ಧೆ ಮಾಡುವಂತೆ ಸಚಿವರಿಗೆ ಸೂಚನೆ ಬಂದಿಲ್ಲ
- ಬಿಜೆಪಿ, ಜೆಡಿಎಸ್ ರಾಜಕೀಯ ನಾಟಕ ಮಾಡುತ್ತಿದೆ

ಮೈಸೂರು,ಆ.7(ಬಿಎಲ್‌ಯು)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಕೇಳಿರುವುದರಲ್ಲಿ ತಪ್ಪೇನಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನಾನು ಕೂಡ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂದು ವಿಶ್ವನಾಥ್ ಹೇಳಿದ್ದಾರೆ. ಹಿರಿಯ ರಾಜಕಾರಣಿಯಾಗಿರುವ ವಿಶ್ವನಾಥ್ ಟಿಕೆಟ್ ಕೇಳಿರುವುದರಲ್ಲಿ ತಪ್ಪಿಲ್ಲ. ಆದರೆ ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ಈ ಬಗ್ಗೆ ತೀರ್ಮಾನ ಮಾಡುತ್ತದೆ ಎಂದರು.

ವಿಶ್ವನಾಥ್ ಇನ್ನು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡದೆ ಕಾಂಗ್ರೆಸ್ ಟಿಕೆಟ್ ಕೇಳುತ್ತಿರುವ ಬಗ್ಗೆ ಸ್ಪಷ್ಟನೆ ನೀಡಿದ ಡಾ.ಮಹದೇವಪ್ಪ, ಸಮಯ ಬಂದಾಗ ಇಂತಹ ತಾಂತ್ರಿಕ ವಿಚಾರಗಳನ್ನು ಚರ್ಚೆ ಮಾಡಲಾಗುವುದು ಎಂದು ಹೇಳಿದರು.

ಲೋಕಸಭಾ ಚುನಾವಣೆಯ ಆಕಾಂಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಎಲ್ಲೂ ಹೇಳಿಲ್ಲ. ಮಾಧ್ಯಮದಲ್ಲಿ ಇಂತಹ ವಿಚಾರಗಳು ಪ್ರಸ್ತಾಪವಾಗುತ್ತಿದೆಯಷ್ಟೆ ಎಂದರು.

ನನ್ನ ಮಗ ಸುನೀಲ್ ಬೋಸ್ ಚಾಮರಾಜನಗರ ಲೋಕಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿದ್ದಾನೆ. ಮೂರು ಚುನಾವಣೆಯಲ್ಲಿ ಟಿಕೆಟ್ ಕೈತಪ್ಪಿದರೂ ಪಕ್ಷ ಸಂಘಟನೆಗಾಗಿ ದುಡಿದಿದ್ದಾನೆ. ಈ ಹಿನ್ನೆಲೆಯಲ್ಲಿ ಈಗ ಟಿಕೆಟ್ ಕೇಳುತ್ತಿದ್ದಾನೆ. ಆದರೆ ಹೈಕಮಾಂಡ್ ಈ ಬಗ್ಗೆ ನಿರ್ಧಾರ ಮಾಡುತ್ತದೆ ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.



ಲೋಕಸಭಾ ಚುನಾವಣೆಯಲ್ಲಿ ಹಾಲಿ ಸಚಿವರನ್ನು ಸ್ಪರ್ಧೆಗಿಳಿಸುವ ಬಗ್ಗೆ ಪಕ್ಷದ ವೇದಿಕೆಯಲ್ಲಿ ಯಾವ ಚರ್ಚೆಯೂ ನಡೆದಿಲ್ಲ. ಸ್ಪರ್ಧೆ ಮಾಡುವಂತೆ ನಮಗೆ ಕೂಡ ಸೂಚನೆ ಬಂದಿಲ್ಲ. ಈ ಬಗ್ಗೆ ಕೆಲವು ಮಾಧ್ಯಮಗಳಲ್ಲಿ ಇಂತಹ ಸುದ್ದಿ ಬರುತ್ತಿದೆಯಷ್ಟೆ, ಕೆಲವು ಚರ್ಚೆಗಳು ನಮ್ಮ ಗಮನಕ್ಕೆ ಬಂದಿಲ್ಲ, ಆದರೆ ನಿಮಗೆ ಹೇಗೆ ತಿಳಿಯಿತೋ ಗೊತ್ತಿಲ್ಲ ಎಂದು ಸಚಿವರು ಹೇಳಿದರು.

ಬಿಜೆಪಿಯಿಂದಲೇ ದುರುಪಯೋಗ: ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟಿರುವ ಹಣವನ್ನು ರಾಜ್ಯ ಸರ್ಕಾರ ಬೇರೆ ಉದ್ದೇಶಗಳಿಗೆ ಬಳಕೆ ಮಾಡಿಕೊಂಡಿಲ್ಲ. ಆದರೆ ಬಿಜೆಪಿ ಸರ್ಕಾರ ಎಸ್‌ಸಿ–ಎಸ್‌ಟಿ ಕಲ್ಯಾಣ ಯೋಜನೆಗೆ ಮೀಸಲಿಟ್ಟ 10 ಸಾವಿರ ಕೋಟಿ ರೂಪಾಯಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಂಡಿತ್ತು. ಆದರೆ ಈಗ ನಮ್ಮ ಮೇಲೆ ಆಧಾರರಹಿತ ಆರೋಪ ಮಾಡುತ್ತಾ ರಾಜಕೀಯ ನಾಟಕವಾಡುತ್ತಿದ್ದಾರೆ. ತಾವೇ ತಪ್ಪು ಮಾಡಿ, ಮತ್ತೊಬ್ಬರು ತಪ್ಪು ಮಾಡುತ್ತಿದ್ದಾರೆಂದು ಆರೋಪ ಮಾಡಲು ಇವರಿಗೆ ನಾಚಿಕೆ ಆಗಬೇಕು ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರಿಗೆ ಡಾ.ಮಹದೇವಪ್ಪ ತಿರುಗೇಟು ನೀಡಿದರು.

ಸೆ.1ರಿಂದ ಗಜಪಯಣ



ವಿಶ್ವ ವಿಖ್ಯಾತ ಮೈಸೂರು ದಸರಾದ ಪ್ರಮುಖ ಪ್ರಕ್ರಿಯೆ ಗಜಪಯಣ ಕಾರ್ಯಕ್ರಮ ಸೆಪ್ಟೆಂಬರ್ 1ರಂದು ಹುಣಸೂರಿನ ವೀರನಹೊಸಳ್ಳಿಯಲ್ಲಿ ನಡೆಯಲಿದೆ. ಸೂಕ್ತವೆಂದು ಗುರುತಿಸಿದ 14 ಆನೆಗಳು ಗಜಪಯಣದಲ್ಲಿ ಭಾಗವಹಿಸುತ್ತವೆ. ಅದ್ಧೂರಿ ದಸರಾ ಆಚರಣೆಗೆ ಅವಶ್ಯವಿರುವ ಅನುದಾನ ನೀಡುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಆದರೆ ದಸರಾ ಉದ್ಘಾಟಕರು ಯಾರೆಂದು ತೀರ್ಮಾನ ಮಾಡುವ ಅಧಿಕಾರವನ್ನು ಸಿದ್ದರಾಮಯ್ಯ ಅವರಿಗೆ ನೀಡಲಾಗಿದೆ ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.

ಸ್ಪಂದನಾ ಸಾವಿಗೆ ಕಂಬನಿ: ಸ್ಯಾಂಡಲ್‌ವುಡ್ ನಟ ವಿಜಯ ರಾಘವೇಂದ್ರ ಅವರ ಪತ್ನಿ ಸ್ಪಂದನಾ ನಿಧನಕ್ಕೆ ಸಚಿವ ಡಾ.ಮಹದೇವಪ್ಪ ಸಂತಾಪ ಸೂಚಿಸಿದರು. ಸ್ಪಂದನಾ ಸಾವಿನ ದುಃಖ ಭರಿಸುವ ಶಕ್ತಿಯನ್ನು ದೇವರು ಅವರ ಕುಟುಂಬಕ್ಕೆ ನೀಡಲಿ ಎಂದರು.

ಉಡುಪಿ: ಪ್ಯಾರಾ ಮೆಡಿಕಲ್ ಕಾಲೇಜು ಶೌಚಾಲಯದಲ್ಲಿ ವಿಡಿಯೋ ಪ್ರಕರಣ ಸಿಐಡಿಗೆ

ಬೆಂಗಳೂರು: ಉಡುಪಿಯ ನೇತ್ರಾ ಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ವಿಡಿಯೋ ರೆಕಾರ್ಡ್ ಮಾಡಿದ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿ ಸೋಮವಾರ ಆದೇಶ ಹೊರಡಿಸಿದೆ.

ಈ ಸಂಬಂಧ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಡುಪಿಯ ಖಾಸಗಿ ಕಾಲೇಜಿನ ಶೌಚಾಲಯದಲ್ಲಿ ವಿಡಿಯೋ ಚಿತ್ರೀಕರಣ ನಡೆಸಲಾಗಿದೆ ಎಂಬ ಆರೋಪವಿದ್ದು, ಇದು ಸೂಕ್ಷ್ಮ ಪ್ರಕರಣವಾಗಿರುವುದರಿಂದ ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಸಿ.ಐ.ಡಿಗೆ ವಹಿಸಿ ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ಕಾಲೇಜಿನ ಶೌಚಾಲಯದಲ್ಲಿ ಹಿಂದೂ ಯುವತಿಯ ವಿಡಿಯೋ ಮಾಡಿದ ಆರೋಪದ ಮೇಲೆ ಶಬನಾಜ್, ಅಲ್ಫಿಯಾ, ಅಲಿಮಾತುಲ್ ಶಾಫಿಯಾ ವಿರುದ್ಧ ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಮೂವರು ಆರೋಪಿಗಳು ಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ.

ದೇಶದಲ್ಲಿ ಅತೀ ಹೆಚ್ಚು ಆದಾಯ ತರುವ ಸ್ಮಾರಕವಾಗಿ ಹೊರಹೊಮ್ಮಿದ ತಾಜ್‌ಮಹಲ್

ನವದೆಹಲಿ: ಪ್ರೇಮಸೌಧ ತಾಜ್ ಮಹಲ್ ಪ್ರವಾಸಿಗರ ಆಕರ್ಷಣೆಯಲ್ಲಿ ಮುಂಚೂಣಿಯಲ್ಲಿದ್ದು, ದೇಶದಲ್ಲಿಯೇ ಅತೀ ಹೆಚ್ಚು ಆದಾಯ ತರುವ ಸ್ಮಾರಕವಾಗಿ ಹೊರಹೊಮ್ಮಿದೆ. ಪ್ರವಾಸೋದ್ಯಮ ಸಚಿವಾಲಯದ ಅಂಕಿಅಂಶಗಳ ಪ್ರಕಾರ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ASI) ಮಾರಾಟ ಮಾಡಿದ ಟಿಕೆಟ್‌ನಿಂದ ತಾಜ್‌ಮಹಲ್ ಈ ವರ್ಷ 81.89 ಕೋಟಿ ರೂ. ಆದಾಯ ಗಳಿಸಿದೆ. 2022–23ರಲ್ಲಿ ತಾಜ್‌ಮಹಲ್ 81.89 ಕೋಟಿ ರೂ. ಆದಾಯ ಗಳಿಸಿದೆ. ಇದು ಎಎಸ್‌ಐನ ಒಟ್ಟು ಟಿಕೆಟ್(252.85 ಕೋಟಿ ರೂ.) ಮಾರಾಟದ ಸುಮಾರು ಮೂರನೇ ಒಂದು ಭಾಗದಷ್ಟು ಎಂದು ಅಂಕಿ ಅಂಶಗಳು ಬಹಿರಂಗಪಡಿಸಿವೆ. ಆದಾಗ್ಯೂ, ಇದು ಕೋವಿಡ್‌ಗೂ ಮೊದಲು ದಾಖಲಿಸಿದ ಗರಿಷ್ಠ ವಾರ್ಷಿಕ ಆದಾಯ 106.83 ಕೋಟಿಗಿಂತ ಇನ್ನೂ ಕಡಿಮೆಯಾಗಿದೆ.



ಸಾಂಕ್ರಾಮಿಕ ರೋಗದಿಂದಾಗಿ 2021–22ರ ಅವಧಿಯಲ್ಲಿ ದೇಶಕ್ಕೆ ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡದೆ ತಾಜ್‌ಮಹಲ್ ಆದಾಯ 11.29 ಕೋಟಿಗೆ ಕುಸಿದಿತ್ತು. ಕೋವಿಡ್ ನಂತರ ಪ್ರೇಮ ಸೌಧಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, 2022–23ರಲ್ಲಿ ಟಿಕೆಟ್ ಮಾರಾಟದಿಂದ 81.89 ಕೋಟಿ ರೂ. ಆದಾಯ ಗಳಿಸಿದೆ. 2022–23ರಲ್ಲಿ ಕೇವಲ 15.32 ಕೋಟಿ ರೂ.ಗಳನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾದ ಅದೇ ನಗರದ ಆಗ್ರಾ ಕೋಟೆ ಆದಾಯ ಗಳಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ. 3ನೇ ಸ್ಥಾನದಲ್ಲಿರುವ ದೆಹಲಿಯ ಕುತುಬ್ ಮಿನಾರ್ 12.97 ಕೋಟಿ ಆದಾಯ ಗಳಿಸಿದೆ. ದೆಹಲಿಯ ಕೆಂಪು ಕೋಟೆ 12.88 ಕೋಟಿ ರೂ. ಆದಾಯ ಗಳಿಸಿದೆ.

ಒಳಚರಂಡಿ ನೀರು ಕಾವೇರಿ ನದಿ ಸೇರುತ್ತಿದೆ

- ಶಾಸಕ ತನ್ವೀರ್ ಸೇಠ್ ತೀವ್ರ ಆತಂಕ
- ವಾಸ್ತವ ಸ್ಥಿತಿ ತಿಳಿದರೆ ಜನರು ಒಂದು ತೊಟ್ಟು ನೀರು ಕುಡಿಯಲ್ಲ

ಮೈಸೂರು, ಆ.7(ಬಿಎಲ್‌ಯು)– ಮೈಸೂರು ನಗರದ ಒಳ ಚರಂಡಿ ನೀರು ಕಾವೇರಿ ನದಿ ಸೇರುತ್ತಿದ್ದು, ವಾಸ್ತವ ಪರಿಸ್ಥಿತಿ ತಿಳಿದರೆ ಜನರು ಒಂದು ತೊಟ್ಟು ನೀರು ಕುಡಿಯುವುದಿಲ್ಲ ಎಂದು ಶಾಸಕ ತನ್ವೀರ್ ಸೇಠ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ನಗರಕ್ಕೆ 240 ಎಂಎಲ್‌ಡಿ ಕುಡಿಯುವ ನೀರು ಸರಬರಾಜಾಗುತ್ತಿದೆ. ಇದರಿಂದ ಶೇ.80ರಷ್ಟು ಒಳಚರಂಡಿ ನೀರು ಎಸ್‌ಟಿಪಿ ಪ್ಲಾಂಟ್‌ಗೆ ಬರಬೇಕು. ಆದರೆ ಒಳಚರಂಡಿ ಶುದ್ಧೀಕರಣ ಘಟಕ ಎಸ್‌ಟಿಪಿ ಪ್ಲಾಂಟ್‌ಗೆ 162 ಎಂಎಲ್‌ಡಿ ನೀರು ಮಾತ್ರ ಸಂಗ್ರಹವಾಗುತ್ತಿದೆ. ಉಳಿದ ಒಳಚರಂಡಿ ನೀರು ರಾಜಕಾಲುವೆ ಹಾಗೂ ಮೋರಿಗಳ ಮೂಲಕ ಕಾವೇರಿ ನದಿ ಹಾಗೂ ಕೆರೆ ಸೇರುತ್ತಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು.



ಒಳಚರಂಡಿ ನೀರು ಕಾವೇರಿ ನದಿ ಸೇರುತ್ತಿರುವ ಕೆಟ್ಟ ಸ್ಥಿತಿ ತಿಳಿದರೆ ಜನರು ಒಂದು ತೊಟ್ಟು ನೀರು ಕುಡಿಯುವುದಿಲ್ಲ ಎಂದ ತನ್ವೀರ್ ಸೇಠ್, ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ವಿವರಿಸಿದರು. ಮೈಸೂರು ನಗರ ಸ್ವಚ್ಛ ನಗರ ಎಂಬ ಹೆಸರು ಪಡೆದಿದೆ. ಆದರೆ ಇಲ್ಲಿನ ಕೆಟ್ಟ ಪರಿಸ್ಥಿತಿ ಈ ಪ್ರಖ್ಯಾತಿಯನ್ನು ಅಣಕಿಸುತ್ತಿದೆ. ಈ ಹಿನ್ನೆಲೆಯಲ್ಲಿ ಹಸಿರು ನ್ಯಾಯಾಧೀಕರಣ ನೋಟಿಸ್ ಕೂಡ ನೀಡಿ ದಂಡ ಕೂಡ ವಿಧಿಸಿದೆ. ಈ ದಂಡದ ಹಣದಲ್ಲೇ ಯೋಜನೆ ರೂಪಿಸಬಹುದು. ಸಮಸ್ಯೆ ಕೂಡಲೇ ಸರಿಪಡಿಸದಿದ್ದರೆ ನದಿ ನೀರು ಪೂರ್ಣವಾಗಿ ಕಲುಷಿತವಾಗುತ್ತದೆ ಎಂದು ತನ್ವೀರ್ ಸೇಠ್ ಎಚ್ಚರಿಸಿದರು.

ಜೆಪಿ ನಡ್ಡಾ ವಿರುದ್ಧ ಎಫ್‌ಐಆರ್ ರದ್ದು

ಬೆಂಗಳೂರು: ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ವಿರುದ್ಧದ ಎಫ್‌ಐಆರ್ ಅನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದೆ. ಮೇ ತಿಂಗಳಲ್ಲಿ ನಡೆದ ಕರ್ನಾಟಕ ಚುನಾವಣೆ ಸಂದರ್ಭದಲ್ಲಿ ಮಾಡಿದ್ದ ಭಾಷಣದಲ್ಲಿ ಚುನಾವಣಾ ನೀತಿಸಂಹಿತೆ ಉಲ್ಲಂಘನೆ ಮಾಡಿದ ಆರೋಪದಡಿ ನಡ್ಡಾ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿಯ ಐಬಿ ವೃತ್ತದಲ್ಲಿ ಮೇ 7ರಂದು ಮಾತನಾಡಿದ್ದ ಜೆಪಿ ನಡ್ಡಾ, ರಾಜ್ಯದಲ್ಲಿ ಬಿಜೆಪಿ ಚುನಾವಣೆ ಸೋತರೆ, ರಾಜ್ಯ ಕೇಂದ್ರದ ಯೋಜನೆಗಳಿಂದ ವಂಚಿತವಾಗುತ್ತದೆ ಎಂದು ಹೇಳಿದ್ದರು. ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಕಿಸಾನ್ ನಿಧಿಯಂತಹ ಕೇಂದ್ರ ಸರ್ಕಾರದ ಯೋಜನೆಗಳನ್ನು ಸ್ಥಗಿತಗೊಳಿಸಲಾಗುತ್ತದೆ ಎಂದೂ ನಡ್ಡಾ ಹೇಳಿದ್ದರು. ಈ ವಿಭಾಗದ ಚುನಾವಣಾ ಅಧಿಕಾರಿಗಳು ಹರಪನಹಳ್ಳಿಯ ಪೊಲೀಸ್ ಠಾಣೆಯಲ್ಲಿ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ ನಡ್ಡಾ ವಿರುದ್ಧ ಪ್ರಕರಣ ದಾಖಲಿಸಿದ್ದರು. ತಮ್ಮ ವಿರುದ್ಧದ ತನಿಖೆ ಯನ್ನು ರದ್ದುಗೊಳಿಸಬೇಕೆಂದು ನಡ್ಡಾ ಹೈಕೋರ್ಟ್ ಮೊರೆ ಹೋಗಿದ್ದರು.






ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಆ.7– ಬನ್ನೂರು ಪಟ್ಟಣ ಪಂಚಾಯಿತಿ 2023–24ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಹಾಗೂ ಪಟ್ಟಣ ಪಂಚಾಯಿತಿ ಅನುದಾನದಲ್ಲಿ ಶೇ.24.10, ಶೇ.7.25 ವಿವಿಧ ಯೋಜನೆಗಳಿಗೆ ವಿವಿಧ ವೈಯಕ್ತಿಕ ಸೌಲಭ್ಯವನ್ನು ಕಲ್ಪಿಸಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 20 ಕೊನೆ ದಿನ. ಸಂಬಂಧಿತ ದಾಖಲೆಗಳೊಂದಿಗೆ ಪಟ್ಟಣ ಪಂಚಾಯಿತಿ ಕಾರ್ಯಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಯೋಜನಾ ಶಾಖೆಯನ್ನು ಸಂಪರ್ಕಿಸಬಹುದು.

ರಾಮಮಂದಿರ ನಿರ್ಮಾಣವಾದರೆ ಸಾಲದು ರಾಮರಾಜ್ಯ ನಿರ್ಮಾಣವಾಗಬೇಕು

ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳ ಆಶಯ



ಮೈಸೂರು,ಆ.7(ಆರ್‌ಕೆ)–ಮಕರ ಸಂಕ್ರಾಂತಿ (2024ರ ಜ.15) ನಂತರ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀರಾಮಮಂದಿರದ ಗರ್ಭಗುಡಿಯಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪಿಸಿ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು ತಿಳಿಸಿದ್ದಾರೆ.

ಮೈಸೂರಿನ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ ವ್ರತಾಚರಣೆಯಲ್ಲಿರುವ ಶ್ರೀಗಳು ಸೋಮವಾರ ಮಾಧ್ಯಮ ಪ್ರತಿನಿಧಿಗಳನ್ನು ಮಂತ್ರಾಕ್ಷತೆಯೊಂದಿಗೆ ಆಶೀರ್ವದಿಸಿದ ವೇಳೆ ಮಾತನಾಡುತ್ತಿದ್ದರು. ಈಗಾಗಲೇ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, 2024ರ ಜನವರಿ 15ರ ನಂತರ ಗರ್ಭಗುಡಿಯಲ್ಲಿ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆಗೆ ಪ್ರಧಾನಮಂತ್ರಿಗಳ ದಿನಾಂಕಕ್ಕಾಗಿ ಕೋರಲಾಗಿದೆ ಎಂದರು.

ಹೊರಾಂಗಣ ಕಾಮಗಾರಿ ಮುಂದುವರಿಯಲಿದ್ದು, ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ ಎಂದ ಶ್ರೀಗಳು, ಕೇವಲ ರಾಮಮಂದಿರ ನಿರ್ಮಾಣವಾದರೆ ಸಾಲದು, ರಾಮ ರಾಜ್ಯ ನಿರ್ಮಾಣವಾಗಬೇಕು ಎಂಬುದು ಎಲ್ಲರ ಆಶಯವಾಗಿದೆ ಎಂದರು.

ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ತಮ್ಮ ಕ್ಷೇತ್ರದಲ್ಲಿ ಸಮಾಜಕ್ಕೆ ಕೈಲಾದ ಸಹಾಯ ಮಾಡಿದರೆ ಸಾಕು, ರಾಮರಾಜ್ಯದ ಕಲ್ಪನೆ ನನಸಾಗಲಿದೆ. ರಾಮ ಭಕ್ತಿ, ದೇಶ ಭಕ್ತಿ ಎರಡೂ ಒಂದೇ. ಬಡವರು, ಅಸಹಾಯಕರು, ಸಂಕಷ್ಟದಲ್ಲಿರುವವರಿಗೆ ಅವರವರ ಸಾಮರ್ಥ್ಯಕ್ಕನುಗುಣವಾಗಿ ಸೀಮಿತ ಪರಿಮಿತಿಯಲ್ಲಿ ನೆರವಾಗುವುದೇ ರಾಮ ಸೇವೆ ಎಂದೂ ಅವರು ಇದೇ ಸಂದರ್ಭ ನುಡಿದರು.

ಶ್ರೀ ಮಠದಿಂದ ಪ್ರತೀ ಜಿಲ್ಲೆಯಲ್ಲೂ ಗೋಶಾಲೆ ತೆರೆಯಲುದ್ದೇಶಿಸಲಾಗಿದೆ. ಆ ಮೂಲಕ ಗೋವುಗಳನ್ನು ರಕ್ಷಿಸುವ ಅಪೇಕ್ಷೆ ಇದೆ ಎಂದ ಶ್ರೀಗಳು, ಸಮಾಜದಲ್ಲಿ ಇಂದು ಅನೇಕ ಬಗೆಯ ಗೊಂದಲಗಳೂ ಸೃಷ್ಟಿಯಾಗಿವೆ. ಹಿಂಸೆಯ ವೈಭವೀಕರಣವಾಗುತ್ತಿದೆ. ವಿದೇಶಗಳಲ್ಲಿ ಅಪರಾಧ ಮಾಡಲು ಹೆದರುತ್ತಾರೆ. ಆದರೆ, ನಮ್ಮಲ್ಲಿ ಕಾನೂನಿನ ಬಗ್ಗೆ ಭಯವೇ ಇಲ್ಲದಂತಾಗಿದೆ ಎಂದು ಅವರು ಹೇಳಿದರು.

ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಹಾಗೂ ಪತ್ರಿಕಾರಂಗಗಳು ಸಮರ್ಥವಾಗಿ ಕಾರ್ಯವಹಿಸಿದಲ್ಲಿ ಜನರ ವಿಶ್ವಾಸ ಗಳಿಸಿ, ಸಾಮರಸ್ಯ ಗಟ್ಟಿಗೊಳಿಸಬಹುದಾಗಿದೆ. ಮಣಿಪುರ ಘಟನೆ ಏಕೆ ಇಷ್ಟು ದೊಡ್ಡದಾಯಿತೆಂಬುದು ಗೊತ್ತಿಲ್ಲ. ಆದರೆ ತಾವು ಶಾಂತಿ ಸ್ಥಾಪನೆಗೆ ಮಧ್ಯೆ ಪ್ರವೇಶಿಸಲು ಸಿದ್ಧರಿದ್ದೇವೆ. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಅನುಮತಿ ನೀಡಿದಲ್ಲಿ ಮಣಿಪುರ ಘಟನೆ ಸಂಬಂಧ ಮಧ್ಯ ಪ್ರವೇಶಿಸಿ ಶಾಂತಿ ಸ್ಥಾಪಿಸಲು ಮುಂದಾಗುವುದಾಗಿಯೂ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು ನುಡಿದರು. ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಧರ್ಮದತ್ತಿ ಅಧ್ಯಕ್ಷ ರವಿ ಶಾಸ್ತ್ರಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಆರ್.ತಂತ್ರಿ, ನಗರ ಕಾರ್ಯದರ್ಶಿ ಪಿ.ರಂಗಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಮೂರ್ತಿ ಜುಪ್ತಿಮಠ, ಆರ್.ಕೃಷ್ಣ, ಮಾಚಮ್ಮ ಮಲ್ಲಿಗೆ, ರಾಜ್ಯ ಸಮಿತಿ ಸದಸ್ಯ ರಾಘವೇಂದ್ರ, ಹಿರಿಯ ಪತ್ರಕರ್ತರಾದ ಮೂಗೂರು ನಂಜುಂಡಸ್ವಾಮಿ, ಮಹೇಶ, ಆಕಾಶವಾಣಿ ವರದಿಗಾರ ನಂಜುಂಡಸ್ವಾಮಿ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

(ಏಳೆಂಟು ಜನ ಜೂಜು ಆಡುತ್ತಾ ಕುಳಿತಿದ್ದರು. ಪೊಲೀಸ್ ಜೀಪು ಅಲ್ಲಿ ವೇಗವಾಗಿ ಬಂದು ನಿಂತಿತು. ಜೂಜು ಆಡುತ್ತಾ ಕುಳಿತಿದ್ದವ ಓಡಿಹೋಗಿ ಪೊಲೀಸ್ ಜೀಪಿನಲ್ಲಿ ಕುಳಿತುಬಿಟ್ಟ).

ಪೊಲೀಸ್ : ನಾವು ಹಿಡಿಯೋದಕ್ಕಿಂತ ಮುಂಚೆಯೇ ಜೀಪ್ ಹತ್ತಿದ್ಯಲ್ಲೋ?

ಕೋಲ್ಯ : ಹಿಂದಿನ ಸರ್ತಿ ನೀವು ನಮ್ಮನ್ನೆಲ್ಲ ಹಿಡಿದಾಗ, ನನಗೆ ಕೂರೋದಕ್ಕೆ ಜಾಗ ಇರಲಿಲ್ಲ. ಜೀಪಲ್ಲಿ ನಿಂತ್ಕೊಂಡೇ ಸ್ಟೇಷನ್‌ಗೆ ಹೋಗಬೇಕಾಯಿತು ಅದಕ್ಕೆ!

ಮೈಸೂರು ಮಿತ್ರ

ಮಂಗಳವಾರ, 8 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸೂಚನೆ : ಶಾಲೆ ತರಗತಿಯಲ್ಲಿ ಕೊನೆಗೊಳ್ಳುತ್ತದೆ. ಆದರೆ ಅಲ್ಲಿ ಕಲಿಯುವ ಶಿಕ್ಷಣ ನಮ್ಮ ಬದುಕಿನೊಂದಿಗೆ ಕೊನೆಗೊಳ್ಳುತ್ತದೆ. –ಫ್ರೆಡರಿಕ್ ರಾಬರ್ಟಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಂದು ಹೊತ್ತು ಉಂಡವ ಯೋಗಿ, ಎರಡು ಹೊತ್ತು ಉಂಡವ ಭೋಗಿ, ಮೂರು ಹೊತ್ತು ಉಂಡವ ರೋಗಿ, ನಾಲ್ಕು ಹೊತ್ತು ಉಂಡವನ್ನ ಹೊತ್ತುಕೊಂಡು ಹೋಗಿ

ನಿಮ್ಮ ಪತ್ರಗಳು

ಚಂದ್ರನ ಕಕ್ಷೆಗೆ ಚಂದ್ರಯಾನ–3

ಮಾನ್ಯರೆ,

ಭಾರತದ ಮಹತ್ವಾಕಾಂಕ್ಷೆಯ ಚಂದ್ರಯಾನ –3 ಚಂದ್ರನ ಕಕ್ಷೆಗೆ ಸೇರಿದ್ದು, ಚಂದ್ರಯಾನದ ಯಶಸ್ವಿ 23 ದಿನಗಳನ್ನು ಪೂರೈಸಿರುವುದು ಇಸ್ರೋದ ಖ್ಯಾತಿಗೆ ಮತ್ತೊಂದು ಗರಿ ಮೂಡಿದಂತಾಗಿದೆ.ಚಂದ್ರಯಾನ –3 ರ ವೆಚ್ಚ ಕೇವಲ 615 ಕೋಟಿ ಇಷ್ಟು ಕಡಿಮೆ ವೆಚ್ಚದಲ್ಲಿ ಚಂದ್ರನ ದಕ್ಷಿಣಕ್ಕೆ ಯಾತ್ರೆ ಕೈಗೊಂಡಿರುವುದು ಇಸ್ರೋ ಸಂಸ್ಥೆಯ ಕುಶಲತೆಗೆ ಹಿಡಿದ ಕನ್ನಡಿಯಾಗಿದೆ.

ಒಂದು ಹಾಲಿವುಡ್ ಸಿನಿಮಾ ಮಾಡಲು 3000–4000 ಕೋಟಿ ಖರ್ಚು ಮಾಡಲಾಗುತ್ತದೆ. ವಿಶ್ವದ ಇತರೆ ಬಾಹ್ಯಾಕಾಶ ಸಂಸ್ಥೆಗಳಾದ ಅಮೆರಿಕದ ನಾಸಾ –ನ್ಯಾಷನಲ್ ಏರೋನಾಟಿಕ್ಸ್ ಮತ್ತು ಸ್ಪೇಸ್ ಅಡ್ಮಿನಿಸ್ಟ್ರೇಷನ್, ಚೀನಾದ ಸಿಎನ್‌ಎಸ್‌ಎ – ಚೀನಾ ನ್ಯಾಷನಲ್ ಸ್ಪೇಸ್ ಅಡ್ಮಿನಿಸ್ಟ್ರೇಷನ್, ಯುರೋಪಿನ – ಇಎಸ್‌ಎ ಯುರೋಪಿಯನ್ ಸ್ಪೇಸ್ ಏಜೆನ್ಸಿ , ರಷ್ಯಾದ –ರಷ್ಯಾದ ಫೆಡರಲ್ ಸ್ಪೇಸ್ ಏಜೆನ್ಸಿ ಇನ್ನೂ ಪ್ರಮುಖ ಬಾಹ್ಯಾಕಾಶಗಳ ವಾರ್ಷಿಕ ಬಜೆಟ್ ಹಲವಾರು ಬಿಲಿಯನ್ ಡಾಲರ್‌ಗಳಾಗುತ್ತದೆ.

ಭಾರತದ ಇಸ್ರೋ ಬಾಹ್ಯಾಕಾಶ ಸಂಸ್ಥೆಯ ಬಜೆಟ್ ಇವುಗಳಿಗೆ ಹೋಲಿಸಿದರೆ ಹಲವಾರು ಪಟ್ಟು ಕಡಿಮೆಯಾಗಿದ್ದರೂ ಕಾರ್ಯ ಕ್ಷಮತೆಯಲ್ಲಿ ಮೇಲಿನ ಬಾಹ್ಯಾಕಾಶಗಳಿಗೆ ಸರಿ ಸಮನಾಗಿದೆ. ಚಂದ್ರಯಾನ –3 ಮುಖ್ಯ ಉದ್ದೇಶ ಚಂದ್ರನ ದಕ್ಷಿಣ ಧ್ರುವವನ್ನು ಅಧ್ಯಯನ ಮಾಡುವುದಾಗಿದೆ. ಚಂದ್ರನ ಈ ಭಾಗ ಭೂಮಿಗೆ ಕಾಣಿಸುವುದಿಲ್ಲ. ಪ್ರಸ್ತುತ ಚಂದ್ರಯಾನ –3ರ ಫೋಟೋಗಳು ಲಭ್ಯವಾಗಿದ್ದು ಭಾರತೀಯರು ರೋಮಾಂಚನಗೊಳ್ಳುವಂತೆ ಮಾಡಿದೆ. ಇದೇ ಅಗಸ್ಟ್ 23 ರಂದು ಚಂದ್ರಯಾನ –3 ಚಂದ್ರನ ಮೇಲೆ ಇಳಿಯಲ್ಲಿದ್ದು, ಇದು ಭಾರತಕ್ಕೆ ಹೆಮ್ಮೆಯ ವಿಷಯವಾಗಿದೆ.ಇಸ್ರೋ ಬಾಹ್ಯಾಕಾಶ ಸಂಸ್ಥೆಯ ಸಾಧನೆ ನಮ್ಮೆಲ್ಲಾ ಭಾರತೀಯರಿಗೆ ಗೌರವದ ವಿಷಯವಾಗಿದ್ದು, ಈ ಸಾಧನೆಗೆ ಇಸ್ರೋ ಸಂಸ್ಥೆಗೆ ಎಲ್ಲಾ ಭಾರತೀಯರ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಸುಪ್ರೀಂಕೋರ್ಟ್‌ನ ತೀರ್ಪು ನೀರಾಳ




ಮಾನ್ಯರೆ,

ಮೋದಿ ಹೆಸರನ್ನು ಹೊಂದಿರುವವರೆಲ್ಲಾ ಕಳ್ಳರು, ಭ್ರಷ್ಟಾಚಾರಿಗಳು ಎಂದು ವಿವಾದಾತ್ಮಕ ಹೇಳಿಕೆ ನೀಡಿ ತಮ್ಮ ಲೋಕಸಭಾ ಸದಸ್ಯತ್ವವನ್ನು ಕಳೆದುಕೊಂಡು ಜೈಲು ಶಿಕ್ಷೆ ಅನುಭವಿಸುವ ಆತಂಕದಲ್ಲಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಸುಪ್ರೀಂಕೋರ್ಟ್‌ನ ತೀರ್ಪು ನೀರಾಳ ತಂದಿದೆ.

ಸುಪ್ರೀಂಕೋರ್ಟ್ ಮುಖ್ಯವಾಗಿ ಗಮನಿಸಿರುವ ಅಂಶವೆಂದರೆ, ಸಾರ್ವಜನಿಕ ಜೀವನದಲ್ಲಿರುವವರು ಹೇಗೆ ನಡೆದುಕೊಳ್ಳಬೇಕು ಮತ್ತು ಯಾವುದೇ ಕಾರಣಕ್ಕೂ ರಾಜಕೀಯ ದ್ವೇಷ ಭಾಷಣ ಮಾಡಬಾರದು ಎಂದು ಚಾಟಿ ಬೀಸಿದೆ. ಹಾಗೂ ಕೆಳಹಂತದ ನ್ಯಾಯಲಯಗಳು, ಸೂಕ್ತ ದಾಖಲೆಗಳು ಮತ್ತು ಕಾರಣಗಳಿಲ್ಲದೇ ಗರಿಷ್ಠ ಶಿಕ್ಷೆ ವಿಧಿಸಬಾರದು ಎಂದು ಹೇಳಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮತದಾರರ ಮೇಲು ಇದು ಕೆಟ್ಟ ಪರಿಣಾಮ ಬೀರುತ್ತದೆ ಎಂದಿರುವುದು ಪ್ರಜಾಪ್ರಭುತ್ವಕ್ಕೆ ದೊರೆತ ಜಯವೆಂದೇ ಹೇಳಬಹುದು. ಇಂತಹ ತೀರ್ಪುಗಳಿಂದಾದರೂ ನಮ್ಮ ರಾಜಕಾರಣಿಗಳು ಇನ್ನೂ ಮುಂದಾದರು ಬುದ್ಧಿ ಕಲಿಯುತ್ತಾರಾ? ನಮ್ಮ ರಾಜ್ಯದ ಮುತ್ಸದ್ದಿ ರಾಜಕಾರಣಿಗಳು ಎನಿಸಿಕೊಂಡ, ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡ, ರಾಮಕೃಷ್ಣ ಹೆಗಡೆ, ಎಸ್.ಎಂ.ಕೃಷ್ಣ, ಎಂ. ಪಿ. ಪ್ರಕಾಶ್ ಅವರ ವಿಚಾರ ಪೂರ್ಣ ಭಾಷಣಗಳು ಇತರ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಜು.11 ದಿನದ ಬಿಲ್ ಏಕೆ ಪಾವತಿಸಬೇಕು ಇಂಧನ ಸಚಿವ ಜಾರ್ಜ್ ಸ್ಪಷ್ಟಪಡಿಸಲಿ



ಮಾನ್ಯರೆ,

ಆಗಸ್ಟ್ 1ರಿಂದ 'ಗೃಹಜ್ಯೋತಿ' ಗ್ಯಾರಂಟಿ ಯೋಜನೆ ಕಾಂಗ್ರೆಸ್ ಸರ್ಕಾರದ ಮೂರನೆಯ ಕೊಡುಗೆ ಎಂದು ಹೆಮ್ಮೆಯಿಂದ ರಾಜ್ಯ ಸರ್ಕಾರ ಹೇಳಿಕೊಂಡು ಈಗಾಗಲೇ ಜೀರೋ ಬಿಲ್ ಫಲಾನುಭವಿ ಮನೆಗಳಿಗೆ ತಲುಪಿದೆ.

ಸಾಕಷ್ಟು ಅಗತ್ಯ ವಸ್ತುಗಳ ಬೆಲೆಯನ್ನು ನಿಧಾನವಾಗಿ ಏರಿಸಿ ಕಳ್ಳ ಬೆಕ್ಕಿನಂತೆ ಹಾಲು ಕುಡಿಯುತ್ತಿರುವ ಸರ್ಕಾರವನ್ನು ತರಟೆಗೂ ತೆಗೆದುಕೊಳ್ಳಲಾಗದ ಸ್ಥಿತಿಗೆ ರಾಜ್ಯ ಭಾರತೀಯ ಜನತಾ ಪಕ್ಷ ತಲುಪಿರುವುದು ನಮ್ಮ ದುರ್ದೈವ.

ಈಗ ಈ ಪತ್ರದೊಂದಿಗೆ ಲಗತ್ತಿಸಿರುವ ಜೂನ್ ತಿಂಗಳ ವಿದ್ಯುಚ್ಛಕ್ತಿ ಬಿಲ್ ನೋಡಿ. ಜೂನ್ 11ರಿಂದ ಜುಲೈ 11 ರವರೆಗೆ meter reading ಇದೆ. ಇದು ಯಾವ ಸೀಮೆ ಉಚಿತ ನೀವೇ ಹೇಳಿ. ಜುಲೈ ತಿಂಗಳ 11 ದಿನದ ಬಿಲ್ ಅರ್ಹ ಗ್ರಾಹಕರು ಏಕೆ ಪಾವತಿಸಬೇಕು ಎಂದು ಇಂಧನ ಸಚಿವ ಜಾರ್ಜ್ ಅವರು ಸ್ಪಷ್ಟಪಡಿಸಲಿ. ಇನ್ನು ಈ ಬಗ್ಗೆ ಬಿಜೆಪಿ ಮೌನ ವಹಿಸಿರುವುದು ಮಾಹಿತಿ ಕೊರತೆಯೇ ಅಥವಾ ಮುಖ್ಯಮಂತ್ರಿಗಳ ಭಯದಿಂದಲೋ?

ಕಾಂಗ್ರೆಸ್ ಸರ್ಕಾರ ಜನರನ್ನು ಹಿಂಬಾಗಿಲಿಂದ ಶೋಷಿಸುವುದನ್ನು ಬಿಡದಿದ್ದರೆ ಅದಕ್ಕೆ ಲೋಕಸಭಾ ಚುನಾವಣೆಯಲ್ಲಿ ಬಾರೀ ಬೆಲೆ ತೆರಬೇಕಾಗಬಹುದು. ಎಚ್ಚರ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು



ಗುಬ್ಬಿಗೂಡು ರಮೇಶ್

ಮೊ: 97429–34512

ದೀಪ ಸಾಲು

ಎಂಥಾ ಮರಳಯ್ಯಾ, ಇದು ಎಂಥಾ ಮರಳು...!

'ಮದುವೆ ಮಾಡಿನೋಡು ಮನೆ ಕಟ್ಟಿನೋಡು' ಎನ್ನುವ ಗಾದೆ ಮಾತು ಇವತ್ತು ಬದಲಾಗುತ್ತಿದೆ. ಮದುವೆಯನ್ನು ಬೇಕಾದರೆ ಹೇಗೊ ಮಾಡಿ ಮುಗಿಸಿ ಬಿಡಬಹುದು. ಆದರೆ ಮನೆ ಕಟ್ಟುವುದು ದುಸ್ತರವಾಗಿಬಿಟ್ಟಿದೆ. ಇದಕ್ಕೆ ಪೂರಕವಾಗಿ ಸ್ವಂತ ಮನೆಯಿಲ್ಲದಿದ್ದರೆ ಮದುವೆಗೂ ಒಳ್ಳೇ ಸಂಬಂಧಗಳು ಕುದುರುವುದಿಲ್ಲ. ಅಪ್ಪ ಕಟ್ಟಿದ ಮನೆಯಿದ್ದವರು, ಎಲ್ಲವೂ ಅಗ್ಗವಾಗಿದ್ದಾಗ ಮನೆ ಕಟ್ಟಿಕೊಂಡವರು, ದುಡ್ಡಿನ ತೊಂದರೆ ಇಲ್ಲದವರು, ಅತೀ ಹೆಚ್ಚು ಆದಾಯವಿರುವವರಿಗೆ– ಈ ಬಿಸಿ ತಟ್ಟುವುದಿಲ್ಲ ನಿಜ; ಆದರೆ ಬರುವ ನಿಗದಿತ ಆದಾಯವನ್ನೇ ಚೀಟಿ ಬರೆದುಕೊಂಡು time table ಥರಾ ಖರ್ಚು ಮಾಡುವ ಬಡ ಮಧ್ಯಮ ವರ್ಗದವರ ಮನೆಯ ಅಂಗಳದಲ್ಲಿ ಮನೆ ಕಟ್ಟಿ ನೋಡು... ಎಂಬ ಗಾದೆ ಮಾತೇ ಕಾಲ್ಚೆಂಡು. ವರಾಂಡದ ತುಂಬ ಮನೆ ಕಟ್ಟಿ ನೋಡು ಎಂಬ ಮಾತಿಗೆ ಎಲ್ಲವೂ ದುಬಾರಿ. ಇನ್ನು ಮರಳಂತೂ ಸತಾಯಿಸುವಷ್ಟು ಎರ್ರಾ ಬಿರ್ರಿ. ಅದರಲ್ಲೂ ಮನೆ ಕಟ್ಟುವವರಿಗೆ ತಾರಸಿ ಕಟ್ಟಲು ಎಂಸ್ಯಾಂಡ್ ಇದ್ದರೂ ಮರಳಿನದೇ ಚಿಂತೆ. ಇದು ಕೇವಲ ಕೆಲವು ಜಿಲ್ಲೆಗಳ ಸಮಸ್ಯೆ ಅಲ್ಲ, ಇಡೀ ರಾಜ್ಯದ ಸಮಸ್ಯೆಯಾಗಿ ಒಂದೂವರೆ ದಶಕದಿಂದ ಈಚೆಗೆ ಜನರನ್ನು, ಆಳುವ ಸರ್ಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸಿಬಿಟ್ಟಿದೆ.

ಮರಳು ಸ್ವಾಭಾವಿಕವಾಗಿ ಸಿಗುವ ಸಂಪನ್ಮೂಲ, ಮನುಷ್ಯ ಇದನ್ನು ಸೃಷ್ಟಿಸಲಾರ. ಸೃಷ್ಟಿಸಿದರೂ ಮರಳಿನ ಥರಾ ಇರುವ ಎಂಸ್ಯಾಂಡಿನಂಥ ಇನ್ನೊಂದನ್ನು ಸೃಷ್ಟಿಸಬಹುದೇ ಹೊರತು ಮರಳನ್ನೇ ಸೃಷ್ಟಿಸುತ್ತೇನೆಂದರೆ ಬಿಲ್‌ಕುಲ್ ಆಗುವುದಿಲ್ಲ. ಆದರೂ ಆ ಥರದ ಸೃಷ್ಟಿಗಳಿಗೇನೂ ಕೊರತೆಯಿಲ್ಲ. ಅವೂ ಸೃಷ್ಟಿಯಾಗಿವೆ. ಸಕ್ಕರೆಯ ಬದಲಿಗೆ ಸ್ಯಾಕ್ರಿನ್, ಕೋಳಿಯ ಬದಲಿಗೆ ಬ್ರಾಯ್ಲರ್. ಸೃಷ್ಟಿಸಿದಂತೆ ಮರಳಿನ ಬದಲಿಗೆ ಎಂಸ್ಯಾಂಡ್ ಸೃಷ್ಟಿಯಾಗಿದೆ. ಆದರೆ ಅದು ಮರಳಲ್ಲ; ಮರಳಿನಂತಹುದು. ಅದರ ಉಪಯೋಗವೂ ಅಷ್ಟೆ, ಅನಿವಾರ್ಯವಾಗಿ ಈಗ ಅದು ಬಳಕೆಯಾಗುತ್ತಿದೆ. ಆದರೆ ಈ ಮರಳೆನ್ನುವ ಸ್ವಾಭಾವಿಕ ಉಸುಕು ತನ್ನನ್ನ ತಾನೇ ಹೀಗೆ ದುಬಾರಿ ಮಾಡಿಕೊಂಡಿದೆಯಾ? ಅಥವಾ ವ್ಯವಸ್ಥೆಯೇ ಅದನ್ನು ದುಬಾರಿ ಮಾಡಿದೆಯಾ? ಎಂಬುದೇ ಪ್ರಶ್ನೆ. ಎಲ್ಲಿ ಅಡಬಿಟ್ಟಿ ದುಡ್ಡು ದುಡಿಯುವ ಅವಕಾಶಗಳಿದ್ದಾವೋ ಅದಕ್ಕೆ ಸಂಬಂಧಿಸಿದಂತೆ ಅಲ್ಲೊಂದು ಮಾಫಿಯಾ ಸೃಷ್ಟಿಯಾಗಿಬಿಡುತ್ತದೆ. 2007–08ರಲ್ಲಿ 1600ರೂ ಇದ್ದ ಮರಳಿನ ದರ ಇವತ್ತು ಲೋಡಿಗೆ ಎಷ್ಟು ಅಂತ ಬರೆಯಲು ಆಗದಷ್ಟು ಎತ್ತರಕ್ಕೇರಿದೆ. ಇಷ್ಟಕ್ಕೇ ಇದು ಮುಗಿಯುವುದಿಲ್ಲ. ಮನೆ ಪೂರ್ಣಗೊಳ್ಳುವ ಹಂತದಲ್ಲಿ ಅರ್ಜೆಂಟಿಗೆ ಇನ್ನೂ ದುಬಾರಿ ಬೆಲೆ ಕೊಟ್ಟು ಮರಳು ತರಿಸುವ ವಾಮಮಾರ್ಗಗಳ ಹುಡುಕಾಟದಲ್ಲಿ ಸಾರ್ವಜನಿಕರು ಮರಳಿನವರ ಸಂಪರ್ಕಕ್ಕಾಗಿ ಪರದಾಡುತ್ತಾರೆ. ಆದರೆ ದುರಂತ ನೋಡಿ ದುಬಾರಿ ಬೆಲೆ ತೆತ್ತರೂ ಮರಳು ಸಿಕ್ಕುವುದಿಲ್ಲ. 'ಸಮುದ್ರದ ನಂಟು ಉಪ್ಪಿಗೆ ಬರ' ಅನ್ನೋ ಹಾಗೆ ಹೊಳೆದಂಡೆಯ ಸುತ್ತಮುತ್ತಲೇ ವಾಸಿಸುವ ನಮಗೆ ಈ ಗಾದೆ ಮಾತು ಚೆನ್ನಾಗಿ ಒಪ್ಪುತ್ತದೆ. ನಮ್ಮಂತೆಯೇ ರಾಜ್ಯದ ಶಿವಮೊಗ್ಗ, ಹೊನ್ನಾವರ, ಹರಿಹರದ ತುಂಗಭದ್ರಾ ದಂಡೆ, ದುರ್ಗದ ಸಂಗ್ರಹಣಾಗಾರದಿಂದ ಅಧಿಕೃತವಾಗಿ ಮರಳು ತುಂಬಿಕೊಂಡು ಹೊರಡುವ ಲಾರಿಗಳು ಮಧ್ಯೆ ಮರಳನ್ನು ಮತ್ತೆ ರೀ ಲೋಡ್ ಮಾಡಿಕೊಂಡು ಕೊನೆಯ ಕ್ಷಣದಲ್ಲಿ ತುಮಕೂರು, ಬೆಂಗಳೂರು, ಮೈಸೂರಿಗೆ ತಿರುಗುತ್ತಿದ್ದ ಕಾಲವೊಂದಿತ್ತು. ಅಂದರೆ ಒಂದೇ ಪರ್ಮಿಟ್‌ನಲ್ಲಿ ಎರಡೆರಡು ಲೋಡಿಂಗ್, ಅನ್‌ಲೋಡಿಂಗ್ ಪ್ರಕ್ರಿಯೆಗಳು ನಡೆದು ಕಡೆಗೆ ಬಹುಮಹಡಿಗಳ ಕಟ್ಟಡಕ್ಕೊ, ಅಪಾರ್ಟ್‌ಮೆಂಟುಗಳಿಗೊ ನಿರಾತಂಕವಾಗಿ ಬಳಕೆಯಾಗುತ್ತಿದ್ದವು. ಹೀಗೆ ಸರಾಸರಿ ದಿನಕ್ಕೆ ಆರು ಸಾವಿರ ಲೋಡು ಅನಧಿಕೃತವಾಗಿ ರವಾನೆಯಾಗುತ್ತಿತ್ತು. ಇತ್ತ ಟ್ರಿಪ್‌ಶೀಟು, ಪರ್ಮಿಟ್ಟುಗಳ ಪರಿವೆಯಿಲ್ಲದ ಮಧ್ಯಮವರ್ಗದ ಮಂದಿ ತಮ್ಮ ಮನೆಯ ತಾರಸಿಯ ದಿನದವರೆಗೂ ಮರಳು ಸಿಗುತ್ತದೆ, ಮರಳು ಸಿಗುತ್ತದೆಂದು ಚಾತಕ ಪಕ್ಷಿಯಂತೆ ಕಾದು ಕುಳಿತು ಕಂಗಾಲಾದ ಕತೆ ಮನೆ ಕಟ್ಟಿ ನೋಡು ಎಂದ ಕೂಡಲೇ ನೆನಪಾಗುವಷ್ಟು ಮರಳಿನ ಮಾಲೆ ಗೋಚರಿಸುತ್ತದೆ. ಕಡೇ ಗಳಿಗೆಯಲ್ಲಿ ಬ್ಲಾಕ್ ಮಾರ್ಕೆಟ್ಟಿನಲ್ಲಿಯೆ ಲೋಡಿಗೆ ದುಪ್ಪಟ್ಟು ದುಡ್ಡು ಕೊಟ್ಟು ಖರೀದಿಸಿ ತಮ್ಮ ಮನೆಯ ಮೇಲೂ, ತಮ್ಮ ತಲೆಯ ಮೇಲೂ ತಾರಸಿಕಟ್ಟಿಕೊಳ್ಳುವಂತೆ ಮಧ್ಯಮ ವರ್ಗದವರು ಕಷ್ಟದಲ್ಲಿ ಮನೆ ಕಟ್ಟುತ್ತಾರೆ. ಎತ್ತಿನ ಗಾಡಿಗಳಲ್ಲಿ ಚಿಕ್ಕ ಚಿಕ್ಕ ಟ್ರಾಕ್ಟರ್‌ಗಳಲ್ಲಿ ತೆಗೆದ ಮರಳು ಸೇಫಾದ ಜಾಗಗಳಲ್ಲಿ ಶೇಖರಣೆಗೊಂಡು ನಂತರ ಅದು ಬೆಂಗಳೂರು, ಕೇರಳ, ಮುಂತಾದ ಕಡೆ ಬಳಕೆಯಾಗುತ್ತಿತ್ತು. ಇಷ್ಟೆಲ್ಲಾ ಮರಳಿನ ಸಂಗ್ರಹಣೆ, ತೊಡುವಿಕೆ, ರವಾನೆಗಳೆಲ್ಲಾ ಆಕಾಶ ಮಾರ್ಗದಲ್ಲಿ ನಡೆಯುವುದಿಲ್ಲ. ಭೂಮಿಯ ಮೇಲೆಯೇ ನಡೆಯಬೇಕು. ಕಾರಣ ಬೇಸಾಯದ ಕೂಲಿಗಿಂತ ಮರಳು ತೆಗೆಯುವ ಕೂಲಿಗೆ ಹೋದರೆ ದಿನಕ್ಕೆ ಏನಿಲ್ಲವೆಂದರೂ ಸಾವಿರದಿಂದ ಎರಡು ಸಾವಿರದವರೆಗೆ ದುಡಿಯಬಹುದೆಂಬ ಲೆಕ್ಕಾಚಾರದ ಕಾಲವೊಂದಿತ್ತು. ಒಂದು ಕಡೆ ಮಧ್ಯಮ ವರ್ಗದವರ ಹಿತಕ್ಕೆ, ಮತ್ತೊಂದೆಡೆ ರೈತಾಪಿ ವರ್ಗಕ್ಕೆ ಬಿಸಿತುಪ್ಪವಾದ ಮರಳುಗಾರಿಕೆಗೆ ಒಂದು ತಾರ್ಕಿಕ ಅಂತ್ಯ ಈಗ ಕಂಡಿದೆ. ಮನೆ ಕಟ್ಟುವವರ ಕಷ್ಟದ ಜೊತೆ ಜೊತೆಗೇನೆ ಚಿಕ್ಕವರು ದೊಡ್ಡವರ ಆಣತಿಯಂತೆ ಅವರೇ ಎಷ್ಟೋ ಸಲ ತಮ್ಮ ತಮ್ಮವರ ನಡುವೆಯೇ ಗೊತ್ತಿಲ್ಲದಂತೆ ಇಂಥ ಲಾರಿ ಇಂಥಾ ಕಡೆ ಮರಳು ತುಂಬಿಕೊಂಡು ಪರ್ಮಿಟ್ ಇಲ್ಲದೇ ಹೊರಟಿದೆ ಎಂಬ ರಹಸ್ಯ ಮಾಹಿತಿಗಳನ್ನು ಪೊಲೀಸರಿಗೆ ಕೊಟ್ಟು ಅವರವರಲ್ಲೇ ಗಲಾಟೆಗಳಾಗಿ ಹೋದ ಉದಾಹರಣೆಗಳಿವೆ. ಇನ್ನು ಸಾರ್ವಜನಿಕರು ಹೇರ್‌ಕಟಿಂಗ್ ಸೆಲೂನ್‌ಗಳಲ್ಲಿ ಅಲ್ಲಿ ಇಲ್ಲಿ ಕುಳಿತು ಮಾತಾಡುತ್ತಾ ಇದೆಲ್ಲದಕ್ಕೂ ಅಧಿಕಾರಿಗಳನ್ನು, ಪೊಲೀಸರನ್ನು, ಹೊಣೆಗಾರರನ್ನಾಗಿ ಮಾಡಿ ವಾಚಾಮಗೋಚರವಾಗಿ ಮಾತಿನಲ್ಲೇ ತಮ್ಮ ಕೋಪವನ್ನೆಲ್ಲಾ ತೀರಿಸಿಕೊಳ್ಳುತ್ತಾರೆ. ಎಷ್ಟೇ ಆದರೂ ಬಡವನ ಕೋಪ ದವಡೆಗೆ ಮೂಲ. ಹಾಗೆಯೇ ಅಧಿಕಾರಿವರ್ಗ ಕೂಡ! ಅವರಿಗೂ ಮಿತಿಗಳಿವೆ. ಎಲ್ಲ ಅಧಿಕಾರಿಗಳೂ, ಪೊಲೀಸರು ಸಿನಿಮಾ ಹೀರೋಗಳಂತೆ ಬಂದು ಎಲ್ಲವನ್ನೂ ಏಕಕಾಲಕ್ಕೆ ಸರಿಮಾಡಲು ಆಗಲಿಲ್ಲ. ಆದರೆ ಬದ್ಧತೆ ಮತ್ತು ಆದ್ಯತೆಯ ದೃಷ್ಟಿಯಿಂದ ಮನೆಕಟ್ಟುವ ಮಧ್ಯಮ ವರ್ಗದವರ ಕನಸಿಗೆ ಈ ಅಧಿಕಾರಿಗಳು ಮತ್ತು ಪೊಲೀಸರು ಕಾನೂನಿನ ಮಿತಿಯಲ್ಲಿಯೇ ಕೆಲಸ ಮಾಡಿದ್ದಾರೆ. ಏಕೆಂದರೆ ಬೆಂಗಳೂರು ಮೈಸೂರುಗಳಲ್ಲಿ ಕಟ್ಟುತ್ತಿರುವ ಮನೆಗಳ ಮುಂದೆ ಮರಳು ಬಿದ್ದಿದ್ದರೆ ಗಸ್ತು ತಿರುಗುವ ಪೊಲೀಸರೂ ಕೂಡ ಪರ್ಮಿಟ್ ಕೇಳಲು ಶುರು ಮಾಡಿದ್ದರು. ಈ ಎಂಸ್ಯಾಂಡ್ ಯುಗ ಬಂದ ಮೇಲೆ ಈ ಯಾವುದೂ ಕಾಣುತ್ತಿಲ್ಲ. ಆಗ ಕಂಟ್ರಾಕ್ಟರ್ ಸರಬರಾಜು ಮಾಡಿರುವ ಮರಳಿಗೂ ಮನೆಯ ಮಾಲೀಕ ಉತ್ತರಿಸುವ ಸ್ಥಿತಿ ಬಂದಿತ್ತು.



> "ಕರ್ನಾಟಕದ ಎಲ್ಲಾ ನದಿ ಬಯಲಿನಲ್ಲೂ ಈ ಮರಳುಗಾರಿಕೆ ಎಗ್ಗಿಲ್ಲದೆ ನಡೆದಿದೆ. ಭೀಮಾ, ಅಮರ್ಜಾ, ಕಾಗಿಣಾ, ಕಮಲಾವತಿ, ಮುಲ್ಲಾಮಾರಿ, ಗಂಡೋರಿ, ಬೆಣ್ಣೆ ತೊರಾ, ತುಂಗಭದ್ರೆ, ಮಲಪ್ರಭ, ಘಟಪ್ರಭ, ಕೃಷ್ಣೆ, ಕಾವೇರಿ, ಶರಾವತಿ, ನೇತ್ರಾವತಿ, ಹೇಮಾವತಿ, ಕಾಳಿನದಿ, ಹಾರ್ಸಿಕಟ್ಟಾ ಸಮೀಪದ ಮಂಡ್ಲಿಕೊಪ್ಪ ಶಿರಸಿಯ ಕೋಟೆಕೆರೆ, ಅಘನಾಶಿನಿ, ಗಂಗಾವಳಿ, ವರದಾನದಿ, ಹೀಗೆ ಒಂದೇ ಎರಡೆ ಮರಳುಗಾರಿಕೆಗೆ ಒಳಗಾದಾಗಿನಿಂದ ನದಿಗಳು ಕಣ್ಣೀರಿಟ್ಟಿವೆ! ದುರಾದೃಷ್ಟ ನೋಡಿ ನಾವು ಅತ್ತರೆ ಕಣ್ಣೀರಿನಿಂದಾದರೂ ನಾವು ಅಳುತ್ತಿರುವುದು ಗೊತ್ತಾಗಿಬಿಡುತ್ತದೆ. ಆದರೆ ನದಿಗಳು ಅತ್ತರೆ ಹರಿವ ತಣ್ಣೀರಿನಲ್ಲಿ ಅವುಗಳ ಕಣ್ಣೀರು ಕಾಣುವುದೇ ಇಲ್ಲ. ಹೀಗೆ ಜಲದ ಕಣ್ಣಿಗೆ ಮಣ್ಣು ಸುರಿದು ಮರಳು ಎತ್ತುವ ದಂಧೆಗೆ ನೈಸರ್ಗಿಕ ಸಂಪನ್ಮೂಲವಾದ ಮರಳು ಸಿಕ್ಕಿಹಾಕಿಕೊಂಡು ನರಳುತ್ತಿದೆ.

ಕರ್ನಾಟಕದ ಎಲ್ಲಾ ನದಿ ಬಯಲಿನಲ್ಲೂ ಈ ಮರಳುಗಾರಿಕೆ ಎಗ್ಗಿಲ್ಲದೆ ನಡೆದಿದೆ. ಭೀಮಾ, ಅಮರ್ಜಾ, ಕಾಗಿಣಾ, ಕಮಲಾವತಿ, ಮುಲ್ಲಾಮಾರಿ, ಗಂಡೋರಿ, ಬೆಣ್ಣೆ ತೊರಾ, ತುಂಗಭದ್ರೆ, ಮಲಪ್ರಭ, ಘಟಪ್ರಭ, ಕೃಷ್ಣೆ, ಕಾವೇರಿ, ಶರಾವತಿ, ನೇತ್ರಾವತಿ, ಹೇಮಾವತಿ, ಕಾಳಿನದಿ, ಹಾರ್ಸಿಕಟ್ಟಾ ಸಮೀಪದ ಮಂಡ್ಲಿಕೊಪ್ಪ ಶಿರಸಿಯ ಕೋಟಿಕೆರೆ, ಅಘನಾಶಿನಿ, ಗಂಗಾವಳಿ, ವರದಾನದಿ, ಹೀಗೆ ಒಂದೇ ಎರಡೆ ಮರಳುಗಾರಿಕೆಗೆ ಒಳಗಾದಾಗಿನಿಂದ ನದಿಗಳು ಕಣ್ಣೀರಿಟ್ಟಿವೆ! ದುರಾದೃಷ್ಟ ನೋಡಿ ನಾವು ಅತ್ತರೆ ಕಣ್ಣೀರಿನಿಂದಾದರೂ ನಾವು ಅಳುತ್ತಿರುವುದು ಗೊತ್ತಾಗಿಬಿಡುತ್ತದೆ. ಆದರೆ ನದಿಗಳು ಅತ್ತರೆ ಹರಿವ ತಣ್ಣೀರಿನಲ್ಲಿ ಅವುಗಳ ಕಣ್ಣೀರು ಕಾಣುವುದೇ ಇಲ್ಲ. ಹೀಗೆ ಜಲದ ಕಣ್ಣಿಗೆ ಮಣ್ಣು ಸುರಿದು ಮರಳು ಎತ್ತುವ ದಂಧೆಗೆ ನೈಸರ್ಗಿಕ ಸಂಪನ್ಮೂಲವಾದ ಮರಳು ಸಿಕ್ಕಿಹಾಕಿಕೊಂಡು ನರಳುತ್ತಿದೆ.

ನಾವೆಲ್ಲಾ ಚಿಕ್ಕವರಿದ್ದಾಗ ಮೇಷ್ಟ್ರು ತರಗತಿಯಲ್ಲಿ ಪಾಠ ಮಾಡುತ್ತಾ ಕಾಡು ಪ್ರಾಣಿಗಳ ಹೆಸರು ಹೇಳಿ ಅವುಗಳನ್ನು ಬೇಟೆಯಾಡಲು ನಿಲ್ಲಿಸದಿದ್ದರೆ ಮುಂದಿನ ಪೀಳಿಗೆಗೆ ನಾವು ಆ ಕಾಡು ಪ್ರಾಣಿಗಳನ್ನು ಚಿತ್ರದಲ್ಲಿ ತೋರಿಸಬೇಕಾಗುತ್ತದೆ ಎನ್ನುತ್ತಿದ್ದುದು ನಿಮಗೂ ನೆನಪಿರಬೇಕು. ನಮ್ಮ ಪೂರ್ವಜರು ತೆಂಗು ನೆಟ್ಟಿದ್ದಕ್ಕೆ ಇವತ್ತು ನಾವು ಎಳೆನೀರು ಕುಡಿಯುತ್ತಿದ್ದೇವೆ. ಹಾಗೆಯೇ ನಾವು ಇವತ್ತಿನ ನೈಸರ್ಗಿಕ ಸಂಪನ್ಮೂಲವನ್ನು ರಕ್ಷಿಸದೆ ನಾವೇ ಬಡಿದು ಬಾಯಿಗೆ ಹಾಕಿಕೊಂಡರೆ ಮುಂದಿನ ತಲೆಮಾರಿಗೆ ಏನು ಉಳಿಯುತ್ತದೆ? ಭೂಮಿಯಲ್ಲಿ ಈಗಾಗಲೇ ಚಿನ್ನ ತೆಗೆದದ್ದಾಗಿದೆ. ಗಣಿಗಾರಿಕೆಯಿಂದ ಗ್ರಾನೈಟ್ ತೆಗೆದದ್ದಾಗಿದೆ. ಕಾಡಿನಿಂದ ಶ್ರೀಗಂಧ, ತೇಗದ ಮರಗಳ ಹನನವಾಗಿದೆ. ಅದರ ಜೊತೆಗೆ ನದೀಪಾತ್ರದ ಮರಳಿನ ಸರದಿಯೂ ಮುಗಿಯಿತೆನ್ನಿ. ಈಗಿನ ಮಧ್ಯಮ ವರ್ಗದವರು ಮರಳಿಲ್ಲದೆ ಮನೆ ಕಟ್ಟುವ ಕಷ್ಟದ ಜೊತೆಗೆ ಒಂದು ಬಾಟಲಿಯಲ್ಲೊ ಉಪ್ಪಿನಕಾಯಿ ಜಾಡಿಯಲ್ಲೊ ಒಂದಷ್ಟು ಮರಳನ್ನು ತುಂಬಿಡುವುದು ಲೇಸು. ಕಾರಣ ಮುಂದೆ ಅವರ ಮೊಮ್ಮಕ್ಕಳು ಮರಳು ಹೇಗಿರುತ್ತದೆಂದು ಕೇಳಿದರೆ ಎಂಸ್ಯಾಂಡ್ ಎಂಬ ವಿಶ್ವಾಮಿತ್ರ ಸೃಷ್ಟಿಯ ಪಕ್ಕದಲ್ಲಿ ಈ ಮರಳನ್ನಿಟ್ಟು ತೋರಿಸಲಿಕ್ಕೆ! ಅಂಥಾಕಾಲ ಬರುವ ದಿನ ದೂರವಿಲ್ಲ. ಈ ಮರಳು ದಂಧೆಯ ಮೇಲೆ ಈ ನಾಡಿನ ಶಕ್ತಿಕೇಂದ್ರ ವಿಧಾನಸೌಧದಲ್ಲಿ ಶಾಸಕರ ಸಮ್ಮುಖದಲ್ಲೇ ಚರ್ಚೆಗಳಾಗಿವೆ. ಇದ್ದರೆ ಬೆಂಗಳೂರಿನಲ್ಲಿ ಲೋಡಿಗೆ ದುಬಾರಿ ಬೆಲೆ ಕೊಟ್ಟು ಖರೀದಿಸುವ ಖರೀದಿದಾರರಿದ್ದಾರೆ. ಮರಳೇ ಮರುಳಾಗುವಂತಹ ಬೆಲೆ ಬಂದಿದೆ ಮರಳಿಗೆ. ಪಕ್ಕದ ಮಹಾರಾಷ್ಟ್ರ, ನೆರೆಯ ಆಂಧ್ರಪ್ರದೇಶ, ಇಕ್ಕೆಲದ ಕೇರಳ ಇಲ್ಲಿಗೆ ಹೋಗುತ್ತಿರುವ ಮರಳಿನ ಪಾಲೆಷ್ಟು? ನೀವೇ ಊಹಿಸಿ! ಇಷ್ಟೆಲ್ಲಾ ಪೂರೈಕೆಯಿಂದಾಗಿ ರಾಜ್ಯದ ನದೀ ಪಾತ್ರಗಳಲ್ಲಿ ಮರಳು ನಿಕ್ಷೇಪಗಳು ದಿನೇದಿನೆ ಕಡಿಮೆಯಾಗುತ್ತಿವೆ. ಈಗಾಗಲೇ ಕೋಲಾರ, ರಾಮನಗರ, ಧಾರವಾಡ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳನ್ನು ಮರಳು ರಹಿತ ಜಿಲ್ಲೆಗಳೆಂದು ಘೋಷಿಸಲಾಗಿದೆ. ತಮಾಷೆಯೆಂದರೆ ಈರುಳ್ಳಿ ಟೊಮೆಟೋಗಳನ್ನು ನಾವು ಕೆ.ಜಿ. ಲೆಕ್ಕದಲ್ಲಿ ಮನೆಗೆ ತಂದಂತೆ ಕೆಲವು ಕಡೆ ಮರಳೂ ಕೂಡ ಕೆ.ಜಿ. ಲೆಕ್ಕದಲ್ಲಿ ಮಾರಲಾಗುತ್ತದೆ. ಮರಳಿನ ಚೀಲಕ್ಕೆ ರೂ. 125 ಅಂದರೆ ಒಂದು ಕೆ.ಜಿ. ಮರಳಿನ ಬೆಲೆ ರೂ. 2.50 ಆದ ಹಾಗಾಯಿತು. ಅಂದರೆ ಒಂದು ಕೆ.ಜಿ. ಬಿ.ಪಿ.ಎಲ್ ಅಕ್ಕಿಗಿಂತ ಒಂದು ಕೆ.ಜಿ ಮರಳು ದುಬಾರಿಯಾದಂತಾಯ್ತಲ್ಲ? ಈ ಲಾರಿ ಲಾಬಿಗೆ, ಫಿಲ್ಟರ್ ಮರಳುಗಾರಿಕೆಗೆ, ಅಕ್ರಮ ಸಕ್ರಮಗಳ ಜಟಾಪಟಿಗೆ, ನದೀತೀರದ ಒತ್ತುವರಿಗೆ, ಬಿಗಿಯಾಗದ ಮರಳುನೀತಿಗೆ, ಮಹಾನಗರಗಳಲ್ಲಿ ದುಬಾರಿ ಬೆಲೆ ಕೊಟ್ಟು ಖರೀದಿಸುವ ಧಾರಾಳತನಕ್ಕೆ, ಗಡಿಮರಳಿನ ನೆರೆರಾಜ್ಯಗಳ ಉಪಟಳಕ್ಕೆ, ಈ ಮರಳು ಕಾರಣ. ಮನೆಕಟ್ಟುವ ಕನಸುಕಂಡ ಮಧ್ಯಮ ವರ್ಗದವರಿಗಂತೂ ಕಷ್ಟ ಕಷ್ಟ, ರಾಷ್ಟ್ರಕವಿ. ಜಿ.ಎಸ್. ಶಿವರುದ್ರಪ್ಪನವರ ಪ್ರಸಿದ್ಧವಾದ ಪ್ರೇಮಗೀತೆಯೊಂದಿದೆ

ನಾವಿಬ್ಬರೂ ಅಂದು ಹೊಳೆಯದಡದಲಿ ನಿಂದು ಮರಳು ಮನೆಯಾ ಕಟ್ಟಿ ಆಟವಾಡಿದಾ ದಿವಸ ನೆನಪಿದೆಯೆ ನಿನಗೆ! ಗೆಳತಿ

ಎನ್ನುವ ಈ ಗೀತೆ ಬಾಲ್ಯದಲ್ಲಿ ಮಕ್ಕಳು ಹೊಳೆದಂಡೆಯ ಮೇಲೆ ಪಾದಗಳನ್ನಿಟ್ಟು ಮರಳು ಮನೆಯಾ ಕಟ್ಟಿ ಆಟವಾಡಿದ ದಿವಸವನ್ನು ನೆನಪಿಸಿಕೊಂಡ ಪದ್ಯ. ದುರಾದೃಷ್ಟ ನೋಡಿ ಈಗ ಅಂಥಾ ಹೊಳೆದಂಡೆಗಳೂ ಇಲ್ಲ, ಮರಳಿನ ಮನೆ ಕಟ್ಟಲು ಹೊಳೆಯ ದಡಗಳೂ ಇಲ್ಲ. ಅಂಥ ಆಟಗಳೂ ಇಲ್ಲ. ಅದು ನಮ್ಮ ನಿಮ್ಮ ಕಾಲಕ್ಕೇ ಮುಗೀತು.

ಇದು ಸ್ವಭಾವಗಳ ವಿಷಯವಲ್ಲ; ಅಭಾವಗಳ ವಿಷಯ. ಇರುವ ಒಂದೇ ಒಂದು ಬದುಕಿನಲ್ಲಿ ಅಂದುಕೊಂಡದ್ದನ್ನು ಮಾಡಿಕೊಳ್ಳಲಾಗದೆ ಒದ್ದಾಡುತ್ತಿರುವ ಕೆಳ ಮಧ್ಯಮ ವರ್ಗದವರ, ಮೇಲ್ಮಧ್ಯಮ ವರ್ಗದವರ ಪರದಾಟದ ವಿಷಯ. ಅಂದರೆ ಮನೆ ಕಟ್ಟಿ ಕೊಳ್ಳುವವರ ಬವಣೆಯ ಕತೆ. ನಮಗೆ ನಮ್ಮ ನಾಗರಿಕ ಪ್ರಪಂಚ ವಿಸ್ತಾರವಾದಂತೆಲ್ಲಾ ನಮ್ಮ ಬೇಕು–ಬೇಡಗಳ ಪಟ್ಟಿ ಬೆಳೆಯುತ್ತಲೇ ಹೋಗಿದೆ. ಇರುವ ಒಂದೇ ಒಂದು ಬದುಕಿನಲ್ಲಿ ಅವುಗಳನ್ನೆಲ್ಲಾ ಈಡೇರಿಸಿಕೊಳ್ಳಲು ಅವುಗಳ ಬೆನ್ನು ಬಿದ್ದು ಈ ಜೀವನವನ್ನು ಕಳೆದುಬಿಟ್ಟಿರುವ ಕೋಟಿ ಕೋಟಿ ಜನರ ಬದುಕು ದುಸ್ತರವಾಗಿ ಮುಗಿದುಹೋಗಿದೆ. ಆದರೆ ಅದ್ಯಾವುದೂ ಕೂಡ ದಾಖಲೆಗಳಂತೆ ಸಿಕ್ಕುವುದಿಲ್ಲ. ಏಕೆಂದರೆ ಅವರ್‍ಯಾರು ಗಣ್ಯರು ಅಲ್ಲ! ಅತಿಗಣ್ಯರು ಮೊದಲೇ ಅಲ್ಲ, ಅವರೆಲ್ಲಾ ನಗಣ್ಯರು. ಅಂದರೆ ಆರಕ್ಕೇರದೆ ಮೂರಕ್ಕಿಳಿಯದೆ ದುಡಿದ ದುಡ್ಡಿನಲ್ಲೇ ಗಂಟುಕಟ್ಟಿ ಮನೆ ಮಠ ಕಟ್ಟಿಕೊಂಡು ಮಕ್ಕಳನ್ನ ಓದಿಸಿ ಬೆಳೆಸಿ ಮದುವೆ ಮುಂಜಿ ಮಾಡಿಸಿ ಕೃತಾರ್ಥರಾದವರು. ಈ ಮಧ್ಯಮವರ್ಗವೇ ನಮ್ಮ ಇಡೀ ದೇಶದ ಅತಿದೊಡ್ಡ ಜನಸಂಖ್ಯೆ. ಇಂಥ ಜನ ವರ್ಗಕ್ಕೆ ಜೀವನದಲ್ಲಿ ಬಹಳ ದೊಡ್ಡ ಕನಸೆಂದರೆ ತಮ್ಮದೂ ಅಂತ ಒಂದು ಸ್ವಂತ ಮನೆ ಕಟ್ಟಿಕೊಂಡು ತಮ್ಮ ಜೀವಿತಾವಧಿಯನ್ನು ಅಲ್ಲಿಯೇ ಕಳೆದುಬಿಡುವ ಅತೀವ ಸಂತಸವೆ ದೊಡ್ಡಗುರಿ. ಆದರೆ ಇವತ್ತು ಕಾಲ ಬದಲಾದಂತೆ ಎಲ್ಲವೂ ಬದಲಾಗಿದೆ. ಭೂಮಿಯ ಬೆಲೆ ದುಬಾರಿ, ಸಿಮೆಂಟು, ಕಬ್ಬಿಣ ಕಾರ್ಮಿಕರ ಕೂಲಿ ಎಲ್ಲವೂ ದುಬಾರಿಯಾಗಿದೆ. ಹೇಗೋ ಸಾಲ ಸೋಲ ಮಾಡಿ ಎಲ್ಲವನ್ನೂ ಸರಿದೂಗಿಸಿ ಬಿಡೋಣ, ಇರೋದಕ್ಕೊಂದು ಸೂರು ಕಟ್ಟಿಕೊಳ್ಳೋಣವೆಂದರೆ ಮನೆಕಟ್ಟಲು ದುಡ್ಡು ಕೊಟ್ಟರೂ ಮರಳು ಸಿಗುತ್ತಿಲ್ಲ. ಸಿಕ್ಕರೂ ದುಬಾರಿ ಬೆಲೆತೆತ್ತು ತರಬೇಕು. ಮನೆಕಟ್ಟುವ ಬಜೆಟ್ಟಿನಲ್ಲಿ ಇಷ್ಟೊಂದು ದುಡ್ಡು ಇಷ್ಟೊಂದು ಶ್ರಮ ಎರಡೂ ಕಷ್ಟವೇ! ಇಲ್ಲಿಯವರೆಗೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದ್ದ ಮರಳು ಈಗ ದುಡ್ಡು ಶ್ರಮ ಎರಡನ್ನೂ ಕೇಳುತ್ತಿದೆ. ಅದನ್ನು ಒದಗಿಸುವ ಶಕ್ತಿ ಮಧ್ಯಮ ವರ್ಗಕ್ಕಿಲ್ಲ.

ಗುಬ್ಬಿ ಕೂಡ ತನ್ನ ವಾಸಕ್ಕೆಂದು ಕಡ್ಡಿ ತಂದು ಮನೆಯ ಗೋಡೆಗಳ ನಡುವೆ ಗೂಡು ಕಟ್ಟುತ್ತದೆ. ಅದು ಗುಬ್ಬಿಗೂಡು. ಅದಕ್ಕೆ ಮರಳು ಬೇಡ. ಆದರೆ ಇಟ್ಟಿಗೆ, ಸಿಮೆಂಟು, ಕಾಂಕ್ರೀಟು, ಕಬ್ಬಿಣ ಇಟ್ಟುಕೊಂಡು ಕುಳಿತ ನಮಗೆ ಮರಳು ಬೇಕು. ಅದು ಕೈಗೆಟಕುವ ದರಕ್ಕೆ ದಕ್ಕಬೇಕು. ಅದಕ್ಕಾಗಿ ಇರುವ ಮಾರ್ಗ ಮರಳುಗಾರಿಕೆ ರಾಷ್ಟ್ರೀಕರಣವಾಗಬೇಕು. ಸರ್ಕಾರದ ಸುಪರ್ದಿಯಲ್ಲಿ ಜಿ.ಪಿ.ಎಸ್. ಯಾರ್ಡ್‌ಗಳು ಜಾಸ್ತಿಯಾಗಬೇಕು. ದಕ್ಷ, ಜನಪ್ರೀತಿಯ ಅಧಿಕಾರಿಗಳು ನೇಮಕವಾಗಬೇಕು. ಆಗ ಮಾತ್ರ ಮಧ್ಯಮ ವರ್ಗದವರ ಮನೆಕಟ್ಟುವ ಕನಸು ನನಸಾಗುತ್ತದೆ. 1978ರಲ್ಲಿ ಸ್ಪಂದನ ಚಿತ್ರದಲ್ಲಿ ಲಕ್ಷ್ಮಿನಾರಾಯಣಭಟ್ಟರು ಬರೆದ ಹಾಡೊಂದಿತ್ತು. 'ಎಂಥಾ ಮರುಳಯ್ಯ ಇದು ಎಂಥಾ ಮರುಳು'– ಅಂತ ಶುರುವಾಗುತ್ತೆ ಅದು. ಆದರೆ ಈವತ್ತು ಮರಳಿಗಾಗಿ ನಾವೇ ಮರುಳಾಗುವ ಕಾಲ ಬಂದಿದೆ. 'ಎಂಥಾ ಮರಳಯ್ಯಾ ಇದು ಎಂಥಾ ಮರಳು ! ಅಲ್ಲವೇ? ಏನಂತೀರಿ?

ರಾಹುಲ್ ಗಾಂಧಿ ಲೋಕಸಭೆ ಸದಸ್ಯತ್ವ ಪುನಃಸ್ಥಾಪಿಸಿದ ಸ್ಪೀಕರ್ ಓಂ ಬಿರ್ಲಾ

ನವದೆಹಲಿ: ಮೋದಿ ಉಪನಾಮ ಟೀಕೆ ಪ್ರಕರಣಕ್ಕೆ ಸಂಬಂಧಿಸಿ ಸೂರತ್ ನ್ಯಾಯಾಲಯವು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಅವರಿಗೆ ವಿಧಿಸಿದ್ದ 2 ವರ್ಷಗಳ ಜೈಲು ಶಿಕ್ಷೆ ಪ್ರಕರಣಕ್ಕೆ ಸುಪ್ರಿಂಕೋರ್ಟ್ ತಡೆಯಾಜ್ಞೆ ವಿಧಿಸಿದ ಬೆನ್ನಲ್ಲೇ, ರಾಹುಲ್ ಗಾಂಧಿಯವರ ಸಂಸತ್ ಸದಸ್ಯತ್ವವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಪುನಃಸ್ಥಾಪಿಸಿದ್ದಾರೆ.

ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಸಂಸತ್ ಸ್ಥಾನದಿಂದ ಅನರ್ಹಗೊಳಿಸಲಾಗಿದ್ದ ಆದೇಶವನ್ನು ವಾಪಸ್ ಪಡೆಯಲಾಗಿದ್ದು, ಅವರ ಸದಸ್ಯತ್ವವನ್ನು ಮರುಸ್ಥಾಪಿಸಲಾಗಿದೆ ಎಂದು ಲೋಕಸಭೆ ಸೆಕ್ರೆಟರಿಯೇಟ್ ಅಧಿಸೂಚನೆ ಹೊರಡಿಸಿದೆ. 24ನೇ ಮಾರ್ಚ್, 2023ರಂದು ಸೂರತ್ ಕೋರ್ಟ್ ನೀಡಿದ್ದ ಆದೇಶವನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು 04.08.2023ರಂದು, ವಿಶೇಷ ರಜೆ (Crl.) ಸಂಖ್ಯೆ 8644/2023 ಅನ್ವಯ, ರಾಹುಲ್ ಗಾಂಧಿ ಅವರ ಅಪರಾಧ ನಿರ್ಣಯವನ್ನು ತಡೆ ಹಿಡಿಯುವ ಆದೇಶವನ್ನು ಜಾರಿಗೊಳಿಸಿದೆ. ಭಾರತದ ಸರ್ವೋಚ್ಚ ನ್ಯಾಯಾಲಯ 04.08.2023ರಂದು ಸೂರತ್ ಕೋರ್ಟ್ ಆದೇಶಕ್ಕೆ ತಡೆ ನೀಡಿರುವುದರಿಂದ ರಾಹುಲ್ ಗಾಂಧಿಯವರ ಅನರ್ಹತೆಯನ್ನು ಭಾರತದ ಸಂವಿಧಾನದ 102 (1) (ಇ)ನ ನಿಬಂಧನೆಗಳ ಪ್ರಕಾರ, ಪರಿಚ್ಛೇದ 8ರಂತೆ 1951ರ ಜನತಾ ಕಾಯಿದೆ ಅನ್ವಯ ಹಾಗೂ ಮುಂದಿನ ನ್ಯಾಯಾಂಗ ತೀರ್ಪುಗಳಿಗೆ ಒಳಪಟ್ಟು ಅವರ ಅನರ್ಹತೆಯನ್ನು ವಾಪಸ್ ಪಡೆಯಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ. ಕೋರ್ಟ್ ಆದೇಶ ಪ್ರತಿಯೊಂದಿಗೆ ಶುಕ್ರವಾರವೇ ಲೋಕಸಭಾ ಕಾರ್ಯದರ್ಶಿ ಭೇಟಿ ಮಾಡಿದ್ದ ಕಾಂಗ್ರೆಸ್ ನಾಯಕರು, ರಾಹುಲ್ ಅನರ್ಹತೆ ಆದೇಶ ರದ್ದು ಮಾಡುವಂತೆ ಮನವಿ ಮಾಡಿದ್ದರು. ಆ.8 ಹಾಗೂ 9ರಂದು ಕಾಂಗ್ರೆಸ್ ಮಂಡಿಸಿರುವ ಕೇಂದ್ರದ ವಿರುದ್ಧ ಅವಿಶ್ವಾಸ ನಿಲುವಳಿ ಮೇಲಿನ ಚರ್ಚೆ ನಡೆಯಲಿದೆ. ಈ ಚರ್ಚೆಯಲ್ಲಿ ರಾಹುಲ್ ಗಾಂಧಿಯವರು ಭಾಗವಹಿಸಬೇಕೆಂಬುದು ಕಾಂಗ್ರೆಸ್ ನಾಯಕರ ಬಯಕೆಯಾಗಿತ್ತು.

ಇಂದಿನ ಕಲಾಪದಲ್ಲಿ ಭಾಗಿ



ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ಸೂರತ್ ಮ್ಯಾಜಿಸ್ಟ್ರೇಟ್ ವಿಧಿಸಿರುವ ಶಿಕ್ಷೆಗೆ ತಡೆ ನೀಡಲು ನಿರಾಕರಿಸಿದ್ದ ಗುಜರಾತ್ ಹೈಕೋರ್ಟ್ ಆದೇಶ ಪ್ರಶ್ನಿಸಿ ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಆದೇಶದ ವಿರುದ್ಧ ಜು.15ರಂದು ಸುಪ್ರೀಂಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಬಿಆರ್ ಗವಾಯಿ, ಪಿಎಸ್ ನರಸಿಂಹ ಮತ್ತು ಸಂಜಯ್ ಕುಮಾರ್ ಅವರನ್ನೊಳಗೊಂಡ ಪೀಠವು ಶುಕ್ರವಾರ ಪ್ರಕರಣದ ವಿಚಾರಣೆ ನಡೆಸಿತ್ತು. ಈ ವೇಳೆ ಸೂರತ್ ನ್ಯಾಯಾಲಯದ ಆದೇಶಕ್ಕೆ ತಡೆ ನೀಡಿತ್ತು.

ಏನಿದು ಪ್ರಕರಣ?: ರಾಹುಲ್ ಅವರು 2019ರ ಏಪ್ರಿಲ್ 13ರಂದು ಕೋಲಾರದಲ್ಲಿ ನಡೆದ ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಷಣ ಮಾಡಿದ್ದರು. ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ, ಎಲ್ಲಾ ಕಳ್ಳರಿಗೆ ಮೋದಿ ಎಂಬ ಉಪನಾಮ ಏಕಿದೆ ಎಂದು ಪ್ರಶ್ನಿಸಿದ್ದರು. ಈ ಬಗ್ಗೆ ಗುಜರಾತ್ ಶಾಸಕ ಪೂರ್ಣೇಶ್ ಮೋದಿ ಅವರು, ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಈ ಪ್ರಕರಣದಲ್ಲಿ ರಾಹುಲ್ ಅವರು, ಎರಡು ವರ್ಷ ಶಿಕ್ಷೆಗೆ ಗುರಿಯಾಗಿ ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿದ್ದರು.

ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.7– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಬುದ್ಧ, ಕ್ರಿಶ್ಚಿಯನ್, ಪಾರ್ಸಿ, ಸಿಖ್) ಹಾಗೂ ಹಿಂದುಳಿದ ವರ್ಗಗಳದ ಪ.ಜಾ, ಪ.ಪಂ ವಿದ್ಯಾರ್ಥಿಗಳಿಗೆ ಶೇ.25 ಮೀಸಲಾತಿ ಇದ್ದು 2023–24 ನೇ ಸಾಲಿಗೆ http://shp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 16 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ http://shp.karnataka.gov.in ಅಥವಾ ದೂ.ಸಂ: 9844342339, 7019652782 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ಉಪವಿಭಾಗದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜನಪ್ರತಿನಿಧಿಗಳೇ 'ಜನ ಪರ' ಇಲ್ಲವೇ...!?

ಮೈಸೂರು ಪಾಲಿಕೆ ಫುಟ್‌ಪಾತ್ ಅತಿಕ್ರಮಣ ತೆರವು ನಾಮಕಾವಸ್ತೆ: ಮತ್ತೆ ಪಾದಚಾರಿ ಮಾರ್ಗದಲ್ಲಿ ಶುರುವಾಯ್ತು ವ್ಯಾಪಾರ ವಹಿವಾಟು



ಮೈಸೂರು,ಆ.7(ಆರ್‌ಕೆ)– ಜನಪ್ರತಿನಿಧಿಗಳೇ ಜನಪರ ಇಲ್ಲ ಎಂಬುದಕ್ಕೆ ಇದೊಂದು ತಾಜಾ ನಿದರ್ಶನ. ಜೊತೆಗೆ ಅತ್ಯಂತ ವಿಷಾದದ ಸಂಗತಿ. ಮೈಸೂರು ಮಹಾ ನಗರಪಾಲಿಕೆ ವತಿಯಿಂದ ನಡೆದಂತಹ ಫುಟ್‌ಪಾತ್ ತೆರವು ಕಾರ್ಯಾಚರಣೆ ಒಂದು ವ್ಯರ್ಥ ಪ್ರಯತ್ನವಾಗಿದೆ. ಮೇಲಾಗಿ ಫುಟ್‌ಪಾತ್, ಪಾದಚಾರಿಗಳಿಗೆ ಮೀಸಲು ಎಂಬ ನ್ಯಾಯಾಲಯಗಳ ಆದೇಶಗಳಿಗೂ ಜನಪ್ರತಿನಿಧಿಗಳೇ ಎಳ್ಳು ನೀರು ಬಿಡುತ್ತಿದ್ದಾರೆ ಎಂಬ ಆಕ್ರೋಶವೂ ವ್ಯಕ್ತವಾಗುತ್ತಿದೆ.

ಫುಟ್‌ಪಾತ್ ಅತಿಕ್ರಮಣ ಸಂಬಂಧ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಜುಲೈ 19ರಿಂದ ಸುಮಾರು ಒಂದು ವಾರ ಕಾಲ ನಿರಂತರ ಕಾರ್ಯಾಚರಣೆ ನಡೆಸಿದ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಅರಮನೆ ಸುತ್ತಲಿನ ರಸ್ತೆ, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಓಲ್ಡ್ ಬ್ಯಾಂಕ್ ರಸ್ತೆ, ಗಾಂಧಿ ಚೌಕ, ಮಕ್ಕಾಜಿ ಚೌಕ, ಪುರಭವನದ ಎದುರು ಫುಟ್‌ಪಾತ್ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದವರನ್ನು ಪೊಲೀಸರ ನೆರವು ಪಡೆದು ತೆರವುಗೊಳಿಸಿದ್ದರು.

ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಪಾಲಿಕೆ ಆಯುಕ್ತರಾಗಿದ್ದ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಸ್ಥಳ ಪರಿಶೀಲನೆ ಮಾಡಿ, ಪಾದಚಾರಿಗಳು ಓಡಾಡಲು ತೊಂದರೆಯಾಗುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಫುಟ್‌ಪಾತ್ ಒತ್ತುವರಿ ತೆರವುಗೊಳಿಸುವಂತೆ ನಿರ್ದೇಶನ ನೀಡಿದ್ದರು. ಪಾಲಿಕೆ ಹಿರಿಯ ವೈದ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್ ನೇತೃತ್ವದಲ್ಲಿ ಇಂಜಿನಿಯರ್‌ಗಳು, ಅಭಯ ತಂಡದ ಸಿಬ್ಬಂದಿ ಪೊಲೀಸ್ ಭದ್ರತೆಯೊಂದಿಗೆ ಒಂದು ವಾರ ನಿರಂತರ ಕಾರ್ಯಾಚರಣೆ ನಡೆಸಿ, ಮೈಸೂರು ಹೃದಯ ಭಾಗದಲ್ಲಿ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿದ್ದರು. ಪಾಲಿಕೆಯ ಆ ಕ್ರಮಕ್ಕೆ ಪಾದಚಾರಿಗಳು ಮಾತ್ರವಲ್ಲ ಸಾರ್ವಜನಿಕರಿಂದಲೂ ಭಾರೀ ಮೆಚ್ಚುಗೆ ವ್ಯಕ್ತವಾಗಿತ್ತು.

ಕೆ.ಆರ್. ಸರ್ಕಲ್‌ನಿಂದ ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್‌ವರೆಗೆ ಸಯ್ಯಾಜಿರಾವ್ ರಸ್ತೆಯ ಎರಡೂ ಕಡೆ, ಓಲ್ಡ್ ಬ್ಯಾಂಕ್ ರಸ್ತೆ, ಗಾಂಧಿ ಚೌಕ, ಮಕ್ಕಾಜಿ ಚೌಕ, ಕೆ.ಆರ್. ಸರ್ಕಲ್, ಪುರಭವನ ಬಳಿಯ ರಸ್ತೆಗಳ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುತ್ತಿದ್ದರಿಂದ ಓಡಾಡಲು ಸ್ಥಳವಿಲ್ಲದೆ ಪಾದಚಾರಿಗಳು ಅನಿವಾರ್ಯವಾಗಿ ರಸ್ತೆಗಿಳಿಯುತ್ತಿದ್ದರಿಂದ ಆಗಾಗ ಅಪಘಾತಗಳಾಗುತ್ತಿದೆಯಲ್ಲದೆ, ಸಾರ್ವಜನಿಕ ವಲಯದಲ್ಲಿ ಕಿರಿಕಿರಿ ಉಂಟಾಗುತ್ತಿದೆ.

ಪಾಲಿಕೆ ಅಧಿಕಾರಿಗಳು, ಮೇಯರ್ ಮತ್ತು ಆಯುಕ್ತರ ನಿರ್ದೇಶನದ ಮೇರೆಗೆ ಫುಟ್‌ಪಾತ್ ಒತ್ತುವರಿ ತೆರವುಗೊಳಿಸುತ್ತಿದ್ದಂತೆಯೇ ಫುಟ್‌ಪಾತ್ ವ್ಯಾಪಾರಿಗಳು ಮೇಯರ್ ಶಿವಕುಮಾರ್ ಬಳಿ ನಿಯೋಗ ತೆರಳಿ ಮನವಿ ಮಾಡಿದ್ದರು. ಸಾರ್ವಜನಿಕರ ಹಿತದೃಷ್ಟಿಯಿಂದ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡಲು ಅವಕಾಶ ನೀಡಲು ಸಾಧ್ಯವಿಲ್ಲ. ಮುಂದೆ ತಮಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುತ್ತೇವೆ ಎಂದು ಹೇಳಿ ಕಳುಹಿಸಿದ್ದರು.

ನಂತರ ಅವರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಬಳಿ ತಮ್ಮ ಅಳಲು ತೋಡಿಕೊಂಡ ಕಾರಣ, ಅವರು ಎಂದಿನಂತೆ ವ್ಯಾಪಾರ ಮಾಡಿಕೊಳ್ಳಲಿ ಎಂದು ಅಧಿಕಾರಿಗಳಿಗೆ ಮೌಖಿಕವಾಗಿ ಸೂಚಿಸಿದ ಕಾರಣ ಫುಟ್‌ಪಾತ್ ಮೇಲೆ ಈಗ ಮತ್ತೆ ವ್ಯಾಪಾರ ವಹಿವಾಟು ಆರಂಭವಾಗಿದೆ.

ಪಾಲಿಕೆ ಅಧಿಕಾರಿಗಳು ಬಂದು ಕೇಳಿದಾಗ 'ಶಾಸಕರೇ ವ್ಯಾಪಾರ ಮಾಡುವಂತೆ ಹೇಳಿದ್ದಾರೆ' ಎಂದು ಜವಾಬು ನೀಡುವ ಫುಟ್‌ಪಾತ್ ವ್ಯಾಪಾರಿಗಳು, ತಾವೇ ಹರೀಶ್‌ಗೌಡರಿಗೆ ನೇರವಾಗಿ ಫೋನ್ ಮಾಡಿ, ಮಾತಾಡಿ ಎಂದು ಅಧಿಕಾರಿಗಳ ಕೈಗೆ ಮೊಬೈಲ್ ನೀಡುತ್ತಿದ್ದಾರೆ. ಜನಪ್ರತಿನಿಧಿಗಳೇ ಸಾಥ್ ನೀಡಿದಾಗ ಅಧಿಕಾರಿಗಳು ಏನು ಮಾಡಲು ಸಾಧ್ಯ? ಆಡಳಿತ ಪಕ್ಷದ ಶಾಸಕರನ್ನು ಎದುರು ಹಾಕಿಕೊಂಡು ನೀತಿ–ನಿಯಮ, ಕಾನೂನನ್ನು ಅನುಷ್ಠಾನಗೊಳಿಸುವ ಧೈರ್ಯವನ್ನು ಅಧಿಕಾರಿಗಳು ಮಾಡಲು ಸಾಧ್ಯವೇ?

ಶಾಸಕರು ಗ್ರೀನ್ ಸಿಗ್ನಲ್ ನೀಡುತ್ತಿದ್ದಂತೆಯೇ ಫುಟ್‌ಪಾತ್ ವ್ಯಾಪಾರಿಗಳು ಎಂದಿನಂತೆ ತಮ್ಮ ವ್ಯಾಪಾರ ಪುನರಾರಂಭಿಸಿದ್ದಾರೆ. ಇದೀಗ ನಗರದ ಹೃದಯ ಭಾಗದಲ್ಲಿ ಫುಟ್‌ಪಾತ್ ಮೇಲೆ ಜನರು ಓಡಾಡಲು ಸಾಧ್ಯವಿಲ್ಲದಂತಹ ದುಸ್ಥಿತಿ ನಿರ್ಮಾಣವಾಗಿದೆ. ಒಂದು ವಾರ ಕಾಲ ಪಾಲಿಕೆ ಅಧಿಕಾರಿಗಳು ಫುಟ್‌ಪಾತ್ ತೆರವು ಕಾರ್ಯಾಚರಣೆ ನಡೆಸಿದ್ದರು. ಈಗ ಮತ್ತೆ ಫುಟ್‌ಪಾತ್‌ಗಳು ಯಥಾಸ್ಥಿತಿಗೆ ಮರಳಿದ್ದು, ಪಾಲಿಕೆ ಆಡಳಿತ ಅಸಹಾಯಕ ಸ್ಥಿತಿಗೀಡಾಗಿದೆ. ಪಾದಚಾರಿಗಳು ರಸ್ತೆಗಿಳಿದು ಅಪಘಾತಗಳಾದರೆ ಯಾರು ಜವಾಬ್ದಾರರು? ಫುಟ್‌ಪಾತ್ ಅನ್ನು ವ್ಯಾಪಾರಿಗಳು ಅತಿಕ್ರಮ ಮಾಡಿದರೆ ಪಾದಚಾರಿಗಳ ಹಕ್ಕು ಉಲ್ಲಂಘನೆಯಾದಂತಾಗುವುದಿಲ್ಲವೇ? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ. ಮೈಸೂರು ಹೃದಯಭಾಗದಲ್ಲಿ ಈ ರೀತಿಯ ಪರಿಸ್ಥಿತಿಗೀಡು ಮಾಡುವುದು ಒಳ್ಳೆಯ ಸಂಗತಿಯಲ್ಲ. ಯಾರಾದರೂ ನ್ಯಾಯಾಲಯದ ಮೊರೆ ಹೋದರೆ ಮಾತ್ರ ಪಾದಚಾರಿಗಳ ಹಕ್ಕು ಪುನರ್ ಸ್ಥಾಪನೆ ಸಾಧ್ಯವಾಗಬಹುದು ಎಂದು ವಯೋವೃದ್ಧರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ಮೆಜೆಸ್ಟಿಕ್‌ನಲ್ಲೂ ಇದೇ ಪರಿಸ್ಥಿತಿ ಇತ್ತು...

“ ಇದೇ ಪರಿಸ್ಥಿತಿ ಬೆಂಗಳೂರು ಮೆಜೆಸ್ಟಿಕ್‌ನಲ್ಲಿ ಬಸ್ ನಿಲ್ದಾಣದಿಂದ ರೈಲು ನಿಲ್ದಾಣಕ್ಕೆ ಹಾದು ಹೋಗುವ ಅಂಡರ್‌ಪಾಸ್‌ನಲ್ಲಿ ಉಂಟಾಗಿತ್ತು. ಯಾವ ಜನಪ್ರತಿನಿಧಿ, ಪೊಲೀಸ್ ಅಧಿಕಾರಿಗಳಿಗೆ ದೂರಿತ್ತರೂ ಏನೂ ಪ್ರಯೋಜನವಾಗಿರಲಿಲ್ಲ. ಕೊನೆಗೆ ಸಾಮಾಜಿಕ ಕಾರ್ಯಕರ್ತ ಕಂಚನಹಳ್ಳಿ ರವಿಕುಮಾರ್ ಎಂಬುವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್‌ನ ಹಿಂದಿನ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಮತ್ತು ನ್ಯಾಯಮೂರ್ತಿ ಪಿ.ಎಸ್.ದಿನೇಶ್‌ಕುಮಾರ್ ಒಳಗೊಂಡ ವಿಭಾಗೀಯ ಪೀಠ ದೂರುದಾರರ ಆರೋಪಕ್ಕೆ ಸಂಬಂಧಿಸಿದಂತೆ ಸತ್ಯಾಸತ್ಯತೆ ಪರಿಶೀಲನೆ ಮತ್ತು ಕ್ರಮ ಕೈಗೊಳ್ಳಲು ಓರ್ವ ಅಧಿಕಾರಿಯನ್ನು ನಿಯೋಜಿಸುವಂತೆ ಬೃಹತ್ ಬೆಂಗಳೂರು ಮಹಾ ನಗರಪಾಲಿಕೆಗೆ ನಿರ್ದೇಶನ ನೀಡಿತ್ತು. ಕೋರ್ಟ್ ಮಧ್ಯ ಪ್ರವೇಶದಿಂದಾಗಿ ಇಲ್ಲಿ ಈಗ ಪಾದಚಾರಿಗಳು ನಿರಾತಂಕ ಹಾಗೂ ಮುಕ್ತವಾಗಿ ಸಂಚರಿಸಲು ಅವಕಾಶ ಕಲ್ಪಿಸಿಕೊಟ್ಟಂತಾಗಿದೆ.

ನಾಲಿಗೆಯ ಮೇಲೆ ಹಿಡಿತವಿರಲಿ, ಇಲ್ಲದಿದ್ದರೆ...

ಪಂಜಾಬ್ ಗವರ್ನರ್–ಸಿಎಂ ಮಾನ್ ನಡುವೆ ಮತ್ತೆ ಮಾತಿನ ಸಮರ!



ಚಂಡೀಗಢ: ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ನಡುವೆ ನಡೆಯುತ್ತಿರುವ ಸಂಘರ್ಷ ಇದೀಗ ಪಂಜಾಬ್‌ನಲ್ಲೂ ಸೃಷ್ಟಿಯಾಗಿದೆ. ಪಂಜಾಬ್‌ನ ಎಎಪಿ ಸರ್ಕಾರದ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಮುಖಾಮುಖಿಯಾಗಿದ್ದಾರೆ. ಸದನದ ಹೊರಗೆ ಕೂಡ ತಮ್ಮ ಬಗ್ಗೆ ಅಸಭ್ಯ ಟೀಕೆಗಳನ್ನು ಮಾಡಿದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಭಗವಂತ್ ಮಾನ್ ವಿರುದ್ಧ ಪುರೋಹಿತ್ ಅವರು ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ. ಭಗವಂತ್ ಮಾನ್ ವಿರುದ್ಧ ಕ್ರಿಮಿನಲ್ ದೂರು ದಾಖಲಿಸುವುದಾಗಿ ರಾಜ್ಯಪಾಲರು ತಿಳಿಸಿದ್ದಾರೆ.

ಭಗವಂತ್ ಮಾನ್ ಸದನದೊಳಗೆ ನನ್ನ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅವರು ಪತ್ರಗಳನ್ನು ಬರೆಯುತ್ತಲೇ ಇರುತ್ತಾರೆ. ನನ್ನ ಸಮಯ ಎಲ್ಲಿದೆ? ಅದೆಲ್ಲ ಸರಿಯಿಲ್ಲ. ಮುಖ್ಯಮಂತ್ರಿಗೆ ಸದನದಲ್ಲಿ ಸ್ವಲ್ಪ ರಕ್ಷಣೆ ಸಿಗುತ್ತದೆ. ಇದನ್ನೆಲ್ಲ ಅವರು ಸದನದ ಹೊರಗೆ ಹೇಳಲಿ. ಅವರು ಹಾಗೆ ಮಾಡಿದ ದಿನ, ನಾವು ಅವರ ವಿರುದ್ಧ ಐಪಿಸಿ ಸೆಕ್ಷನ್ 124ರ ಅಡಿಯಲ್ಲಿ ಪ್ರಕರಣ ದಾಖಲಿಸುತ್ತೇವೆ. ಮಾನ್ ಯಾವುದೇ ರೀತಿಯ ಒತ್ತಡ ಹೇರಲು ಯತ್ನಿಸಿದರೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಹೇಳಿದರು. ರಾಜ್ಯ ಪಾಲರಿಗೆ ಹೆಚ್ಚಿನ ಅಧಿಕಾರವಿದ್ದು, ನಾಲಿಗೆಯ ಬಗ್ಗೆ ನಿಗಾ ವಹಿಸಿ, ಅನಗತ್ಯ ನಿಂದನೆ ಮಾಡಬೇಡಿ ಎಂದರು.

ದಿ ಎಲಿಫೆಂಟ್ ವಿಸ್ಪರರ್ಸ್ ಖ್ಯಾತಿಯ ನಿರ್ದೇಶಕಿ ಕಾರ್ತಿಕಿ ಗೊನ್ಸಾಲ್ವಿಸ್ ಮೇಲೆ ಬೆಳ್ಳಿ, ಬೊಮ್ಮ ಗಂಭೀರ ಆರೋಪ

ನವದೆಹಲಿ, ಆ.7– ತಾವು ಕೊಟ್ಟ ಹಣವನ್ನು ನಿರ್ದೇಶಕಿ ಕಾರ್ತಿಕಿ ಗೊನ್ಸಾಲ್ವಿಸ್ ಹಿಂತಿರುಗಿಸಿಲ್ಲ ಎಂದು ಬೆಳ್ಳಿ ಹಾಗೂ ಬೊಮ್ಮ ಅವರು ಆರೋಪ ಮಾಡಿದ್ದಾರೆ.

ಪ್ರತಿಷ್ಠಿತ ಆಸ್ಕರ್ ಅವಾರ್ಡ್ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಡಾಕ್ಯುಮೆಂಟರಿ ಸಿನಿಮಾದ ನಿರ್ದೇಶಕಿ ಕಾರ್ತಿಕಿ ಗೊನ್ಸಾಲ್ವಿಸ್ ವಿರುದ್ಧ ಬೆಳ್ಳಿ ಹಾಗೂ ಬೊಮ್ಮ ಗಂಭೀರ ಆರೋಪ ಮಾಡಿದ್ದಾರೆ. ಸಾಕ್ಷ್ಯಚಿತ್ರವನ್ನು ಚಿತ್ರೀಕರಣ ಮಾಡುವ ವೇಳೆ ನಿರ್ದೇಶಕಿ ಕಾರ್ತಿಕಿ ಗೊನ್ಸಾಲ್ವಿಸ್ ತಮ್ಮೊಂದಿಗೆ ಬಹಳ ಆತ್ಮೀಯವಾಗಿದ್ದರು. ಆದರೆ, ಸಾಕ್ಷ್ಯಚಿತ್ರ ಆಸ್ಕರ್ ಪ್ರಶಸ್ತಿ ಗೆದ್ದ ನಂತರ ಅವರು ಬದಲಾಗಿದ್ದಾರೆ ಎಂದು ಆರೋಪ ಮಾಡಿದ್ದಾರೆ. ಫೋನ್ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ ಹಾಗೂ ತಮಗೆ ಇದುವರೆಗೆ ಹಣ ನೀಡಿಲ್ಲ ಎಂದು ಆರೋಪಿಸಿದ್ದಾರೆ. ಇತ್ತೀಚೆಗೆ ನಡೆದ ಸಂದರ್ಶನವೊಂದರಲ್ಲಿ ಮಾತನಾಡಿದ ಬೆಳ್ಳಿ ಹಾಗೂ ಬೊಮ್ಮ ಅವರು ಆಸ್ಕರ್ ವಿಜೇತ ನಿರ್ದೇಶಕಿ ಕಾರ್ತಿಕಿ ಗೊನ್ಸಾಲ್ವಿಸ್ ಮೇಲೆ ಹಣ ಹಿಂತಿರುಗಿ ಸದೇ ಇರುವ ಗಂಭೀರ ಆರೋಪ ಮಾಡಿದ್ದಾರೆ.

ಸಾಕ್ಷ್ಯಚಿತ್ರ ಶೂಟಿಂಗ್ ಸಮಯದಲ್ಲಿ ನಿರ್ದೇಶಕಿ ಕಾರ್ತಿನಿ ಗೊನ್ಸಾಲ್ವಿಸ್ ಅವರು ನಮ್ಮೊಂದಿಗೆ ತುಂಬಾ ಚೆನ್ನಾಗಿದ್ದರು. ಶೂಟಿಂಗ್ ಸಮಯದಲ್ಲಿ ಒಂದು ದಿನ ನಮ್ಮ ಬಳಿ ಬಂದು, ಒಂದು ಮದುವೆಯ ದೃಶ್ಯ ಶೂಟ್ ಮಾಡಲು ಬಯಸುವುದಾಗಿ ಹೇಳಿದ್ದರು.



ಬೆಳ್ಳಿ ಹಾಗೂ ಬೊಮ್ಮ ದಂಪತಿ

ಅವರ ಬಳಿ ಹಣವಿಲ್ಲದ ಕಾರಣ ನಮ್ಮ ಬಳಿ ಅದರ ವ್ಯವಸ್ಥೆ ಮಾಡಲು ಕೇಳಿದರು. ಮೊಮ್ಮಗಳ ವಿದ್ಯಾಭ್ಯಾಸಕ್ಕಾಗಿ ಬೆಳ್ಳಿ ಕೂಡಿಟ್ಟಿದ್ದ ಹಣವನ್ನು ನಾವೇ ತೆಗೆದು ಅವರಿಗೆ ಕೊಟ್ಟೆವು. ಮದುವೆ ಸಮಾರಂಭದ ದೃಶ್ಯದ ಚಿತ್ರೀಕರಣಕ್ಕಾಗಿ ನಾವು ಸುಮಾರು 1 ಲಕ್ಷ ರೂಪಾಯಿ ಖರ್ಚು ಮಾಡಿದೆವು. ಒಮ್ಮೆ ನಾವು ಕರೆ ಮಾಡಿ ಕೇಳಿದಾಗ ಅದನ್ನು ಹಿಂದಿರುಗಿಸುವುದಾಗಿ ಹೇಳಿದ್ದರು. ಆದರೆ, ಇದುವರೆಗೆ ಮಾಡಿಲ್ಲ. ಆದರೆ ನಾವು ಕರೆ ಮಾಡಿದಾಗ ಬ್ಯುಸಿ ಇದ್ದೇನೆ ಎಂದು ಹೇಳಿ ಕಾಲ್ ಕಟ್ ಮಾಡುತ್ತಿದ್ದಾರೆ ಎಂದು ದುಃಖ ತೋಡಿಕೊಂಡಿದ್ದಾರೆ. ಅವರು ನಮ್ಮಿಂದಾಗಿ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಗೆದ್ದಿದ್ದರು. ಆದರೆ, ಅಭಿನಂದನಾ ಸಮಾರಂಭದಲ್ಲಿ ಆಸ್ಕರ್ ಪ್ರಶಸ್ತಿಯನ್ನು ಹಿಡಿಯಲು ಕೂಡ ಅವರು ಬಿಡಲಿಲ್ಲ. ಈ ಸಾಕ್ಷ್ಯಚಿತ್ರದ ನಂತರ ನಾವು ನಮ್ಮ ಸ್ಥೈರ್ಯವನ್ನು ಕಳೆದುಕೊಂಡಿದ್ದೇವೆ ಎಂದು ಸಂದರ್ಶನದಲ್ಲಿ ಆರೋಪಿಸಿದರು. ಸಾಕ್ಷ್ಯಚಿತ್ರ ನಿರ್ಮಾಣ ಸಂಸ್ಥೆ ಈ ದಂಪತಿಯ ಆರೋಪವನ್ನು ತಳ್ಳಿ ಹಾಕಿದ್ದು, ಅವರ ಮಾತುಗಳಲ್ಲಿ ಯಾವುದೇ ಸತ್ಯಾಂಶವಿಲ್ಲ. ನಾವು ಅರಣ್ಯ ಇಲಾಖೆ ಮತ್ತು ವನ್ಯಜೀವಿ ಸಂರಕ್ಷಣೆಯ ಕಾರ್ಯವನ್ನು ಹೊಗಳುವ ಉದ್ದೇಶದಿಂದ ಈ ಸಾಕ್ಷ್ಯಚಿತ್ರವನ್ನು ಪ್ರಾರಂಭಿಸಿದೆವು ಎಂದು ಹೇಳಿದೆ. ತಮಿಳುನಾಡಿನ ಮದುಮಲೈ ಮೀಸಲು ಅರಣ್ಯದಲ್ಲಿ ಆನೆ ಪಾಲಕರಾಗಿ ಕೆಲಸ ಮಾಡುವ ಬೆಳ್ಳಿ ಹಾಗೂ ಬೊಮ್ಮ ದಂಪತಿಯು ನಿಜ ಜೀವನವನ್ನು ಆಧರಿಸಿ, 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿದೆ. ರಘು ಮತ್ತು ಅಮ್ಮು ಎಂಬ ಎರಡು ಆನೆ ಮರಿಗಳು ಹಾಗೂ ಅವುಗಳನ್ನು ಪಾಲನೆ ಮಾಡುವಂಥ ದಂಪತಿಯ ಸುತ್ತ ಕಥೆ ಸುತ್ತುತ್ತದೆ. ನಿರ್ಮಾಪಕಿ ಗುನೀತ್ ಮೊಂಗಾ ಮಾರ್ಗದರ್ಶನದಲ್ಲಿ ನಿರ್ದೇಶಕಿ ಕಾರ್ತಿನಿ ಗೊನ್ಸಾಲ್ವಿಸ್ ಈ ಸಾಕ್ಷ್ಯಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. 42 ನಿಮಿಷಗಳ ಅವಧಿಯ ಈ ಸಾಕ್ಷ್ಯಚಿತ್ರವು 2023ರ ಅತ್ಯುತ್ತಮ ಸಾಕ್ಷ್ಯಚಿತ್ರಕ್ಕಾಗಿ ಆಸ್ಕರ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿದೆ.



ಕಾರ್ತಿಕಿ ಗೊನ್ಸಾಲ್ವಿಸ್

ಇಂದಿನಿಂದ 15ರವರೆಗೆ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ



ಮೈಸೂರು,ಆ.7–ಮೈಸೂರಿನ ಶಾರದಾದೇವಿನಗರದಲ್ಲಿರುವ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ ಏರ್ಪಡಿಸಲಾಗಿದೆ. ಆ.8ರಿಂದ ಆ.15ರವರೆಗೆ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಆವರಣದಲ್ಲಿ ಉಚಿತ ಕಣ್ಣಿನ ತಪಾಸಣೆ ನಡೆಯಲಿದೆ. ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸದುಪಯೋಗಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ. 0821–42633333 ಸಂಪರ್ಕಿಸಬಹುದು ಎಂದು ಅನ್ನಪೂರ್ಣ ಆಸ್ಪತ್ರೆ ಪ್ರಕಟಣೆ ತಿಳಿಸಿದೆ.


ಅಜಯ್ ಪೃಥ್ವಿರಾಜ್‌ಗೆ ಅತ್ಯುತ್ತಮ ಅಥ್ಲೀಟ್ ಅವಾರ್ಡ್

ಮೈಸೂರು, ಆ.7(ಎಂಕೆ)– 15ನೇ ರಾಜ್ಯಮಟ್ಟದ ಶಾಲಾ ಒಲಂಪಿಕ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಟೆರೇಷಿಯನ್ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಅಜಯ್ ಪೃಥ್ವಿರಾಜ್ ಅತ್ಯುತ್ತಮ ಅಥ್ಲೀಟ್ ಅವಾರ್ಡ್ ಪಡೆದಿದ್ದಾರೆ. ಯಂಗ್ ಸ್ಟಾರ್ಸ್ ಸ್ಪೋರ್ಟ್ಸ್ ಪ್ರಮೋಟರ್ಸ್ ಟ್ರಸ್ಟ್ ಅಂಡ್ ಯಂಗ್ ಸ್ಟಾರ್ಸ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ 400 ಮತ್ತು 800 ಮೀಟರ್ ಓಟದಲ್ಲಿ ಪ್ರಥಮ ಪ್ರಥಮ ಬಹುಮಾನ ಹಾಗೂ 14 ವರ್ಷದೊಳಗಿನ ವಿಭಾಗದಲ್ಲಿ ಅತ್ಯುತ್ತಮ ಅಥ್ಲೀಟ್ ಅವಾರ್ಡ್ ಪಡೆದಿದ್ದಾರೆ.



ಪ್ರಾಥಮಿಕ ಒತ್ತುವರಿ ಪಟ್ಟಿ ತಯಾರಿಸಿ, ಪ್ರತೀ ವಾರಾಂತ್ಯ ತೆರವಿಗೆ ಮುಂದಾಗಿ

ಅಧಿಕಾರಿಗಳಿಗೆ ಸಚಿವ ಕೃಷ್ಣಬೈರೇಗೌಡ ಸೂಚನೆ



ಬೆಂಗಳೂರು, ಆ.7–ಸರ್ಕಾರಿ ಒತ್ತುವರಿ ಜಮೀನುಗಳ ಪ್ರಾಥಮಿಕ ಒತ್ತುವರಿ ಪಟ್ಟಿಯನ್ನು ಶೀಘ್ರದಲ್ಲಿ ತಯಾರಿಸಿ ಹಾಗೂ ಪ್ರತೀ ವಾರಾಂತ್ಯದಲ್ಲಿ ಒತ್ತುವರಿ ತೆರವಿಗೆ ಮುಂದಾಗಿ ಎಂದು ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ಸರ್ಕಾರ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನಗರ–ಗ್ರಾಮೀಣ ಭಾಗದ ಜಿಲ್ಲಾಧಿಕಾರಿಗಳು ಹಾಗೂ ಕಂದಾಯ ಇಲಾಖೆ ಆಯುಕ್ತರ ಸಭೆ ಕರೆದಿದ್ದ ಸಚಿವರು, ಸಭೆಯಲ್ಲಿ ಒತ್ತುವರಿ ತೆರವಿಗೆ ಎಲ್ಲ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಆದೇಶಿಸಿದ್ದಾರೆ. ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ ಅವರು, ಬೆಂಗಳೂರು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಜಮೀನು ಒತ್ತುವರಿ ಅತಿದೊಡ್ಡ ಸಮಸ್ಯೆಯಾಗಿದೆ. ಸರ್ಕಾರದ ಜಮೀನು ಭೂ ಮಾಫಿಯಾ ಪಾಲಾಗುತ್ತಿದೆ. ಪರಿಣಾಮ ಸರ್ಕಾರಕ್ಕೆ ಸಾಕಷ್ಟು ಆದಾಯವೂ ಖೋತಾ ಆಗುತ್ತಿದೆ. ಹೀಗಾಗಿ ಅಧಿಕಾರಿಗಳು ಶೀಘ್ರದಲ್ಲಿ ಒತ್ತುವರಿ ಜಮೀನಿನ ಪ್ರಾಥಮಿಕ ಪಟ್ಟಿ ಸಿದ್ಧಪಡಿಸಿ, ಪ್ರತೀ ಶನಿವಾರ ಹಾಗೂ ಭಾನುವಾರ ಒತ್ತುವರಿ ತೆರವಿಗೆ ಮುಂದಾಗಬೇಕು" ಎಂದು ತಿಳಿಸಿದರು.

ಕಳೆದ ಅಧಿವೇಶನದಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವಿನ ಬಗ್ಗೆ ನಮ್ಮ ಸರ್ಕಾರ ಮಾತು ನೀಡಿದೆ. ಕೊಟ್ಟ ಮಾತಿನಂತೆ ಒತ್ತುವರಿ ತೆರವಿನ ಜೊತೆಗೆ ಸರ್ಕಾರಿ ಜಮೀನನ್ನು ರಕ್ಷಿಸುವ ಕೆಲಸವೂ ಆಗಬೇಕು. ಸರ್ಕಾರಿ ಜಮೀನಿನ ಸುತ್ತ ಸುರಕ್ಷಿತ ಬೇಲಿ ಹಾಕಬೇಕು, ಪ್ರತಿವಾರ ಅಧಿಕಾರಿಗಳು 'ಬೀಟ್' ಹಾಕುವ ಮೂಲಕ ಸರ್ಕಾರಿ ಸ್ವತ್ತನ್ನು ಕಾಪಾಡಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪ್ಲ್ಯಾನ್ ಅನುಮತಿಗೆ ಮುನ್ನ ಎಚ್ಚರ: ವಸತಿ ಸಮುಚ್ಚಯ ಸೇರಿದಂತೆ ಯಾವುದೇ ಯೋಜನೆಗಾಗಿ ನೋಂದಣಿ ಬಂದರೂ ಸಹ ಅಧಿಕಾರಿಗಳು ಎಚ್ಚರವಹಿಸಬೇಕು. ನೋಂದಣಿಯಾಗುತ್ತಿರುವ ಭೂಮಿಯ ದಾಖಲೆಗಳನ್ನು ಪರಿಶೀಲಿಸಬೇಕು, ಸರ್ಕಾರಿ ಜಮೀನಾಗಿದ್ದಲ್ಲಿ ಕೂಡಲೇ ಕ್ರಮ ಜರುಗಿಸಬೇಕು. ಇನ್ನಾದರೂ ಅಕ್ರಮ ಒತ್ತುವರಿಗೆ ತಡೆಯೊಡ್ಡಬೇಕು ಎಂದು ಸಚಿವರು ತಿಳಿಸಿದರು. ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಇಲಾಖೆ ಆಯುಕ್ತ ಪಿ.ಸುನೀಲ್‌ಕುಮಾರ್ ಬೆಂಗಳೂರು ನಗರ ಡಿಸಿ ಕೆ.ಎ.ದಯಾನಂದ್, ಬೆಂಗಳೂರು ಗ್ರಾಮಾಂತರ ಡಿಸಿ ಡಾ.ಶಿವಶಂಕರ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಇದ್ದರು.

ಸರ್ಕಾರಿ ಭೂಮಿ ರೀ ಸರ್ವೆ ಆಗಲಿ

ಹಲವಾರು ಪ್ರಕರಣಗಳಲ್ಲಿ ಸರ್ಕಾರಿ ದಾಖಲೆಗಳು ಕಳುವಾಗಿವೆ ಅಥವಾ ಕೆಲವು ದಾಖಲೆಗಳನ್ನು ತಿದ್ದಲಾಗಿದೆ. ಇದರ ಹಿಂದೆ ಭೂ ಮಾಫಿಯಾ ಕೈವಾಡವೂ ಇದೆ. ಹೀಗಾಗಿ ಭೂಸುಧಾರಣೆ–ಬಗರ್ ಹುಕುಂ ಅಡಿಯಲ್ಲಿ ಜಮೀನು ಗ್ರ್ಯಾಂಟ್ ಪಡೆದ ಅರ್ಹ ಫಲಾನುಭವಿಗಳೂ ಸಂಕಷ್ಟ ಎದುರಿಸುವಂತಾಗಿದೆ. ಇದಲ್ಲದೆ, ಗೋಮಾಳ, ಸ್ಮಶಾನದ ಭೂಮಿ, ಕೆರೆ–ಕಟ್ಟೆಗಳೂ ಸಹ ಒತ್ತುವರಿ ಆಗಿದೆ. ಹೀಗಾಗಿ ಭೂ ಮಾಪಕರು ಹಾಗೂ ಗ್ರಾಮ ಲೆಕ್ಕಿಗರು ತಹಶೀಲ್ದಾರ್ ನೇತೃತ್ವದಲ್ಲಿ ಸರ್ಕಾರಿ ದಾಖಲೆಗಳಲ್ಲಿರುವ ಪ್ರತಿ ಸರ್ಕಾರಿ ಜಮೀನನ್ನು ಮತ್ತೆ ರೀ ಸರ್ವೆ (ಮರು ಮಾಪನ) ನಡೆಸಬೇಕು. ಆ ವರದಿಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕು. ಒತ್ತುವರಿಯಾದ ಸರ್ಕಾರಿ ಜಮೀನನ್ನು ಗುರುತಿಸಿ ಪಟ್ಟಿ ಸಿದ್ಧಪಡಿಸಬೇಕು ಎಂದು ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಲಾಯಿತು.

ಮೈಸೂರು ಸೇರಿ ರಾಜ್ಯದ ಮಹಾನಗರಗಳ ಸಂಚಾರ ನಿರ್ವಹಣೆಗೆ ಸಿಂಗಪೂರ ಉದ್ಯಮಿಗಳ ಒಲವು

ಬೆಂಗಳೂರು,ಆ.7(ಕೆಎಂಶಿ)–ಬೆಂಗಳೂರು–ಮೈಸೂರು ಸೇರಿದಂತೆ ರಾಜ್ಯದ ಪ್ರಮುಖ ಮಹಾನಗರಗಳ ವ್ಯಾಪ್ತಿಯಲ್ಲಿ ಸಂಚಾರ ಸುಧಾರಣೆಗಾಗಿ ಸಿಂಗಪೂರ ಉದ್ಯಮಗಳು ಬಂಡವಾಳ ಹೂಡಿಕೆಗೆ ಮುಂದಾಗಿದ್ದಾರೆ. ಉದ್ದಿಮೆದಾರರು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರನ್ನು ಭೇಟಿಯಾಗಿ ಈ ಪ್ರಸ್ತಾವ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಸಲಹೆ ಮೇರೆಗೆ ಕೃಷ್ಣಬೈರೇಗೌಡರು, ಉದ್ದಿಮೆದಾರರ ಜತೆ ಸಮಾಲೋಚನೆ ನಡೆಸಿದ್ದಲ್ಲದೆ, ಸಿಂಗಾಪೂರ್ ಟ್ರಾಫಿಕ್ ಮಾದರಿಯಲ್ಲೇ ನಮ್ಮ ರಾಜ್ಯದಲ್ಲೂ ನಿರ್ವಹಣೆ ಮಾಡಲು ಮುಂದಾಗಬೇಕು. ಇದಕ್ಕೆ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ತಿಳಿಸಿದ್ದಾರೆ.

ಭಾರತದ ವಿವಿಧ ಕ್ಷೇತ್ರಗಳಲ್ಲಿ 70 ಮಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆ ಮಾಡಲು ನಾವು ಮುಂದಾಗಿದ್ದೇವೆ ಎಂದು ಸಿಂಗಪೂರ್ ಮೂಲದ ಹೂಡಿಕೆದಾರ ಕಂಪೆನಿಗಳ ಅಧಿಕಾರಿಗಳು ತಿಳಿಸಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ಆಪಲ್ ಹಾಗೂ ವಿಸ್ಟ್ರಾನ್ ಕಂಪನಿಗಳ ಜೊತೆಗೆ ಹೂಡಿಕೆಗೆ ಒಪ್ಪಂದವಾಗಿದೆ. ಇಲ್ಲಿ ಪ್ರಮುಖ ನಗರಗಳಲ್ಲಿನ ಸಂಚಾರ ವ್ಯವಸ್ಥೆ ಸರಿಪಡಿಸಲು ದೊಡ್ಡಮಟ್ಟದಲ್ಲಿ ಬಂಡವಾಳ ಹೂಡುವುದಾಗಿ ಹೇಳಿದ್ದಾರೆ. ಇದಕ್ಕೆ ಸರ್ಕಾರ ತಾತ್ವಿಕವಾಗಿ ಒಪ್ಪಿದ್ದು, ಅಧಿಕಾರಿಗಳ ತಂಡವನ್ನು ಸಿಂಗಾಪೂರಕ್ಕೆ ಕಳುಹಿಸಿ ಅವರಿಂದ ವರದಿ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಚಿವರು ತಿಳಿಸಿದ್ದಾರೆ.

ಜಿಟಿಡಿ ಅಧ್ಯಕ್ಷತೆಯಲ್ಲಿ ಜೆಡಿಎಸ್ ಕೋರ್ ಕಮಿಟಿ


ಬೆಂಗಳೂರು, ಆ.7(ಕೆಎಂಶಿ)– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನೂತನ ಕೋರ್ ಕಮಿಟಿ ರಚನೆಗೆ ಜೆಡಿಎಸ್ ಪ್ರಮುಖರ ಸಭೆಯಲ್ಲಿ ಒಮ್ಮತದ ನಿರ್ಣಯ ಕೈಗೊಳ್ಳಲಾಯಿತು. ಮಾಜಿ ಶಾಸಕ ವೈಎಸ್‌ವಿ ದತ್ತಾ ಈ ಕಮಿಟಿಗೆ ಸಂಚಾಲಕರಾಗಿರುತ್ತಾರೆ. ಒಟ್ಟು 20 ಸದಸ್ಯರು ಕಮಿಟಿಯಲ್ಲಿರುತ್ತಾರೆ. ಆ.15ರ ನಂತರ ಪಕ್ಷ ಸಂಘಟನೆಗಾಗಿ ಜೆಡಿಎಸ್ ಪಕ್ಷದ ಮುಖಂಡರು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲಿದ್ದಾರೆ. ಮುಂಬರುವ ಲೋಕಸಭೆ ಚುನಾವಣೆಗೆ ಸಿದ್ಧತೆ, ಪಕ್ಷ ಸಂಘಟನೆ ಹಾಗೂ ನೂತನ ಕೋರ್ ಕಮಿಟಿ ರಚನೆ ಸೇರಿದಂತೆ ಹಲವು ವಿಷಯಗಳ ಚರ್ಚೆಗಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ ಈ ಮಹತ್ವದ ನಿರ್ಣಯ ಕೈಗೊಳ್ಳಲಾಯಿತು.



ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಆಗಿರುವ ಹಿನ್ನಡೆಯ ಬಗ್ಗೆ ಎದೆಗುಂದದೆ ಪಕ್ಷದ ಸಂಘಟನೆ ಕಡೆ ಹೆಚ್ಚು ಗಮನ ನೀಡಬೇಕು ಎಂದು ರಾಷ್ಟ್ರೀಯ ಅಧ್ಯಕ್ಷರು ತಾಕೀತು ಮಾಡಿದ್ದು, ಅವರ ಆದೇಶದಂತೆ ಪಕ್ಷ ಸಂಘಟನೆಗೆ ಬಹಳಷ್ಟು ಒತ್ತು ಕೊಟ್ಟು ಕೆಲಸ ಮಾಡಲು ನಿರ್ಧರಿಸಲಾಗಿದೆ ಎಂದರು.

ಪಕ್ಷದ ಸಂಘಟನೆ ಹಾಗೂ ಲೋಕಸಭೆ ಚುನಾವಣೆಗೆ ಪಕ್ಷವನ್ನು ಅಣಿಗೊಳಿಸುವ ನಿಟ್ಟಿನಲ್ಲಿ ಆ.15ರ ನಂತರ ರಾಜ್ಯಾದ್ಯಂತ ಪಕ್ಷದ ಪ್ರಮುಖ ಮುಖಂಡರು ಪ್ರವಾಸ ಮಾಡಲಿದ್ದಾರೆ. ನಾನೂ ಸೇರಿ ಪಕ್ಷದ ಬಹುತೇಕ ಹಿರಿಯ ನಾಯಕರು ಪ್ರವಾಸ ಕೈಗೊಳ್ಳುತ್ತೇವೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ. ನಮ್ಮ ಹೋರಾಟ ಸಂಘಟಿತವಾಗಿರಬೇಕು ಹಾಗೂ ವಿಷಯಾಧಾರಿತ ಆಗಿರಬೇಕು. ಜನಪರವಾಗಿ ಇರಬೇಕು ಎಂದು ರಾಷ್ಟ್ರೀಯ ಅಧ್ಯಕ್ಷರು ನಿರ್ದೇಶನ ನೀಡಿದ್ದಾರೆ. ಅದರಂತೆ ನಾವು ಹೋರಾಟ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಲ್ಲದೆ, ಪಕ್ಷದ ವಿವಿಧ ವಿಭಾಗಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡುವ ಬಗ್ಗೆಯೂ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಲಾಯಿತು ಎಂದು ಅವರು ತಿಳಿಸಿದ್ದಾರೆ.

ಜನಾರ್ಧನ ಐಯ್ಯಂಗಾರ್ ನಿಧನ



ಮೈಸೂರು,ಆ.7–ಮೈಸೂರಿನ ಹೋಟೆಲ್ ಮಾಲೀಕರ ಸಂಘದ ಹಿರಿಯ ಸದಸ್ಯರೂ ಆದ ಡಿ.ದೇವರಾಜ ಅರಸು ರಸ್ತೆಯ ಶ್ರೀ ರಾಘವೇಂದ್ರ ಅಯ್ಯಂಗಾರ್ ಬೇಕರಿ ಮಾಲೀಕ ಜನಾರ್ದನ ಐಯ್ಯಂಗಾರ್(72) ಅವರು ಸೋಮವಾರ ನಿಧನರಾದರು. ಮೃತರು ಪತ್ನಿ ಸೀತಾರತ್ನ, ಪುತ್ರ ಕೃಷ್ಣ ಪ್ರಸಾದ್, ಪುತ್ರಿ ಶ್ರುತಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಚಾಮುಂಡಿ ಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು. 38 ವರ್ಷಗಳಿಂದ ಅರಸು ರಸ್ತೆಯಲ್ಲಿ ಬೇಕರಿ ಉದ್ಯಮ ನಡೆಸುತ್ತಿದ್ದ ಜನಾರ್ಧನ ಐಯ್ಯಂಗಾರ್ ನಿಧನಕ್ಕೆ ಹೋಟೆಲ್ ಮಾಲೀಕರ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ನೈಪುಣ್ಯ ಶಿಕ್ಷಣ ಸಂಸ್ಥೆಯಲ್ಲಿ ಸ್ಟೆಮ್ಫಿಟ್ ಪ್ರಶಸ್ತಿ ಪ್ರದಾನ

ಮಕ್ಕಳ ಪರಿಪೂರ್ಣ ವ್ಯಕ್ತಿತ್ವಕ್ಕೆ ಕ್ರೀಡೆ ಅಗತ್ಯ

ಆಸ್ಟ್ರೇಲಿಯಾದ ಕ್ರೀಡಾ ವಿಜ್ಞಾನಿ ಡಾ.ಜಿಮ್‌ಲೀ ಅಭಿಮತ



ಮೈಸೂರು,ಆ.7(ಪಿಎಂ)– ಫಲಪ್ರದ ಶಿಕ್ಷಣಕ್ಕೆ ಕ್ರೀಡೆಯು ಚಿಮ್ಮುವ ಹಲಗೆಯಾಗಬೇಕಿದ್ದು, ಮಕ್ಕಳ ಪರಿಪೂರ್ಣ ವ್ಯಕ್ತಿತ್ವಕ್ಕೆ ಶಿಕ್ಷಣದಲ್ಲಿ ಕ್ರೀಡಾ ಚಟುವಟಿಕೆಗಳು ಅಗತ್ಯ ಎಂದು ಆಸ್ಟ್ರೇಲಿಯಾದ ಸ್ಟೆಮ್ಫಿಟ್ ಸಂಸ್ಥೆ ಸಂಸ್ಥಾಪಕರೂ ಆದ ಕ್ರೀಡಾ ವಿಜ್ಞಾನಿ ಡಾ.ಜಿಮ್‌ಲೀ ಅಭಿಪ್ರಾಯಪಟ್ಟರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸ್ಟೆಮ್ಫಿಟ್ ಪ್ರಶಸ್ತಿ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಣ ಕಲಿಸುವ ಪದ್ಧತಿಯಲ್ಲಿ ಕ್ರೀಡಾ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಮಕ್ಕಳು ಕ್ರಿಯಾಶೀಲ ಮತ್ತು ಪರಿಪೂರ್ಣ ಶಿಕ್ಷಣ ಪಡೆಯಲು ಸಾಧ್ಯ. ಶಿಕ್ಷಣ ಸಂಸ್ಥೆಗಳು ನಿರಂತರ ಪ್ರಯೋಗಗಳನ್ನು ಅಳವಡಿಸಿಕೊಂಡು, ನೈಜ ಶಿಕ್ಷಣದ ಪರಿಕಲ್ಪನೆಗೆ ಪೂರಕ ಯೋಜನೆಗಳನ್ನು ರೂಪಿಸಬೇಕೆಂದು ಸಲಹೆ ನೀಡಿದರು.

ಆಸ್ಟ್ರೇಲಿಯಾದ ಐಕ್ಯೂರಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊಗಣೇಶ್ ಕೋರ ಮನ್ನಿಲ್ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ವಿನಿಮಯ ಚಟುವಟಿಕೆಗಳು ವ್ಯಾಪಕವಾಗಿ ಗರಿಗೆದರಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಆಸ್ಟ್ರೇಲಿಯಾದ ಪಠ್ಯಕ್ರಮವನ್ನು ಭಾರತದಲ್ಲಿ ಪರಿಚಯಿಸಿ, ಭಾರತೀಯ ಪಠ್ಯಕ್ರಮವನ್ನು ಆಸ್ಟ್ರೇಲಿಯಾದಲ್ಲಿ ಪರಿಚಯಿಸುವ ಮೂಲಕ ಶಿಕ್ಷಣ ವಿನಿಮಯಕ್ಕೆ ನಾವು ಉತ್ಸುಕರಾಗಿದ್ದು, ನೈಪುಣ್ಯ ಶಿಕ್ಷಣ ಸಂಸ್ಥೆಯು ಈ ನಿಟ್ಟಿನಲ್ಲಿ ನಮಗೆ ಉತ್ತಮ ಸ್ಪಂದನೆ ನೀಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನೈಪುಣ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ರಘು ಮಾತನಾಡಿ, ಪ್ರಸ್ತುತ ಮಕ್ಕಳಿಗೆ ಮೌಲ್ಯ ಮತ್ತು ನೈತಿಕ ಶಿಕ್ಷಣ ನೀಡಬೇಕಿದ್ದು, ಆ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಅಡಿಪಾಯ ಹಾಕಬೇಕಿದೆ. ಈ ಎರಡು ಅಂಶಗಳು ಶಿಕ್ಷಣಕ್ಕೆ ಅತ್ಯಂತ ಅಗತ್ಯ, ಇಲ್ಲವಾದರೆ ಅದು ನೈಜ ಶಿಕ್ಷಣ ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.

ಈ ನಿಟ್ಟಿನಲ್ಲಿ ತಮ್ಮ ಸಂಸ್ಥೆಯು ಮೌಲ್ಯ ಮತ್ತು ನೈತಿಕ ಶಿಕ್ಷಣವನ್ನು ಅಳವಡಿಸಿಕೊಂಡು ಮಕ್ಕಳಿಗೆ ಪರಿಪೂರ್ಣ ಶಿಕ್ಷಣ ಕೊಡಲು ಬದ್ಧವಾಗಿದೆ. ಜಾಗತಿಕ ಮಟ್ಟದಲ್ಲಿ ಓಡುತ್ತಿರುವ ಜಗತ್ತಿನೊಂದಿಗೆ ಪೈಪೋಟಿ ನಡೆಸಲು ಗುಣಾತ್ಮಕ ಅಂಶಗಳ ಶಿಕ್ಷಣವನ್ನು ನಮ್ಮ ಸಂಸ್ಥೆ ಅಳವಡಿಸಿಕೊಳ್ಳಲು ಬದ್ಧವಾಗಿದೆ. ಆಸ್ಟ್ರೇಲಿಯಾದ ಸ್ಟೆಮ್ಫಿಟ್ ಸಂಸ್ಥೆಯ ಸ್ಪಂದನೆಯು ನಮಗೆ ಉತ್ಸಾಹ ತುಂಬಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಇದೇ ವೇಳೆ ಸ್ಟೆಮ್ಫಿಟ್ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ–ಶಿಕ್ಷಣ ಪ್ರಾಯೋಗಿಕ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ನೈಪುಣ್ಯ ಸಂಸ್ಥೆಯ ವಿದ್ಯಾರ್ಥಿಗಳಿಗೆ ಡಾ.ಜಿಮ್‌ಲೀ ಪ್ರಶಸ್ತಿ ಪ್ರದಾನ ಮಾಡಿದರು. ಸ್ಟೆಮ್ಫಿಟ್ ಸಂಸ್ಥೆ ಮೈಸೂರು ಪ್ರತಿನಿಧಿ ಡಾ.ಪುಷ್ಪಾ ರಿಚರ್ಡ್ಸ್, ನೈಪುಣ್ಯ ಶಾಲೆಯ ಪ್ರಾಂಶುಪಾಲರಾದ ಶೋಭಿತಾ ಎಸ್.ಆರಾಧ್ಯ ಮತ್ತಿತರರು ಹಾಜರಿದ್ದರು.

ಮಂಡ್ಯದಲ್ಲಿ ನಾಲ್ವಡಿ ಪ್ರತಿಮೆ ನಿರ್ಮಾಣಕ್ಕೆ ಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ಆ.7– ಮಂಡ್ಯ ಜಿಲ್ಲೆ ರಚನೆ ಹಾಗೂ ಅಭಿವೃದ್ಧಿಗೆ ಅನೇಕ ಕೊಡುಗೆ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸೋಮವಾರ ಜಿಪಂ ಸಭಾಂಗಣದಲ್ಲಿ ನಡೆದ ನಾಲ್ವಡಿ ಅವರ ಪ್ರತಿಮೆ ನಿರ್ಮಾಣ ಸಂಬಂಧ ಸಭೆ ನಡೆಸಿ ಮಾತನಾಡಿದ ಅವರು, ನಾಲ್ವಡಿಯವರ ಪ್ರತಿಮೆ ನಿರ್ಮಾಣ ಬಹಳ ವರ್ಷದಿಂದ ನಡೆಯುತ್ತಿರುವ ಪ್ರಯತ್ನವಾಗಿದೆ. ಇದಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ತಿಳಿಸಿದರು.

ಜಿಲ್ಲೆಯ ಕೆಆರ್‌ಎಸ್ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿರುವವರೆಗೂ ನಾಲ್ವಡಿ ಅವರ ನೆನಪು ಸದಾ ಇರುತ್ತದೆ. ಈ ಹಿನ್ನೆಲೆಯಲ್ಲಿ ನಾಲ್ವಡಿಯವರ ಪ್ರತಿಮೆ ನಿರ್ಮಾಣಕ್ಕೆ ಸರ್ಕಾರ, ಶಾಸಕರ ಅನುದಾನ ಹಾಗೂ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸುವುದು ಸೂಕ್ತ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ಕೃಷ್ಣಶಿಲೆಯಲ್ಲಿ ಮಾಡಲು 35 ಲಕ್ಷರೂ., ಪಂಚಲೋಹದಲ್ಲಿ ನಿರ್ಮಾಣ ಮಾಡಿದರೆ 50 ಲಕ್ಷ ರೂ ವೆಚ್ಚವಾಗಲಿದೆ. ಇದಕ್ಕೆ ಯೋಜನೆ ಸಿದ್ಧಪಡಿಸಿದ್ದು, ಸ್ಥಳ ನಿಗದಿಪಡಿಸಬೇಕಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಕನ್ನಂಬಾಡಿಕಟ್ಟೆ ನಿರ್ಮಿಸಿ ಮಂಡ್ಯ ಜಿಲ್ಲೆ ಅನ್ನದಾತರಾಗಿರುವ ನಾಲ್ವಡಿಯವರ ಪ್ರತಿಮೆಯನ್ನು ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ನಿರ್ಮಾಣ ಮಾಡುವುದು ಸೂಕ್ತ ಎಂದು ಶಾಸಕ ರವಿಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ವೇಳೆ ಕೆಲ ಸಂಘಟನೆಗಳ ಮುಖ್ಯಸ್ಥರು ನಾಲ್ವಡಿಯವರ ಪ್ರತಿಮೆಯನ್ನು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿರುವ ಉದ್ಯಾನವನದಲ್ಲಿ ನಿರ್ಮಾಣ ಮಾಡುವ ಬಗ್ಗೆ ಚರ್ಚಿಸಿದರು. ಪ್ರತಿಮೆಯೊಂದಿಗೆ ಅವರ ಜೀವನ ಚರಿತ್ರೆ ಹಾಗೂ ಆರ್ಟ್ ಗ್ಯಾಲರಿ ಸಹ ನಿರ್ಮಾಣ ಮಾಡಿದರೆ ಜನರು ಅವರ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಾರೆ ಎಂದರು.

ಡಿಸೆಂಬರ್ ಅಂತ್ಯಕ್ಕೆ ಸರ್‌ಎಂವಿ ಕ್ರೀಡಾಂಗಣ ಬಳಕೆಗೆ ಲಭ್ಯ: ನಗರದ ಸರ್ ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣ ಉನ್ನತೀಕರಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಮುಂದಿನ ಗಣರಾಜ್ಯೋತ್ಸವವನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಆಚರಿಸಲಾಗುವುದು ಎಂದು ಸಚಿವ ಚಲುವರಾಯಸ್ವಾಮಿ ತಿಳಿಸಿದರು.

9.98ಕೋಟಿ ವೆಚ್ಚದಲ್ಲಿ ಉನ್ನತೀಕರಣ ಕಾಮಗಾರಿ ನಡೆಯುತ್ತಿದ್ದು, 11 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಆದೇಶ ಇತ್ತು. ಆದರೆ ಕೆಲವು ಕಾರಣಗಳಿಂದ ಕಾಮಗಾರಿ ತಡವಾಗಿದ್ದು, ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಿ, ಅತ್ಯುತ್ತಮ ದರ್ಜೆಯ ಸವಲತ್ತುಗಳನ್ನು ಕ್ರೀಡಾ ಆಸಕ್ತರಿಗೆ ನೀಡಲಾಗುವುದು ಎಂದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಕ್ರೀಡಾಂಗಣದ ಕಾಮಗಾರಿಯನ್ನು ಆಗಾಗ ಪರಿಶೀಲಿಸಿದ್ದೇನೆ. ಯಾವುದೇ ಲೋಪದೋಷ ಉಂಟಾಗದಂತೆ ಕ್ರಮ ವಹಿಸಲು ಸೂಚಿಸಲಾಗಿದೆ ಎಂದರು.

ಕ್ರೀಡಾಂಗಣದಲ್ಲಿ ಈಜುಕೊಳ ನಿರ್ಮಾಣ ಸಾಧ್ಯವಿಲ್ಲದ್ದರಿಂದ ಮೈಶುಗರ್ ಕಂಪನಿ ಒಡೆತನದ ಈಜುಕೊಳಕ್ಕೆ ಕಾಯಕಲ್ಪ ಕೊಟ್ಟು ನವೀಕರಿಸಿ ಉನ್ನತೀಕರಣಗೊಳಿಸುವ ನಿಟ್ಟಿನಲ್ಲಿ ಚಿಂತಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಕ್ರೀಡಾಂಗಣದ ಕಾಮಗಾರಿ ಕಳಪೆಯಿಂದ ಕೂಡಿದೆ ಎಂಬ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಪಿಆರ್‌ಇಡಿ ಇಂಜಿನಿಯರ್ ನೇತೃತ್ವದಲ್ಲಿ ಸಮಿತಿ ರಚಿಸಿ ಪರಿಶೀಲಿಸಲಾಗಿದೆ. ಕ್ರೀಡಾಂಗಣದ ಪೂರ್ಣ ಕಾಮಗಾರಿ ಟೆಂಡರ್ ಆಹ್ವಾನ ಸೇರಿದಂತೆ ಹಣ ಪಾವತಿ ರಾಜ್ಯ ಮಟ್ಟದಲ್ಲಿ ನಡೆಯುತ್ತಿದೆ ಎಂದರು.

ಸಭೆಯಲ್ಲಿ ಶಾಸಕರಾದ ಕೆ.ಎಂ.ಉದಯ್, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಎಸ್ಪಿ ಎನ್.ಯತೀಶ್, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್ ಉಪಸ್ಥಿತರಿದ್ದರು.

1.60 ಕೋಟಿ ವೆಚ್ಚದಲ್ಲಿ ಕಲಾಮಂದಿರ ನವೀಕರಣ

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರವನ್ನು 1.60 ಕೋಟಿ ರೂ ವೆಚ್ಚದಲ್ಲಿ ನವೀಕರಣ ಮಾಡಲಾಗುವುದು. ನವೀಕರಣ ಕಾಮಗಾರಿ ಯೋಜನೆ ಸಿದ್ಧಪಡಿಸುವ ಸಂದರ್ಭ ಸೀಲಿಂಗ್, ವೈರಿಂಗ್ ಸೌಂಡ್ ಸಿಸ್ಟಮ್‌ಗಳ ನವೀಕರಣಕ್ಕೆ ಥಿಯೇಟರ್ ಎಕ್ಸ್‌ಪರ್ಟ್‌ಗಳ ಅಭಿಪ್ರಾಯ ಪಡೆದುಕೊಳ್ಳುವಂತೆ ಸಚಿವ ಚಲುವರಾಯಸ್ವಾಮಿ ತಿಳಿಸಿದರು. ಡಿಸಿ ಡಾ.ಕುಮಾರ್ ಮಾತನಾಡಿ, ಕಲಾಮಂದಿರ ನವೀಕರಣಕ್ಕೆ ಸಂಬಂಧಿಸಿದಂತೆ 63 ಲಕ್ಷ ರೂ. ವೆಚ್ಚದಲ್ಲಿ ಮೊದಲ ಹಂತದ ಕಾಮಗಾರಿ ಹಾಗೂ 97 ಲಕ್ಷ ರೂ. ವೆಚ್ಚದಲ್ಲಿ ಎರಡನೇ ಹಂತದ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ರೈತ ಸಭಾಂಗಣ ನವೀಕರಣಕ್ಕೆ ಸಂಪನ್ಮೂಲ ಕ್ರೋಢೀಕರಣಕ್ಕೆ ಕ್ರಮ: 61.50 ಲಕ್ಷ ರೂ. ವೆಚ್ಚದಲ್ಲಿ ರೈತ ಸಭಾಂಗಣ ನವೀಕರಣಕ್ಕೆ ಯೋಜನೆ ಸಿದ್ಧಪಡಿಸಲಾಗಿದೆ. ಪ್ರಸ್ತುತ 17 ಲಕ್ಷ ರೂ. ಅನುದಾನ ಲಭ್ಯವಿದ್ದು, ಉಳಿದ ಅನುದಾನವನ್ನು ಕ್ರೋಢೀಕರಣ ಮಾಡಬೇಕಿದೆ. ಅನುದಾನಕ್ಕಾಗಿ ಆರ್‌ಎಪಿಸಿಎಂಎಸ್, ಡಿಸಿಸಿ ಬ್ಯಾಂಕ್ ಸೇರಿದಂತೆ ಇನ್ನಿತರ ಇಲಾಖೆ ಸಭೆ ನಡೆಸಿ ಕ್ರಮ ಕೈಗೊಳ್ಳುವಂತೆ ಸಚಿವರು ಡಿಸಿಗೆ ತಿಳಿಸಿದರು.

ಮಂಡ್ಯದಲ್ಲಿ ಹೆಚ್ಚುತ್ತಿರುವ ನಕಲಿ ವೈದ್ಯರ ಹಾವಳಿ



ಮಂಡ್ಯ, ಆ.7– ಜಿಲ್ಲೆಯ ವಿವಿಧೆಡೆ ನಕಲಿ ವೈದ್ಯರ ಹಾವಳಿ ಹೆಚ್ಚುತ್ತಿದ್ದು, ವೈದ್ಯಕೀಯ ಪದವಿ ಪಡೆಯದೆ ಪೈಲ್ಸ್ ಸೇರಿದಂತೆ ಇನ್ನಿತರೆ ರೋಗಗಳಿಗೆ ಚಿಕಿತ್ಸೆ ಕೊಡುವುದಾಗಿ ಕ್ಲಿನಿಕ್ ತೆರೆದು ಜನರಿಂದ ದುಪ್ಪಟ್ಟು ಹಣ ಪಡೆಯುತ್ತಿದ್ದ ಪ್ರಕರಣ ತಾಲೂಕಿನ ಬಸರಾಳು ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ಪಶ್ಚಿಮ ಬಂಗಾಳ ಮೂಲದ ಆಶಿಮ್ ಬಿಸ್ವಾಸ್ (24) ಎಂಬಾತ ಮೂಲವ್ಯಾಧಿ, ಪೈಲ್ಸ್ ಸೇರಿದಂತೆ ಹಲವು ರೋಗಗಳಿಗೆ ಆಪರೇಷನ್ ಇಲ್ಲದೇ ನಾಟಿ ಮದ್ದಿನ ಮೂಲಕ ಚಿಕಿತ್ಸೆ ಕೊಡುವುದಾಗಿ ಹೇಳಿ ರೋಗಿಗಳಿಂದ 8ರಿಂದ 10 ಸಾವಿರ ಹಣ ಪಡೆಯುತ್ತಿದ್ದ ಎಂದು ಸಾರ್ವಜನಿಕರ ದೂರಿನ ಮೇರೆಗೆ ಬಸರಾಳು ಪೊಲೀಸರು ಆತನನ್ನು ಕರೆಸಿ ವಿಚಾರಣೆ ನಡೆಸಿದ್ದಾರೆ.

ಆಶಿಮ್ ಬಿಸ್ವಾಸ್ ಪಶ್ಚಿಮ ಬಂಗಾಳದಲ್ಲಿ ಆಧಾರ್ ಕಾರ್ಡ್ ಪಡೆದಿದ್ದರೆ, ರಾಜಸ್ಥಾನದಲ್ಲಿ ಓಟರ್ ಐಡಿ ಮತ್ತು ಕರ್ನಾಟಕದ ತುಮಕೂರು ವಿಳಾಸದಲ್ಲಿ ಡ್ರೈವಿಂಗ್ ಲೈಸೆನ್ಸ್ ಪಡೆದಿದ್ದಾನೆ.

> ಮಂಡ್ಯದ ವಿವಿಧೆಡೆ ನಕಲಿ ವೈದ್ಯರಿರುವ ಬಗ್ಗೆ ಆಗಾಗ ಮಾಹಿತಿ ಬರುತ್ತದೆ. ಅಂತಹವರ ಬಗ್ಗೆ ಸಾರ್ವಜನಿಕ ವಲಯದಿಂದ ದೂರು ಬಂದರೆ, ಕ್ಲಿನಿಕ್ ಮೇಲೆ ದಾಳಿ ನಡೆಸಿ, ಮುಚ್ಚುವಂತೆ ಸೂಚನೆ ಕೊಡುತ್ತೇವೆ. ಅದಕ್ಕೆ ಕ್ಯಾರೆ ಎನ್ನದೇ ನಕಲಿ ಕ್ಲಿನಿಕ್ ನಡೆಸಿದರೆ, ಕೆಪಿಎಂ ಕಾಯ್ದೆ ಪ್ರಕಾರ ಅವರ ವಿರುದ್ಧ ಶಿಸ್ತು ಕಾನೂನು ಕ್ರಮ ಕೈಗೊಂಡು ದಂಡ ವಿಧಿಸುತ್ತೇವೆ. ಬಸರಾಳು ಪ್ರಕರಣಕ್ಕೆ ಸಂಬಂಧಿಸಿದಂತೆ ನಕಲಿ ವೈದ್ಯ ಕ್ಲಿನಿಕ್ ಅನ್ನು ಮುಂದುವರೆಸಿದರೆ ಆತನ ವಿರುದ್ಧವೂ ಕ್ರಮ ಕೈಗೊಳ್ಳುತ್ತೇವೆ.
>
> - ಡಾ.ಕೆ.ಮೋಹನ್, ಡಿಎಚ್‌ಓ, ಮಂಡ್ಯ.

ಈ ಎಲ್ಲದರ ಬಗ್ಗೆ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಇತ್ತೀಚೆಗೆ ಇಂತಹ ನಕಲಿ ವೈದ್ಯರ ಹಾವಳಿ ಮಂಡ್ಯದಲ್ಲಿ ಹೆಚ್ಚಿದ್ದು, ಇತ್ತೀಚೆಗೆ ಶ್ರೀರಂಗಪಟ್ಟಣ ತಾಲೂಕಿನ ಕೊಡಿಯಾಲ ಗ್ರಾಮದಲ್ಲಿ ಸಹ ಅಲೋಪತಿ ಚಿಕಿತ್ಸೆ ಕೊಡುವ ಸಂಬಂಧ ನಕಲಿ ವೈದ್ಯನ ಮೇಲೆ ಕ್ರಮ ಕೈಗೊಳ್ಳಲಾಗಿತ್ತು. ಇಂತಹ ನಕಲಿ ವೈದ್ಯರ ಹಾವಳಿ ತಡೆಗೆ ಆರೋಗ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕಿದೆ.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಆ.7– ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಆ.8 ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಹೊಡಾಘಟ್ಟ, ಕೀಲಾರ, ಹನಕೆರೆ, ಹಳೆ ಬೂದನೂರು, ಹೊಸಬೂದನೂರು, ಈಚಗೆರೆ, ಹಂಬರಹಳ್ಳಿ, ಆಲಕೆರೆ, ನಲ್ಲಹಳ್ಳಿ, ಕಚ್ಚಿಗೆರೆ, ಶ್ರೀನಿವಾಸಪುರ ಗೇಟ್, ಹೊನ ಗಾನಹಳ್ಳಿಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಈಜಲು ಹೋದ ಯುವಕ ನೀರುಪಾಲು

ಶ್ರೀರಂಗಪಟ್ಟಣ, ಆ.7– ತಾಲೂಕಿನ ಪ್ರವಾಸಿತಾಣ ಬಲಮುರಿ ಕಾವೇರಿ ನದಿಯಲ್ಲಿ ಈಜಲು ಹೋದ ಯುವಕನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ. ಕೋಲಾರ ಜಿಲ್ಲೆ ಕೆಜಿಎಫ್ ಪೊಲೀಸ್ ಠಾಣೆ ಎಎಸ್‌ಐ ವಾಸುದೇವಸಿಂಗ್ ಅವರ ಪುತ್ರ ಯಶವಂತಸಿಂಗ್(25) ಸಾವನ್ನಪ್ಪಿದವರು. ಈತ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ತನ್ನ ಮೂವರು ಸ್ನೇಹಿತರ ಜೊತೆ ಬಲಮುರಿಗೆ ಆಗಮಿಸಿದ್ದರು. ಈ ವೇಳೆ ಕಾವೇರಿ ನದಿಯಲ್ಲಿ ಈಜಲು ಹೋದ ಯಶವಂತ್‌ಸಿಂಗ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಆರ್‌ಎಸ್ ಪೊಲೀಸರು ಪರಿಶೀಲನೆ ನಡೆಸಿ ತಜ್ಞ ಈಜುಗಾರರ ಸಹಾಯದಿಂದ ಶವವನ್ನು ನದಿಯಿಂದ ಹೊರ ತೆಗೆದು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಆರ್‌ಎಸ್‌ನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ

ನಾಲೆಗೆ ನೀರು ಹರಿಸಲು ಸಿಎಂ, ಡಿಸಿಎಂ ಜೊತೆ ಚರ್ಚಿಸಿ ತೀರ್ಮಾನ

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ



ಕೆಆರ್‌ಎಸ್, ಆ.7– ಕೃಷ್ಣರಾಜಸಾಗರ ಅಚ್ಚುಕಟ್ಟು ಪ್ರದೇಶದ ನಾಲೆಗಳಿಗೆ ನೀರು ಬಿಡುಗಡೆ ವಿಚಾರವಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಜೊತೆ ಚರ್ಚಿಸಿ ಮುಂದಿನ 24 ಗಂಟೆಯೊಳಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೆಆರ್‌ಎಸ್‌ನ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ನೀರಾವರಿ ಸಲಹಾ ಸಮಿತಿ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಲಾಶಯದ ಅಚ್ಚುಕಟ್ಟು ಪ್ರದೇಶದ ಸಮಸ್ಯೆ ಬಗ್ಗೆ ಸುದೀರ್ಘ ಚರ್ಚೆ ಮಾಡಿದ್ದೇವೆ. ನಾಲೆಗಳಿಗೆ ನೀರು ಬಿಡುವ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಮಾತುಕತೆ ನಡೆಸಿ ನಿರ್ಧರಿಸಲಾಗುವುದು ಎಂದರು.

ಸರ್ಕಾರ ರೈತರ ಪರ ಇರಲಿದೆ. ಈ ಬಗ್ಗೆ ಆತಂಕ ಬೇಡ. ಮುಂದಿನ ಒಂದು ದಿನದೊಳಗೆ ತೀರ್ಮಾನಿಸಿ ಜನ– ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಬೆಳೆದು ನಿಂತಿರುವ ಬೆಳೆ ರಕ್ಷಣೆಗೆ ಕ್ರಮವಹಿಸುವುದಾಗಿ ತಿಳಿಸಿದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನೀರಾವರಿ ಸಲಹಾ ಸಮಿತಿ ಸಭೆ ನಡೆದಿರಲಿಲ್ಲ. ಚಲುವರಾಯಸ್ವಾಮಿ ಸಮಿತಿ ಅಧ್ಯಕ್ಷರಿದ್ದಾರೆ. ಡ್ಯಾಂ ವ್ಯಾಪ್ತಿಯ ಶಾಸಕರ ಜೊತೆ ಚರ್ಚಿಸಿ ಸಭೆ ನಡೆಸಿದ್ದು, ಕುಡಿಯುವ ನೀರಿಗೆ ಮೊದಲ ಆದ್ಯತೆ ಕೊಡಬೇಕಿದೆ. ಸುಪ್ರೀಂ ಕೋರ್ಟ್ ತೀರ್ಪು ಗಮನದಲ್ಲಿಟ್ಟುಕೊಂಡು ನೀರು ಬಿಡಬೇಕಾಗುತ್ತದೆ. ಸದ್ಯ ಮಳೆಯಾಗುವ ಸಂಭವವಿದ್ದು, ನೀರಿನ ವಿತರಣೆ ಮಾಡಲು ಚರ್ಚೆಯಾಗಿದೆ. ಸಿಎಂ ಗಮನಕ್ಕೆ ತಂದು 24 ಗಂಟೆಯಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಪಿ.ಎಂ.ನರೇಂದ್ರಸ್ವಾಮಿ, ಗಣಿಗ ರವಿಕುಮಾರ್, ಎ.ಬಿ.ರಮೇಶ್‌ಬಾಬು ಬಂಡೀಸಿದ್ದೇಗೌಡ, ಹೆಚ್.ಟಿ.ಮಂಜು, ಕೆ.ಎಂ.ಉದಯ್, ಎಂಎಲ್‌ಸಿಗಳಾದ ಮಧು ಜಿ.ಮಾದೇಗೌಡ, ಮರಿತಿಬ್ಬೇಗೌಡ, ದಿನೇಶ್ ಗೂಳಿಗೌಡ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಭೆಗೆ ಒಂದೇ ಕಾರಿನಲ್ಲಿ ಬಂದ ಜಿಟಿಡಿ, ಹೆಚ್‌ಸಿಎಂ

ಕೆಆರ್‌ಎಸ್: ಕೆಆರ್‌ಎಸ್‌ನ ಪ್ರವಾಸಿ ಮಂದಿರದಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಗೆ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಹಾಗೂ ಶಾಸಕ ಜಿ.ಟಿ. ದೇವೇಗೌಡ ಒಂದೇ ಕಾರಿನಲ್ಲಿ ಆಗಮಿಸಿ, ಸಭೆ ಮುಗಿಸಿ ವಾಪಸ್ ತೆರಳಿದ್ದು ವಿಶೇಷವಾಗಿತ್ತು.

ಸಲಹಾ ಸಮಿತಿ ಸಭೆಗೆ ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಜನಪ್ರತಿನಿಧಿಗಳಿಗೆ ಆಹ್ವಾನವಿತ್ತು. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಸಭೆಯೊಂದರಲ್ಲಿ ಭಾಗವಹಿಸಿದ್ದ ಈ ಇಬ್ಬರೂ ಒಂದೇ ಕಾರಿನಲ್ಲಿ ಕೆಆರ್‌ಎಸ್‌ಗೆ ಆಗಮಿಸಿ ಬಳಿಕ ಅದೇ ಕಾರಿನಲ್ಲೇ ವಾಪಸ್ ತೆರಳಿದರು. ಈ ಬಗ್ಗೆ ಮಾತನಾಡಿದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ನೀರಾವರಿ, ರೈತರು, ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಏನು ಇಲ್ಲ. ಎಲ್ಲಾ ಜನಪ್ರತಿನಿಧಿಗಳು ಒಟ್ಟಿಗೆ ಸೇರಿ ಕೆಲಸ ಮಾಡಬೇಕು. ಮೈಸೂರು ನಗರಾಭಿವೃದ್ಧಿ ಸಂಬಂಧ ಸಭೆಯಲ್ಲಿ ಇಬ್ಬರು ಭಾಗವಹಿಸಿದ್ದೆವು. ಅಲ್ಲಿಂದ ಒಟ್ಟಿಗೆ ಜೊತೆಯಲ್ಲಿ ಬಂದೆವು ಎಂದು ಸ್ಪಷ್ಟನೆ ನೀಡಿದರು.

ರಾಜ್ಯಪಾಲರ ದೂರಿನ ಬಗ್ಗೆ ಗೊತ್ತಿಲ್ಲ: ಕೃಷಿ ಸಚಿವರ ವಿರುದ್ಧ ಕೃಷಿ ಅಧಿಕಾರಿಗಳ ದೂರು ವಿಚಾರದ ಬಗ್ಗೆ ಮಾತನಾಡಿ, ಅದರ ಬಗ್ಗೆ ನನಗೆ ಗೊತ್ತಿಲ್ಲ. ಐ ಡೋಂಟ್ ನೋ. ವಿಧಾನಸೌಧದಲ್ಲಿ ಸರ್ಕಾರದ ವಿರುದ್ಧ ಕುಮಾರಸ್ವಾಮಿ ಮಾತನಾಡಿದ್ದಾರೆ. ನಾವು ಕೂಡ ದಾಖಲೆ ಕೊಡಿ ತನಿಖೆ ಮಾಡೋಣಾ ಎಂದಿದ್ದೆವು. ಆದರೆ ಇದುವರೆಗೂ ಕುಮಾರಸ್ವಾಮಿ ದಾಖಲಾತಿ ನೀಡಿಲ್ಲ ಅವರು ಮುಖ್ಯಮಂತ್ರಿಯಾಗಿದ್ದವರು, ಜವಾಬ್ದಾರಿ ಇದೆ. ಅವರು ದಾಖಲಾತಿ ಕೊಟ್ಟು ಮಾತನಾಡಿದರೆ ಸರಿ ಎಂದರು.

ಸೋಲಿನಿಂದ ಕುಮಾರಸ್ವಾಮಿ ಹತಾಶರಾಗಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಜನ ವ್ಯಾಪಕ ಬೆಂಬಲ ಕೊಟ್ಟಿದ್ದು, ಅವರು ಸ್ಥಿರ ಸರ್ಕಾರ ಬರಲ್ಲ. ನಮಗೆ ಅವಕಾಶ ಸಿಗುತ್ತೆ ಎಂದುಕೊಂಡಿದ್ದರು. ಆರೋಪಗಳನ್ನು ಸಾಕ್ಷಿ ಆಧಾರದ ಮೇಲೆ ಮಾಡಬೇಕು. ಸುಮ್ಮನೆ ಹಿಟ್ ಅಂಡ್ ರನ್ ಆರೋಪ ಮಾಡಬಾರದು. ರಾಜಕೀಯ, ಸೇಡು, ದ್ವೇಷ, ಹೊಟ್ಟೆ ಉರಿಯಿಂದ ಈ ರೀತಿ ಆರೋಪ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಬಂಡೆ ರೀತಿ ಇರುತ್ತದೆ. ಸರ್ಕಾರ ಉರುಳುತ್ತೆ, ಅಜಿತ್ ಪವರ್ ಹುಟ್ಟಿಕೊಳ್ಳುತ್ತಾರೆ ಎಂಬುದು ಬಿಜೆಪಿ, ಜೆಡಿಎಸ್‌ನ ಭ್ರಮೆ ಎಂದು ಟೀಕಿಸಿದರು.

ಕೃಷಿ ಸಚಿವ ಚಲುವರಾಯಸ್ವಾಮಿ ವಿರುದ್ಧ 'ಲಂಚ ಬೇಡಿಕೆ' ದೂರು ಆರೋಪ

ಮಂಡ್ಯ ಎಎಸ್ಪಿ ನೇತೃತ್ವದಲ್ಲಿ ತನಿಖೆ ಆರಂಭ



ಎಎಸ್ಪಿ ತಿಮ್ಮಯ್ಯ

ಮಂಡ್ಯ, ಆ.7– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ಗೆ ಕೃಷಿ ಅಧಿಕಾರಿಗಳು ದೂರು ಕೊಟ್ಟಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ (ಎಎಸ್ಪಿ) ತಿಮ್ಮಯ್ಯ ನೇತೃತ್ವದಲ್ಲಿ ತನಿಖೆ ಆರಂಭಿಸಲಾಗಿದೆ.

ಎಎಸ್ಪಿ ತಿಮ್ಮಯ್ಯ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಕಟ್ಟಡದಲ್ಲಿರುವ ಕೃಷಿ ಇಲಾಖೆಗೆ ಭೇಟಿ ಕೊಟ್ಟು, ಜಂಟಿ ಕೃಷಿ ನಿರ್ದೇಶಕ ಅಶೋಕ್ ಅವರಿಂದ ಪ್ರಾಥಮಿಕ ಮಾಹಿತಿ ಪಡೆದಿದ್ದಾರೆ.


ರಾಜ್ಯಪಾಲರಿಗೆ ಯಾವುದೇ ದೂರು ಹೋಗಿಲ್ಲ: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜಂಟಿ ಕೃಷಿ ನಿರ್ದೇಶಕ ಅಶೋಕ್, ಈ ಕುರಿತು ಮಾಧ್ಯಮಗಳಲ್ಲಿ ಸುದ್ದಿ ಬಿತ್ತರವಾಗಿದೆ. ಆದರೆ ರಾಜಭವನಕ್ಕೆ ಯಾವುದೇ ದೂರು ಹೋಗಿಲ್ಲ. ನಾನು ಈಗಾಗಲೇ ಎಲ್ಲಾ ಸಹಾಯಕ ನಿರ್ದೇಶಕರನ್ನು ಗೂಗಲ್ ಮೀಟ್ ಮೂಲಕ ಸಂಪರ್ಕಿಸಿದ್ದೇನೆ. ಈ ರೀತಿ ಯಾವುದೇ ಪತ್ರ ಬರೆದಿಲ್ಲ ಎಂದು ಅವರು ಹೇಳಿದ್ದಾರೆ. ಹಾಗಾಗಿ ಎಎಸ್ಪಿ ಮೂಲಕ ಈ ಬಗ್ಗೆ ತನಿಖೆ ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಈ ಫೇಕ್ ಲೆಟರ್ ಬಗ್ಗೆ ತನಿಖೆ ಮಾಡಲಾಗುವುದು. ಈ ಬಗ್ಗೆ ಸಚಿವರು ಸಹ ವಿವರಣೆ ಕೇಳಿದ್ದಾರೆ. ಹಾಗಾಗಿ ಅವರಿಗೆ ಮಾಹಿತಿ ನೀಡಿದ್ದೇನೆ. ನಾನು ಯಾವುದೇ ರೀತಿ ಪತ್ರ ಹೋಗಿಲ್ಲ, ಯಾರೂ ಪತ್ರ ಬರೆದಿಲ್ಲ ಎಂದು ಪೊಲೀಸರಿಗೆ ತಿಳಿಸಿದ್ದೇನೆ ಎಂದು ವಿವರಿಸಿದರು.

ಅಧಿಕಾರಿಗಳೊಂದಿಗೆ ಚಲುವರಾಯಸ್ವಾಮಿ ಗುಪ್ತಸಭೆ: ಕೃಷಿ ಸಚಿವರ ವಿರುದ್ಧ ರಾಜ್ಯಪಾಲರಿಗೆ ಅಧಿಕಾರಿಗಳ ದೂರು ಆರೋಪಕ್ಕೆ ಸಂಬಂಧಿಸಿದಂತೆ ಮಂಡ್ಯದ ಕೃಷಿ ಜಂಟಿ ನಿರ್ದೇಶಕ ಅಶೋಕ್ ಹಾಗೂ ಎಸ್ಪಿ ಯತೀಶ್ ಜೊತೆ ಸಚಿವ ಚಲುವರಾಯಸ್ವಾಮಿ ಗೌಪ್ಯ ಸಭೆ ನಡೆಸಿದರು. ಜಿಪಂ ಸಭಾಂಗಣದಲ್ಲಿ ನಡೆಯುತ್ತಿದ್ದ ಜಿಲ್ಲಾ ಮಟ್ಟದ ಸಭೆ ಮಧ್ಯೆ ಎದ್ದು ವೇದಿಕೆ ಹಿಂಭಾಗ ತೆರಳಿ ಕೆಲ ಅಧಿಕಾರಿಗಳೊಂದಿಗೆ ಗೌಪ್ಯ ಮಾತುಕತೆ ನಡೆಸಿದರು.

ಜೆಡಿಎಸ್ ಕೈವಾಡವಿದೆ: ಈ ಬಗ್ಗೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಈ ವಿಚಾರದಲ್ಲಿ ಜೆಡಿಎಸ್ ಮಾಜಿ ಶಾಸಕರ ಕೈವಾಡವಿದೆ. ಇದರಿಂದ ಸರ್ಕಾರಕ್ಕೆ ಆಗಲೀ, ಸಚಿವರಿಗೆ ಆಗಲೀ ಕುಂದು ತರಲು ಆಗಲ್ಲ. ಈಗಾಗಲೇ ಮಾಜಿ ಸಿಎಂ ಕುಮಾರಸ್ವಾಮಿ ಅವರದ್ದು ಹಿಟ್ ಅಂಡ್ ರನ್ ಕೇಸ್ ಎಂದು ಹೇಳಿದ್ದಾರೆ. ನಮ್ಮ ಸರ್ಕಾರ, ಸಚಿವರು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಇಂತಹ ಪ್ರಸಂಗಗಳಿಂದ ಜಿಲ್ಲೆಯ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ಯಾರಿಗೆ ಆದರೂ ಇದು ಒಳ್ಳೆಯದಲ್ಲ. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು. ಇದೊಂದು ನಕಲಿ ಪತ್ರವಾಗಿದ್ದು, ಈ ಬಗ್ಗೆ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ಸಮಗ್ರ ತನಿಖೆಯಾಗಬೇಕು: ಶಾಸಕ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಯಾರು ಪತ್ರ ಬರೆದರು, ಬರೆಸಿದರು ಎನ್ನುವ ಬಗ್ಗೆ ತನಿಖೆ ಆಗಬೇಕು. ನಾವು ಗೆದ್ದು ಬಂದು 2 ತಿಂಗಳಷ್ಟೇ ಕಳೆದಿದೆ. ನಮ್ಮ ಮೇಲೆ ಯಾಕಿಷ್ಟು ಕೋಪ. ಕನಿಷ್ಠ ಒಂದು 6 ತಿಂಗಳು ಕಳೆಯುವವರೆಗಾದರೂ ನಮ್ಮ ಸ್ನೇಹಿತರು ಸಮಾಧಾನವಾಗಿರಬೇಕು. ಜನರು ನಮಗೊಂದು ಅವಕಾಶ ಕೊಟ್ಟಿದ್ದಾರೆ. ನಾವು ಜನರ ಪರವಿದ್ದೇವೆ ಎಂದು ತಿಳಿಸಿದರು. ನಾಗಮಂಗಲ ಬಸ್ ಚಾಲಕನ ಆತ್ಮಹತ್ಯೆ ಯತ್ನ ಪ್ರಕರಣದಲ್ಲೂ ಸುಳ್ಳು ದೂರು ನೀಡಿ ಚಲುವರಾಯಸ್ವಾಮಿ ಅವರನ್ನು ಸಿಲುಕಿಸುವ ಯತ್ನ ನಡೆದಿತ್ತು. ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ನಮ್ಮ ಜೆಡಿಎಸ್‌ನವರು ಮಾಡಬಾರದು. ತನಿಖೆಗೆ ನಮ್ಮ ವಿರೋಧ ಇಲ್ಲ. ತನಿಖೆ ಆಗಲಿ. ಇದು ಒಂದು ಷಡ್ಯಂತ್ರವಾಗಿದ್ದು, ಸತ್ಯಾಸತ್ಯತೆಯಿಂದ ನಿಜಾಂಶ ಹೊರಬರಲಿ ಎಂದರು.

ನನ್ನನ್ನು ಟಾರ್ಗೆಟ್ ಮಾಡುವುದೇ ಕೆಲವರಿಗೆ ಕೆಲಸ



ಮಂಡ್ಯ, ಆ.7–ತಮ್ಮ ವಿರುದ್ಧ ಕೃಷಿ ಅಧಿಕಾರಿಗಳು ರಾಜ್ಯಪಾಲರಿಗೆ ದೂರು ನೀಡಿದ್ದಾರೆ ಎಂಬ ಆರೋಪದ ಕುರಿತು ಸ್ಪಷ್ಟನೆ ನೀಡಿರುವ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ನನಗೆ ಯಾವ ಲೆಟರ್ ಬಗ್ಗೆಯೂ ಗೊತ್ತಿಲ್ಲ. ನನ್ನನ್ನ ಟಾರ್ಗೆಟ್ ಮಾಡುವುದೇ ಕೆಲವರಿಗೆ ಕೆಲಸವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೃಷಿ ಜಂಟಿ ನಿರ್ದೇಶಕ (ಜೆಡಿ) ಬಳಿ ಈ ಬಗ್ಗೆ ಕೇಳಿದಾಗ ಅವರು ಇದೊಂದು ಫೇಕ್ ಲೆಟರ್ ಎಂದಿದ್ದಾರೆ. ಬಹಳ ಜನ ಹುಡುಕಿ ಹುಡುಕಿ ಗೊಂದಲ ಸೃಷ್ಟಿ ಮಾಡಲು ಕಾದಿದ್ದು, ಒಂದು ವೇಳೆ ತಪ್ಪು ಎಸಗಿದರೆ ಕಾರ್ಯದರ್ಶಿಗೆ ತನಿಖೆ ನಡೆಸಲು ಸೂಚಿಸುತ್ತೇನೆ. ಜಂಟಿ ನಿರ್ದೇಶಕರು ಫೇಕ್ ಲೆಟರ್, ನಮ್ಮಲ್ಲಿ ಯಾರು ಆ ತರಹದ ಅಧಿಕಾರಿಗಳಿಲ್ಲ ಎಂದಿದ್ದಾರೆ. ಆದರೂ ಈ ಬಗ್ಗೆ ಸತ್ಯಾಸತ್ಯತೆ ತಿಳಿದು ತನಿಖೆಗೆ ಸೂಚಿಸುತ್ತೇನೆ ಎಂದರು.

ನಮ್ಮನ್ನು ಹೆಚ್ಚೆಚ್ಚು ಟಾರ್ಗೆಟ್ ಮಾಡುವುದರಿಂದ ನಾವು ಮತ್ತಷ್ಟು ಪ್ರಕಾಶಮಾನವಾಗುತ್ತೇವೆ. ಜಿಲ್ಲೆಯಲ್ಲಿ ಜಂಟಿ ನಿರ್ದೇಶಕರು ಯಾರ ಬಳಿ ಮಾತನಾಡುವುದಾಗಲೀ, ಭೇಟಿ ಮಾಡುವುದಾಗಲೀ ಮಾಡಿಲ್ಲ. ನಾನು ಯಾವ ಸಹಾಯಕ ನಿರ್ದೇಶಕರನ್ನು (ಎಡಿ) ಭೇಟಿ ಮಾಡಿಲ್ಲ. ಇನ್ನು ರಾಜ್ಯದಲ್ಲೇ ಮಾಡಿಲ್ಲ, ಇನ್ನು ನನ್ನ ಜಿಲ್ಲೆಯಲ್ಲಿ ಮಾಡುತ್ತೀನಾ? ಬೆಳಗ್ಗೆ ಎದ್ದು ತಿಂಡಿ, ಊಟ ಮಾಡದೆ ನನ್ನ ಟಾರ್ಗೆಟ್ ಮಾಡುವುದೇ ಕೆಲವರಿಗೆ ಕೆಲಸವಾಗಿದ್ದು, ಅದಕ್ಕೆ ನನಗೆ ಬೇಜಾರಿಲ್ಲ. ನನ್ನ ಕೆಲಸ ನಾನು ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ಪ್ರಕರಣವನ್ನು ಗಂಭೀರವಾಗಿ ಸರ್ಕಾರ ಪರಿಗಣಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಈ ಬಗ್ಗೆ ಕರೆ ಮಾಡಿ ಮಾಹಿತಿ ಕೊಟ್ಟಿದ್ದೇನೆ. ಈ ರೀತಿ ಗಂಭೀರ ಆರೋಪ ಕೇಳಿ ಬಂದಿದೆಯಾ ಎಂದು ಕೇಳಿದರು. ಈ ಬಗ್ಗೆ ಎಲ್ಲಾ ರೀತಿಯಲ್ಲೂ ತನಿಖೆ ಮಾಡಿ ಎಂದು ನಾನೇ ಹೇಳಿದ್ದೇನೆ. ಈ ಪತ್ರದ ಸತ್ಯಾಸತ್ಯತೆ ಹೊರತರಲಿ ಎಂದರು.

ಅಧಿಕಾರಿಗಳಿಂದಲೂ ಈ ಬಗ್ಗೆ ಮಾಹಿತಿ ಪಡೆದಿದ್ದೇನೆ. ಮಂಡ್ಯ ಎಸ್ಪಿ, ಜಂಟಿ ಕೃಷಿ ನಿರ್ದೇಶಕರಿಂದ ಮಾಹಿತಿ ಪಡೆದಿದ್ದೇನೆ. ಜೆಡಿ ಅವರು ಈಗಾಗಲೇ ಜೂಮ್ ಮೀಟಿಂಗ್ ಮಾಡಿದ್ದಾರೆ. ಯಾವ ಸಹಾಯಕ ನಿರ್ದೇಶಕರು ನಾವು ಪತ್ರ ಬರೆದಿಲ್ಲ ಅಂದಿದ್ದಾರಂತೆ. ಮಂಡ್ಯ ಎಸ್ಪಿ ಅವರಿಗೂ ಈ ಬಗ್ಗೆ ತನಿಖೆಗೆ ಸೂಚಿಸಿದ್ದು, ಎಸ್ಪಿ ಅವರ ಪ್ರಾಥಮಿಕ ತನಿಖೆಯಿಂದ ಫೇಕ್ ಅನ್ನೋದು ಸಾಬೀತಾಗಿದೆ ಎಂದರು.

> ಮಂಡ್ಯ ಜಿಲ್ಲೆಯ ಅಧಿಕಾರಿಗಳು ರಾಜ್ಯಪಾಲರಿಗೆ ದೂರು ನೀಡಿದ್ದಾರೆ ಎಂಬರ್ಥದಲ್ಲಿ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪತ್ರ ನಕಲಿಯಾದುದು ಎಂದು ಬಯಲಾಗಿದೆ. ಅಂತಹ ಅಧಿಕಾರಿಗಳು ಯಾರೂ ಜಿಲ್ಲೆಯಲ್ಲಿ ಇಲ್ಲ ಎಂದು ಮಂಡ್ಯದ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಸ್ಪಷ್ಟಪಡಿಸಿದ್ದಾರೆ. ಹೀಗಿದ್ದರೂ ಈ ಸಂಬಂಧ ಪರಿಶೀಲನೆ ನಡೆಸಿ, ಅಗತ್ಯ ಕಂಡುಬಂದಲ್ಲಿ ತನಿಖೆ ನಡೆಸುತ್ತೇವೆ. ಬಿಜೆಪಿ ಕರ್ನಾಟಕದ ನಾಯಕರೇ ಇಂತಹ ನಕಲಿ ಪತ್ರವನ್ನಿಟ್ಟುಕೊಂಡು ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ನೀವೇ ಇದರ ಸೃಷ್ಟಿಕರ್ತರೋ? ಅಥವಾ ನಿಮ್ಮ 'ಬ್ರದರ್ರೋ'?
>
> – ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್.

ದೂರರ್ಜಿ ಪರಿಶೀಲಿಸುವಂತೆ ರಾಜಭವನದಿಂದ ಮುಖ್ಯ ಕಾರ್ಯದರ್ಶಿಗೆ ಪತ್ರ ರವಾನೆ!?



ಮೈಸೂರು, ಆ. 7– ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧ ಮಂಡ್ಯ ಜಿಲ್ಲೆಯ ಏಳು ಸಹಾಯಕ ಕೃಷಿ ನಿರ್ದೇಶಕರು ಭ್ರಷ್ಟಾಚಾರದ ಆರೋಪದಡಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಪತ್ರ ಬರೆದಿದ್ದಾರೆ ಎನ್ನಲಾಗಿದ್ದು, ಈ ಸಂಬಂಧ ಪರಿಶೀಲಿಸಿ ಕ್ರಮವಹಿಸುವಂತೆ ರಾಜಭವನದಿಂದ ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ರವಾನೆಯಾಗಿದೆ. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಎಂಬ ಹೆಸರಿನಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ರವಾನೆಯಾಗಿದ್ದರೂ ಪತ್ರದ ಕೊನೆಯಲ್ಲಿ ರಾಜ್ಯಪಾಲರ ಅಧೀನ ಕಾರ್ಯದರ್ಶಿ (ಪ್ರ) ಆಡಳಿತ ಎಂದು ನಮೂದಾಗಿದ್ದು, ಜಿ. ಪ್ರತಾಪ್ ಎಂದು ಸಹಿ ಮಾಡಲಾಗಿದೆ. ಇವರಿಂದ ಎಂಬ ಸ್ಥಳದಲ್ಲಿ ರಾಜಭವನದ ಅಧಿಕಾರಿಯ ಪದನಾಮ ಹಾಗೂ ಸಹಿ ಮಾಡಿರುವ ಸ್ಥಳದಲ್ಲಿನ ಪದನಾಮದಲ್ಲಿ ವ್ಯತ್ಯಾಸವಿರುವುದರಿಂದ ಈ ಪತ್ರದ ಬಗ್ಗೆ ಸಂಶಯ ವ್ಯಕ್ತವಾಗಿದೆ. ರಾಜಭವನದಿಂದ ಆಗಸ್ಟ್ 1ರಂದು ಪತ್ರ ರವಾನೆಯಾಗಿದ್ದು, ಅದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಚೇರಿ ಆಗಸ್ಟ್ 2ರಂದು ಸ್ವೀಕರಿಸಿದ್ದರೇ, ಇದೇ ಪತ್ರವನ್ನು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮರವರು ಆಗಸ್ಟ್ 3ರಂದು ಸ್ವೀಕರಿಸಿದ್ದಾರೆ ಎಂದು ಪತ್ರದ ಪ್ರತಿಯಲ್ಲಿ ಗೋಚರಿಸುತ್ತಿದೆ.

ಪತ್ರದ ಸಾರಾಂಶ: ಮಾನ್ಯ ರಾಜ್ಯಪಾಲರವರಿಗೆ ಮಂಡ್ಯ ಜಿಲ್ಲೆಯ ಮಂಡ್ಯ, ಮಳವಳ್ಳಿ, ಕೃಷ್ಣರಾಜಪೇಟೆ, ಪಾಂಡವಪುರ, ನಾಗಮಂಗಲ, ಶ್ರೀರಂಗಪಟ್ಟಣ ಮತ್ತು ಮದ್ದೂರು ತಾಲೂಕು ಸಹಾಯಕ ಕೃಷಿ ನಿರ್ದೇಶಕರು ಮತ್ತು ಸಿಬ್ಬಂದಿಗಳು ದೂರರ್ಜಿ ಸಲ್ಲಿಸಿರುತ್ತಾರೆ. ದೂರಿನಲ್ಲಿ ಉಲ್ಲೇಖಿಸಿರುವಂತೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ತಲಾ 6–8 ಲಕ್ಷ ರೂ. ನೀಡುವಂತೆ ಸಚಿವರು ಮಂಡ್ಯ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಮೂಲಕ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿರುತ್ತಾರೆ. ಲಂಚ ಕೇಳುವ ಇಂತಹ ಅನಿಷ್ಟ ಪದ್ಧತಿಗೆ ಕಡಿವಾಣ ಹಾಕುವ ಸಂಬಂಧ ಕ್ರಮ ವಹಿಸದಿದ್ದಲ್ಲಿ ಅಧಿಕಾರಿಗಳು ಕುಟುಂಬ ಸದಸ್ಯರ ಜೊತೆಗೆ ವಿಷ ಕುಡಿಯುವುದಾಗಿ ತಿಳಿಸಿರುವುದರಿಂದ ಈ ದೂರರ್ಜಿಯನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ರಾಜಭವನದಿಂದ ರಾಜ್ಯ ಮುಖ್ಯ ಕಾರ್ಯದರ್ಶಿಗೆ ರವಾನೆಯಾಗಿರುವ ಪತ್ರದಲ್ಲಿ ತಿಳಿಸಲಾಗಿದೆ.

ಅಗ್ರಹಾರಬಾಚಹಳ್ಳಿ ಗ್ರಾಪಂಗೆ ದಿವಿಕುಮಾರ್ ನೂತನ ಅಧ್ಯಕ್ಷ



ಕೆ.ಆರ್.ಪೇಟೆ, ಆ.7– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಎ.ಸಿ.ದಿವಿಕುಮಾರ್, ಉಪಾಧ್ಯಕ್ಷೆಯಾಗಿ ಸುನೀತಾ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯ ದಿವಿಕುಮಾರ್, ಜೆಡಿಎಸ್ ಬೆಂಬಲಿತ ಸದಸ್ಯ ರಮೇಶ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ದಿವಿ ಕುಮಾರ್ 12 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ರಮೇಶ್ 9 ಮತ ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಸುನೀತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತೋಟಗಾರಿಕಾ ಇಲಾಖೆ ಅಧಿಕಾರಿ ಲೋಕೇಶ್ ಅವಿರೋಧ ಆಯ್ಕೆ ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಪಿಡಿಓ ಹೆಚ್.ಎಸ್.ರವಿಕುಮಾರ್, ತಾಪಂ ವ್ಯವಸ್ಥಾಪಕ ಅನಿಲ್‌ಬಾಬು ಕಾರ್ಯ ನಿರ್ವಹಿಸಿದರು.

ಕಾಂಗ್ರೆಸ್ ಮುಖಂಡ, ಮಾಜಿ ಗ್ರಾಪಂ ಸದಸ್ಯ ಎ.ಬಿ.ಕುಮಾರ್, ನೂತನ ಅಧ್ಯಕ್ಷ ದಿವಿಕುಮಾರ್ ಮಾತನಾಡಿದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷರಾದ ನಾಗೇಂದ್ರ, ಕುಮಾರ್, ಎ.ಸಿ.ದೇವರಾಜು, ಎ.ಬಿ.ಮಹೇಂದ್ರ, ಎ.ಬಿ.ದೇವರಾಜು, ರಮೇಶ್, ರಾಜೇಗೌಡ, ಕುಮಾರಸ್ವಾಮಿ, ಪುರಸಭಾ ಸದಸ್ಯ ನಟರಾಜು, ಆನಂದ್, ಹರೀಶ್, ದ್ಯಾವಯ್ಯ, ಬೋರ್‌ವೆಲ್ ಅನಿಲ್, ಗ್ರಾಪಂ ಸದಸ್ಯರಾದ ನಂಜೇಗೌಡ, ಕುಮಾರಗೌಡ, ಫಯಾಜ್ ಉಲ್ಲಾ ಖಾನ್, ಚನ್ನೇಗೌಡ, ಪ್ರೇಮ, ಜಯಂತಿ, ಬಿ.ಆರ್.ರಮೇಶ್, ಆಶಾ, ಆನಂದ್, ರೇಣುಕಾ, ನೇತ್ರಾವತಿ, ಸಿ.ಆರ್.ಪಿ.ಕುಮಾರ್, ರಮಾನಂದ್, ರೇವತಿ, ನೇತ್ರಾ, ಸಾವಿತ್ರಮ್ಮ, ಗೋವಿಂದಶೆಟ್ಟಿ, ಆಶಾ, ಶ್ರೀನಿವಾಸ್.ಆರ್., ಶಶಿರೇಖಾ, ಭಾಗ್ಯ, ಎ.ಎಸ್.ದಿನೇಶ್ ಮತ್ತಿತರರಿದ್ದರು.

ಐಎಎಸ್ ಕನಸು ಭಗ್ನ: ಬ್ಯಾಂಕ್ ವ್ಯವಸ್ಥಾಪಕಿ ನೇಣಿಗೆ ಶರಣು




ಮಂಡ್ಯ, ಆ.7– ಐಎಎಸ್ ಅಧಿಕಾರಿಯಾಗಬೇಕೆಂಬ ಕನಸು ಈಡೇರಲಿಲ್ಲ ಎಂಬ ಕಾರಣಕ್ಕೆ ಜೀವನದಲ್ಲಿ ಜಿಗುಪ್ಸೆಗೊಂಡು ಕಾವೇರಿ ಗ್ರಾಮೀಣ ಬ್ಯಾಂಕ್‌ನ ಪ್ರಾದೇಶಿಕ ಕಚೇರಿ ವ್ಯವಸ್ಥಾಪಕಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ವಿನಾಯಕ ಬಡಾವಣೆಯಲ್ಲಿ ನಡೆದಿದೆ.

ಮಂಡ್ಯದ ಕಾವೇರಿ ಗ್ರಾಮೀಣ ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕಿ ಶೃತಿ(30) ಆತ್ಮಹತ್ಯೆಗೆ ಶರಣಾದವರಾಗಿದ್ದು, ಮೂಲತಃ ಕೊಳ್ಳೇಗಾಲದ ಹಿರಿಯ ಪತ್ರಕರ್ತ ಮಲ್ಲಪ್ಪ ಅವರ ಪುತ್ರಿಯಾದ ಇವರು, ಮಂಡ್ಯದ ವಿನಾಯಕ ಬಡಾವಣೆಯ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಕಾವೇರಿ ಗ್ರಾಮೀಣ ಬ್ಯಾಂಕ್‌ನ ಉದ್ಯೋಗಿಯಾಗಿ ನೇಮಕಗೊಂಡು ಚಿಕ್ಕಮಗಳೂರಿನ ಶಾಖೆಯಲ್ಲಿ ಕಳೆದ 7 ವರ್ಷ ಕಾರ್ಯ ನಿರ್ವಹಿಸಿ, ಮಂಡ್ಯದ ಪ್ರಾದೇಶಿಕ ಕಚೇರಿಗೆ 2 ತಿಂಗಳ ಹಿಂದೆ ಬಂದಿದ್ದರು.

ಭಾನುವಾರ ರಾತ್ರಿ 7ರ ಸಮಯದಲ್ಲಿ ತಂದೆ ಮಲ್ಲಪ್ಪಗೆ ಕರೆ ಮಾಡಿದ ಶೃತಿ ನಾನು ದೇವರ ಬಳಿ ಹೋಗುತ್ತಿದ್ದೇನೆ. ನನ್ನನ್ನು ಕ್ಷಮಿಸಿ ಎಂದು ಹೇಳಿ ಕರೆ ಕಟ್ ಮಾಡಿದ್ದಾರೆ. ತಕ್ಷಣ ಮಲ್ಲಪ್ಪ ಕರೆ ಮಾಡಿದಾಗ ಮೊಬೈಲ್ ಸ್ವಿಚ್ ಆಫ್ ಆಗಿದೆ.


ಮಂಡ್ಯದಲ್ಲಿರುವ ಸಂಬಂಧಿಕರಿಗೆ ಮಲ್ಲಪ್ಪ ವಿಚಾರ ತಿಳಿಸಿದ್ದು, ಮನೆಯ ಬಳಿ ಹೋಗಿ ನೋಡಿದಾಗ ಅಷ್ಟರಲ್ಲಿ ಶೃತಿ ನೇಣು ಬಿಗಿದುಕೊಂಡಿದ್ದರು. ಆತ್ಮಹತ್ಯೆಗೆ ಮುನ್ನ ಡೆತ್ ನೋಟ್ ಬರೆದಿರುವ ಶೃತಿ ಐಎಎಸ್ ಮಾಡಬೇಕೆಂಬ ಕನಸು ನನಸಾಗಲಿಲ್ಲ, ಜೊತೆಗೆ ಜೀವನದಲ್ಲಿಯೂ ನಾನು ವೈಫಲ್ಯವನ್ನೂ ಕಂಡಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಮಂಡ್ಯ ಗ್ರಾಮಾಂತರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶೃತಿ ಅವರ ದೇಹವನ್ನು ಸೋಮವಾರ ಮಧ್ಯಾಹ್ನ ಕೆಲ ಸಮಯ ಕೊಳ್ಳೇಗಾಲದ ಆದರ್ಶ ನಗರದಲ್ಲಿ ಇಟ್ಟಿದ್ದು, ನಂತರ ತಿ. ನರಸೀಪುರ ತಾಲೂಕು ಯಡತೊರೆಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	113.34 ಅಡಿ
ಒಳಹರಿವು	5519 ಕ್ಯುಸೆಕ್
ಹೊರಹರಿವು	5354 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2282.68 ಅಡಿ
ಒಳ ಹರಿವು	5533 ಕ್ಯುಸೆಕ್
ಹೊರ ಹರಿವು	5850 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2858.65 ಅಡಿ
ಒಳ ಹರಿವು	2830 ಕ್ಯುಸೆಕ್
ಹೊರ ಹರಿವು	2800 ಕ್ಯುಸೆಕ್

ಉಡುಪಿ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥರ ಪ್ರವಚನ



ಮೈಸೂರು, ಆ.7 (ಎಸ್‌ಪಿಎನ್)– ಭಗವಂತ ಕುಪಿತಗೊಂಡರೆ ಗುರುಗಳ ಮೂಲಕ ಭಗವಂತನ ಕೋಪವನ್ನು ತಣಿಸಬಹುದು. ಆದರೆ, ಗುರುಗಳೇ ಮುನಿಸಿಕೊಂಡರೆ ಅವರನ್ನು ಶಾಂತಗೊಳಿಸುವುದು ಅಷ್ಟು ಸುಲಭವಲ್ಲ ಎಂದು 'ತ್ರಿಶಂಕು ಸ್ವರ್ಗ' ಕುರಿತ ವಿಶೇಷ ಪ್ರವಚನ ಮಾಲೆಯಲ್ಲಿ ಉಡುಪಿ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ತಿಳಿಸಿದ್ದಾರೆ.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯ ಟಿ.ಕೆ.ಬಡಾವಣೆಯಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ಸಂದರ್ಭದಲ್ಲಿ ವಿವರಿಸಿದ್ದಾರೆ.

ಆ ಕಡೆಗೂ ಇಲ್ಲದೇ ಈ ಕಡೆಗೂ ಇಲ್ಲದೇ ನಡುವೆ ಸಿಲುಕಿಕೊಂಡವರನ್ನು 'ತ್ರಿಶಂಕು ಸ್ವರ್ಗ' ಅಥವಾ ತ್ರಿಶಂಕು ಎಂದು ಬಲ್ಲವರು ಹೇಳುವುದುಂಟು. ಇದರ ವೃತ್ತಾಂತವನ್ನು ಶ್ರೀಗಳು ಮನೋಜ್ಞವಾಗಿ ವರ್ಣಿಸಿದರು.

ಇದಕ್ಕೂ ಮುನ್ನ ಲೇಖಕ ವಿಜಯೇಂದ್ರ ಆಚಾರ್ಯ ರಚಿತ ಕವಿತೆಯನ್ನು ರಾಯಚೂರಿನ ಗಾಯಕ ಶೇಷಗಿರಿರಾವ್ ಮನೋಜ್ಞವಾಗಿ ಹಾಡಿ, ಪ್ರೇಕ್ಷಕರನ್ನು ರಂಜಿಸಿದರು. ಮೈಸೂರಿನ ಶ್ರೀ ಕೃಷ್ಣತಾತ್ಪರ್ಯ ಯಕ್ಷಗಾನ ತಂಡದಿಂದ ತೆಂಕುತಿಟ್ಟು ಯಕ್ಷಗಾನ ಪ್ರದರ್ಶಿಸಲಾಯಿತು. ಭಾಗವತರಾಗಿ ಅರ್ಜುನ ಕೊರ್ಡೇಲ್, ಚಂಡೆ– ಶಿಖಿನ್ ಶರ್ಮಾ, ಮದ್ದಳೆ– ಪೃಥ್ವಿ ಬಡಕ್ಕಿಲ, ಚಕ್ರತಾಳ ರಮೇಶ್‌ಭಟ್ ಸಾಥ್ ನೀಡಿದರು.

ಕೃಷ್ಣಕುಮಾರ್ ಆಚಾರ್ಯ, ರಾಘವೇಂದ್ರ ಭಟ್, ಗಣೇಶ್ ಭಟ್, ಯು.ವಿ.ರಾಜೇಶ್, ಅಲಕಾ ಕಟ್ಟೆಮನೆ, ಮಹತಿ, ಅನಂತ ಪದ್ಮನಾಭ್ ಅಭಿನಯಿಸಿದರೆ, ಪ್ರಸಾಧನ ಗೋಪಾಲ್ ಭಟ್ ಮತ್ತು ಕೀರ್ತನ್ ಸಾಥ್ ನೀಡಿದರು.

ಮಾಜಿ ಸಿಎಂ ಕುಮಾರಸ್ವಾಮಿ ಟೀಕೆಗೆ ಖಂಡನೆ



ಮೈಸೂರು,ಆ.7(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಜಾವಾದಿ ಎಂದು ಟೀಕಿಸಿರುವುದು ಖಂಡನೀಯ ಎಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿಯವರು ವಿದೇಶ ಪ್ರವಾಸದಲ್ಲಿ ಮೋಜು–ಮಸ್ತಿ ಮಾಡಿಕೊಂಡು ಬಂದಿದ್ದಾರೆ. ಇದೀಗ ಸಿದ್ದರಾಮಯ್ಯರನ್ನು ಮಜಾವಾದಿ ಎಂದು ಟೀಕಿಸಿರುವುದು ಖಂಡನೀಯ. ಈಸ್ಟ್ ಇಂಡಿಯಾ ಕಂಪನಿಯಂತೆ ಕಾಂಗ್ರೆಸ್ ವಸೂಲಿ ಮುಂದುವರೆಸಿಕೊಂಡು ಹೋಗುತ್ತಿದೆ ಎಂದು ಆರೋಪಿಸಿರುವುದು ನಿರಾಧಾರ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ವ್ಯಾಪಕವಾದ ಭ್ರಷ್ಟಾಚಾರ ಆರೋಪ ಕೇಳಿ ಬಂದಿತು. ಆಗ ಕುಮಾರಸ್ವಾಮಿಯವರು ಧ್ವನಿ ಎತ್ತಲಿಲ್ಲ. ಈಗ ನಿತ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಸಲ್ಲದ ಆರೋಪದಲ್ಲಿ ನಿರತರಾಗಿದ್ದಾರೆ. ಗೃಹ ಇಲಾಖೆಯಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ ಎಂದು ಆರೋಪ ಮಾಡಿರುವುದು ಸತ್ಯಕ್ಕೆ ದೂರ. ಕಳೆದ ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಇವರು ನೈಸ್ ರಸ್ತೆಯ ಅಕ್ರಮ ಆರೋಪ ಏಕೆ ಮಾಡಲಿಲ್ಲ ಎಂದು ಪ್ರಶ್ನಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ಅತಂತ್ರ ಫಲಿತಾಂಶ ಬರುತ್ತದೆಂದು ಕುಮಾರಸ್ವಾಮಿಯವರು ಕಾದುಕೊಂಡಿದ್ದರು. ಆದರೆ ಕಾಂಗ್ರೆಸ್ ಪಕ್ಷ ಭರ್ಜರಿ ಗೆಲುವು ಸಾಧಿಸಿ ಏಕಾಂಗಿಯಾಗಿ ಸರ್ಕಾರ ರಚನೆ ಮಾಡಿದ್ದರಿಂದ ಹತಾಶರಾಗಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಮುಖಂಡರಾದ ಎಸ್.ಎ.ರಹೀಂ, ರಾಮಣ್ಣ, ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ರಾಜ್ಯಾಧ್ಯಕ್ಷ ಮರಿದೇವಯ್ಯ ಗೋಷ್ಠಿಯಲ್ಲಿದ್ದರು.

ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ

ಮೈಸೂರು, ಆ.7(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲೆ ಸಭಾಂಗಣದಲ್ಲಿ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಆ.13 ರಂದು 'ರಾಷ್ಟ್ರ ಪ್ರಗತಿ ಹೊಂದಲು ರಾಜಕಾರಣಿಗಳಿಗೆ ಕನಿಷ್ಠ ವಿದ್ಯಾರ್ಹತೆ ನಿಗದಿಪಡಿಸುವುದು ಅನಿವಾರ್ಯ' ಎಂಬ ವಿಷಯದ ಕುರಿತು ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 9.30ಕ್ಕೆ ಕಾಮಾಕ್ಷಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ವಿ.ಪ್ರಸನ್ನಕುಮಾರ್ ಸ್ಪರ್ಧೆಯನ್ನು ಉದ್ಘಾಟಿಸಲಿದ್ದಾರೆ. ಮೊದಲ ಮೂವರು ವಿಜೇತರಿಗೆ ನಗದು ಬಹುಮಾನ ನೀಡಲಿದ್ದು, ಮೊದಲ ಬಹುಮಾನ 5,000 ರೂ., ದ್ವಿತೀಯ ಬಹುಮಾನ 4,000 ರೂ. ಮತ್ತು ತೃತೀಯ ಬಹುಮಾನ 3,000 ರೂ. ನೀಡಲಾಗುವುದು. ಅಲ್ಲದೆ, ಇಬ್ಬರಿಗೆ ಸಮಾಧಾನಕರ ಬಹುಮಾನವಾಗಿ ತಲಾ 1,000 ರೂ. ನಗದು ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2342029 ಅಥವಾ ಮೊ.ನಂ.8618898929 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಇಂದು ಮುಂದುವರೆದ ಸಾಮಾನ್ಯ ಕೌನ್ಸಿಲ್ ಸಭೆ

ಮೈಸೂರು, ಆ.7– ಆ.8ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರು ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2023ನೇ ಜುಲೈ ಮಾಹೆಯ ಮುಂದುವರೆದ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ.

ಆ.11ರಿಂದ ಮೂರು ದಿನ ಮೈಸೂರಲ್ಲಿ ಅರವಳಿಕೆ ಶಾಸ್ತ್ರಜ್ಞರ ಸಮ್ಮೇಳನ



ಮೈಸೂರು,ಆ.7(ಪಿಎಂ)– ಭಾರತೀಯ ಅರವಳಿಕೆ ಶಾಸ್ತ್ರಜ್ಞರ ಸಂಘದ (ಐಎಸ್‌ಎ) ಕರ್ನಾಟಕ ಮತ್ತು ಮೈಸೂರು ಘಟಕದ ವತಿಯಿಂದ ಆ.11ರಿಂದ 13ರವರೆಗೆ 38ನೇ ಐಎಸ್‌ಎ ದಕ್ಷಿಣ ವಲಯ ಮತ್ತು 37ನೇ ರಾಜ್ಯಮಟ್ಟದ ಸಮ್ಮೇಳನವನ್ನು ಮೈಸೂರಿನಲ್ಲಿ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಸಂಘಟನಾ ಅಧ್ಯಕ್ಷೆ ಡಾ.ಆರ್.ಉಷಾದೇವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವೈದ್ಯಕೀಯ ಕಾಲೇಜು ಆವರಣದಲ್ಲಿ (ಹಳೇ ವಸ್ತು ಪ್ರದರ್ಶನ ಮೈದಾನ) ನೂತನವಾಗಿ ನಿರ್ಮಿಸಿರುವ ಗ್ರಂಥಾಲಯ ಸಂಕೀರ್ಣದ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ. ಆ.11ರಂದು ಸಂಜೆ 6ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಐಎಸ್‌ಎ ರಾಷ್ಟ್ರೀಯ ಅಧ್ಯಕ್ಷ ಡಾ.ಎಂ.ವಿ.ಭೀಮೇಶ್ವರ್, ಕಾರ್ಯದರ್ಶಿ ಸುಖಮಿಂದರ್ ಜಿತ್ ಸಿಂಗ್ ಬಾಜ್ವಾ, ಐಎಸ್‌ಎ ದಕ್ಷಿಣ ವಲಯದ ಕಾರ್ಯಕಾರಿ ಸಮಿತಿ ಸದಸ್ಯ ಚಿಂತಲಾ ಕಿಶನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಐಎಸ್‌ಎ ಕರ್ನಾಟಕದ ಅಧ್ಯಕ್ಷ ಡಾ.ಗುರುಲಿಂಗಪ್ಪ ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಸಮ್ಮೇಳನವು ಅರವಳಿಕೆ ಸಂಬಂಧ ರೋಗಿಗಳ ಸುರಕ್ಷತೆ ಮತ್ತು ಇತ್ತೀಚಿನ ಬೆಳವಣಿಗೆಗಳ ಮೇಲೆ ಕೇಂದ್ರೀಕರಿಸಲಿದೆ. 150ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಖ್ಯಾತ ಅರವಳಿಕೆ ತಜ್ಞರು ಭಾಗವಹಿಸುವ ನಿರೀಕ್ಷೆ ಇದೆ. ದಕ್ಷಿಣ ಭಾರತದ 6 ರಾಜ್ಯಗಳಿಂದ ಅರವಳಿಕೆ ತಜ್ಞರು, ಅರವಳಿಕೆ ಶಿಕ್ಷಣ ತಜ್ಞರು, ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 2 ಸಾವಿರ ಮಂದಿ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಐಎಸ್‌ಎ ಮೈಸೂರು ಅಧ್ಯಕ್ಷ ಡಾ.ವಿ.ವೈ.ಶ್ರೀನಿವಾಸ್, ಕಾರ್ಯದರ್ಶಿ ಡಾ.ಆರ್.ವೈದ್ಯನಾಥನ್, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಹೆಚ್.ಜಿ.ಮಂಜುನಾಥ್, ಅರವಳಿಕೆ ತಜ್ಞವೈದ್ಯರಾದ ಡಾ.ಮಂಜುಳಾ, ಡಾ.ಅರ್ಚನಾ, ಡಾ.ದಿನೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಶ್ರೀಕಂಠಸ್ವಾಮಿಯವರಿಗೆ ಅಭಿನಂದನೆ

ಶಿಕ್ಷಣ, ಸಂಶೋಧನೆಗೆ ನಮ್ಮ ದೇಶದಲ್ಲಿ ಕಡೆಯ ಆದ್ಯತೆ

● ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತೀವ್ರ ವಿಷಾದ ● ನಮ್ಮ ಸರ್ಕಾರ, ಜನಪ್ರತಿನಿಧಿಗಳಿಗೆ ಪ್ರಬುದ್ಧತೆಯೇ ಇಲ್ಲ ● ಸರ್ಕಾರಿ ವಿವಿಗಳ ಸ್ಥಿತಿ ಹೀನಾಯ ಸ್ಥಿತಿಯತ್ತ; ಬೇಸರ

ಮೈಸೂರು, ಆ.7(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ವಿಜ್ಞಾನ ಭವನದ ಸಭಾಂಗಣದಲ್ಲಿ ಪರಿಸರ ವಿಜ್ಞಾನ ಅಧ್ಯಯನ ವಿಭಾಗ ಮತ್ತು ಎಂ.ಟೆಕ್ ಇನ್ ಮೆಟೀರಿಯಲ್ಸ್ ಸೈನ್ಸ್ ವಿಭಾಗದ ವತಿಯಿಂದ ಸೇವೆಯಿಂದ ನಿವೃತ್ತರಾದ ಪ್ರೊ.ಎಸ್.ಶ್ರೀಕಂಠಸ್ವಾಮಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.



ಮೈಸೂರು ವಿವಿ ಪರಿಸರ ವಿಜ್ಞಾನ ಅಧ್ಯಯನ ಮತ್ತು ಎಂ.ಟೆಕ್ ಇನ್ ಮೆಟೀರಿಯಲ್ಸ್ ಸೈನ್ಸ್ ವಿಭಾಗದ ವತಿಯಿಂದ ಸೇವೆಯಿಂದ ನಿವೃತ್ತರಾದ ಪ್ರೊ.ಎಸ್.ಶ್ರೀಕಂಠಸ್ವಾಮಿ ದಂಪತಿಯನ್ನು ಅಭಿನಂದಿಸಲಾಯಿತು. ವಿಶ್ರಾಂತ ಕುಲಪತಿಗಳಾದ ಪ್ರೊ.ಎಸ್.ಎನ್.ಹೆಗ್ಡೆ, ಪ್ರೊ.ಎನ್.ಎಸ್.ರಾಮೇಗೌಡ, ಪ್ರೊ.ಕೆ.ಎಸ್.ರಂಗಪ್ಪ ಮತ್ತಿತರರಿದ್ದರು.

ಅಭಿನಂದನಾ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಈಗಿನ ಸರ್ಕಾರಗಳು, ರಾಜಕೀಯ ಪ್ರತಿನಿಧಿಗಳಿಗೆ ಪ್ರಬುದ್ಧತೆ ಇಲ್ಲ. ನಾನು ಪ್ರಪಂಚದ 25 ದೇಶಗಳು, 10 ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡಿದ್ದೇನೆ. ಆ ಎಲ್ಲಾ ದೇಶಗಳಲ್ಲಿಯೂ ಶಿಕ್ಷಣ, ಸಂಶೋಧನೆಗೆ ಮೊದಲ ಆದ್ಯತೆ ಎಂದು ಹೇಳಿಕೊಂಡೇ ದೇಶವನ್ನು ಮುಂದೆ ತಂದಿದ್ದಾರೆ. ಆದರೆ ನಮ್ಮ ದೇಶದಲ್ಲಿ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಂಶೋಧನೆಗೆ ಕಡೆಯ ಆದ್ಯತೆ ಎಂದುಕೊಂಡೆ ಬಂದಿದ್ದೇವೆ. ಆದ್ದರಿಂದ ಅವರನ್ನು (ರಾಜಕಾರಣಿಗಳನ್ನು) ತಿದ್ದಬೇಕೆಂದರೆ ಬಹಳ ಕಷ್ಟ. ನಮ್ಮ ಮಾತನ್ನು ಕೇಳುವ ಸ್ಥಿತಿಯಲ್ಲಿ ಯಾರೂ ಇಲ್ಲ. ಅವರದ್ದೇ ಆದ ರೀತಿಯಲ್ಲಿ ಕೆಲಸ ಮಾಡುತ್ತಿದ್ದು, ಸರ್ಕಾರಿ ವಿಶ್ವವಿದ್ಯಾನಿಲಯಗಳ ಕತೆ ಬಹಳ ಹೀನಾಯ ಸ್ಥಿತಿಗೆ ತಲುಪುತ್ತಿದೆ. ಆದ್ದರಿಂದ ಎಲ್ಲರೂ ಎಚ್ಚೆತ್ತುಕೊಳ್ಳಬೇಕು. ಭಾರತ ದೇಶದ ಹಿನ್ನೆಲೆ ಏನು? ಐಟಿಬಿಟಿ ಕಂಪನಿಗಳು ಹೇಗೆ ಬೆಳೆದು ಬಂದವು ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮಾಯಮಂತ್ರ ನಡೆಯಲ್ಲ: ಮಾಯಮಂತ್ರ ಮಾಡಿ, ಯಾವುದನ್ನೂ ತೆಗೆದುಕೊಳ್ಳಲು ಆಗುವುದಿಲ್ಲ. ಮಾಯಾಮಂತ್ರದಿಂದ ಓವರ್ ನೈಟ್ ಯಾರನ್ನು ತಿದ್ದಲೂ ಸಾಧ್ಯವಿಲ್ಲ. ನಮ್ಮ ದೇಶದ ಜನಸಂಖ್ಯೆಗಿಂತ ಚೀನಾ ದೇಶದ ಜನಸಂಖ್ಯೆ ಹೆಚ್ಚು. ಚೀನಿಯರು ಪ್ರಪಂಚದಲ್ಲಿಯೇ ಬಹಳ ಮುಂದಿದ್ದಾರೆ. ಇದಕ್ಕೆ ಕಾರಣ ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುತ್ತಿರುವುದು. ಅದನ್ನು ತಿಳಿದುಕೊಳ್ಳುವ ಸಾಮರ್ಥ್ಯ ನಮ್ಮ ಈ ರಾಜಕೀಯ ವ್ಯಕ್ತಿಗಳಲ್ಲಿ ಇಲ್ಲ. ಅದನ್ನು ತಿಳಿದುಕೊಂಡು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ, ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನುವವರಿಲ್ಲದೇ ಬಹಳ ಕಷ್ಟವಾಗುತ್ತಿದೆ ಎಂದರು.

ಖಾಸಗಿ ಶಿಕ್ಷಣ ಸಂಸ್ಥೆಗಳ ಕೊಡುಗೆ ದೊಡ್ಡದು: ನಮ್ಮಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿದ್ದು, ಎಲ್ಲವನ್ನೂ ಶ್ರದ್ಧೆಯಿಂದ ಮಾಡುತ್ತಿದ್ದಾರೆ. ದೇಶದಲ್ಲಿರುವ ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳು ಶಿಕ್ಷಣಕ್ಕೆ ನೀಡುತ್ತಿರುವ ಕೊಡುಗೆಯನ್ನು ಬೇರೆ ಯಾವ ಸಂಸ್ಥೆಗಳೂ ನೀಡುತ್ತಿಲ್ಲ. ಜೊತೆಗೆ ಜೆಎಸ್‌ಎಸ್, ಆದಿಚುಂಚನಗಿರಿ ಧರ್ಮಾಧಿಕಾರಿಗಳು ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವುದು ಸರ್ಕಾರ ನೀಡುವುದಕ್ಕಿಂತಲೂ ಹೆಚ್ಚಿನ ಮಟ್ಟದ್ದಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಏನಾದರೂ ನಿಂತು ಹೋಗಿದ್ದರೆ ನಾವು, ನಮ್ಮ ಮಕ್ಕಳು, ನಮ್ಮ ಮೊಮ್ಮಕ್ಕಳು ಸೇರಿ ಯಾರೂ ಕೂಡ ಓದಲು ಸಾಧ್ಯವಾಗುತ್ತಿರಲಿಲ್ಲ. ಮುಂದಿನ ದಿನಗಳಲ್ಲಿ ಬದಲಾವಣೆ ಆಗುತ್ತದೆ. ಆದರೆ ನಮ್ಮ ಕಾಲದಲ್ಲಿ ಬದಲಾವಣೆಯಾಗಲಿಲ್ಲವಲ್ಲ ಎಂಬ ಬೇಸರ ಎಂದರು.

ವಿವಿಯಿಂದ ಬೀಳ್ಕೊಡುಗೆ: ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಮಾತನಾಡಿ, ಸೇವೆಯಿಂದ ನಿವೃತ್ತರಾದವರನ್ನು ವಿಶ್ವವಿದ್ಯಾನಿಲಯದ ವತಿಯಿಂದಲೇ ಸನ್ಮಾನಿಸಿ, ಗೌರವದಿಂದ ಬೀಳ್ಕೊಡುಗೆ ನೀಡಬೇಕು. ಆದರೆ ಅದ್ಯಾವ ಕೆಲಸಗಳು ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ ಖಾಸಗಿ ಕಾಲೇಜುಗಳನ್ನಾದರೂ ನೋಡಿ ಅರಿತುಕೊಳ್ಳಬೇಕು. ಮುಂದಿನ ದಿನಗಳಲ್ಲಾದರೂ ಬದಲಾವಣೆಯಾಗಲಿ ಎಂದು ಆಶಿಸಿದರು. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್.ನಿರಂಜನ, ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಅಭಿನಂದನಾ ಸಮಿತಿಯ ಪ್ರೊ.ಜಿ.ವಿ.ವೆಂಕಟರಮಣ, ಪ್ರೊ.ಎನ್.ಎಸ್.ರಾಜು, ಶ್ರೀಮತಿ ಭಾರತಿ ಶ್ರೀಕಂಠಸ್ವಾಮಿ ಮತ್ತಿತರರಿದ್ದರು.

ಎಂತೆಂಥರೋ... ಕಾಪಿ ಹೊಡ್ದ್ ಬಂದೋರೆಲ್ಲಾ ಕುಲಪತಿಗಳಾಗ್ತಾವ್ರೆ..!

ಒಂದೊಂದು ಸಾರಿ ವ್ಯತ್ಯಾಸಗಳು ಆಗುತ್ತವೆ... ಇವತ್ತಿನ ಸ್ಥಿತಿಯಲ್ಲಿ ಅದರಲ್ಲೂ ನಮ್ಮ ದೇಶ... ನಮ್ಮ ಕರ್ನಾಟಕದಲ್ಲಿ ಕುಲಪತಿ ಆಯ್ಕೆ ಯಾವ ರೀತಿಯಲ್ಲಿ ನಡೆಯುತ್ತಾ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಎಂತೆಂಥರೋ ಇವತ್ತು ಕುಲಪತಿಗಳಾಗ್ತಾವ್ರೆ.. ಕಾಪಿ ಹೊಡ್‌ದೋರು.. ಕಾಪಿ ಹೊಡಿಸ್ದೋರು... ಅಂಥೋರೆ ಜಾಸ್ತಿ. ಶ್ರೀಕಂಠಸ್ವಾಮಿಯಂತಹವರು ಹೋದರೆ ನೀನು ಕಾಪಿ ಹೊಡ್ದಿಲ್ಲಾ.. ಕಾಪಿ ಹೊಡ್ಸಿಲ್ಲಾ ಅಂತ ನೂಕ್‌ಬಿಡ್ತಾರೆ... ಹಾಗೆಯೇ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಹೋದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಅಲ್ಲದೆ ಅಲ್ಲಿ ಕೆಲಸ ಮಾಡಲು ಪ್ರೇರಣೆ ನೀಡುವ ವಾತಾವರಣವೂ ಇಲ್ಲ. ವೈಜ್ಞಾನಿಕ ಕ್ಷೇತ್ರದಲ್ಲಿರುವವರು ಪ್ರಪಂಚದ ಯಾವ ಮೂಲೆಗೆ ಹೋದರೂ ಕರೆಯುತ್ತಾರಲ್ಲಾ ಅದು ಕುಲಪತಿ ಸ್ಥಾನಕ್ಕಿಂತಲೂ ಮಿಗಿಲಾದದ್ದು. ಪಡೆದಿರುವ ವಿದ್ವತ್ತಿಗೆ ಎಲ್ಲಿ ಗೌರವ ದೊರೆಯುತ್ತದೆಯೋ ಅಲ್ಲಿ ಇರುವುದು ಬಹಳ ಮುಖ್ಯ.


- ಪ್ರೊ.ಕೆ.ಎಸ್.ರಂಗಪ್ಪ, ವಿಶ್ರಾಂತ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

ಫೆಲೋಶಿಪ್‌ಗಳು ರಾಜಕೀಯ ಲಾಬಿ ನಡೆಸಿ ಪಡೆಯುವಂತಹದಲ್ಲ. ಅದಕ್ಕಾಗಿ ಕಠಿಣ ಪರಿಶ್ರಮ ಮತ್ತು ಸಂಶೋಧನೆ ಅಗತ್ಯವಾಗಿದೆ. ಅನೇಕ ಫೆಲೋಶಿಪ್‌ಗಳನ್ನು ಪಡೆದು ನಿವೃತ್ತರಾಗಿರುವ ಪ್ರಾಧ್ಯಾಪಕರನ್ನು ವಿಶ್ವವಿದ್ಯಾನಿಲಯಗಳು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿಕೊಳ್ಳಬೇಕು. ನಿವೃತ್ತಿ ನಂತರ ಅವಕಾಶಗಳು ದೊರೆಯುವುದಿಲ್ಲ ಎಂದು ಬೇಸರಗೊಳ್ಳುವ ಅಗತ್ಯವಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳು ಸಾಕಷ್ಟಿದ್ದು, ಪರಿಣಿತರಿಗೆ ಹೆಚ್ಚಿನ ಅವಕಾಶ ನೀಡುತ್ತಿವೆ ಎಂದರಲ್ಲದೆ, ಹೆಚ್ಚಿನ ಸಂಶೋಧನೆಗಳು ಸಾಮಾಜಿಕ ಕ್ಷೇತ್ರದಲ್ಲಾಗಬೇಕು. ಪರಿಸರದ ಮೇಲೆ ಉಂಟಾಗುತ್ತಿರುವ ಹಾನಿಯನ್ನು ಸಂಶೋಧನೆಗಳ ಮೂಲಕ ತಿಳಿದು, ಅದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆ ನಿರಂತರವಾಗಿರಬೇಕು.

- ಪ್ರೊ.ಎಸ್.ಎನ್.ಹೆಗ್ಡೆ, ವಿಶ್ರಾಂತ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಮ.ವಿ.ರಾಮಪ್ರಸಾದ್ ಕಚೇರಿ ಉದ್ಘಾಟನೆ

ಶಾಸಕ ಶ್ರೀವತ್ಸರಿಂದ ಅಭಿನಂದನೆ



ಮೈಸೂರು, ಆ.7(ಎಂಕೆ)– ಮೈಸೂರು ನಗರಪಾಲಿಕೆ ಆಡಳಿತ ಪಕ್ಷದ ನಾಯಕರಾಗಿ ಆಯ್ಕೆಯಾದ ಮ.ವಿ.ರಾಮಪ್ರಸಾದ ಅವರ ಕಚೇರಿಯನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿದ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಸನ್ಮಾನಿಸಿ ಅಭಿನಂದಿಸಿದರು.

ಇದೇ ವೇಳೆ ಮೇಯರ್ ಶಿವಕುಮಾರ್ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಪಾಲಿಕೆಯ ನೂತನ ಆಡಳಿತ ಪಕ್ಷದ ನಾಯಕರನ್ನು ಅಭಿನಂದಿಸಿದರಲ್ಲದೆ ಸಿಹಿ ವಿತರಣೆ ಮಾಡಿದರು. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮ.ವಿ.ರಾಮಪ್ರಸಾದ, ನಗರಪಾಲಿಕೆಯ ವಿರೋಧ ಪಕ್ಷ ನಾಯಕನಾಗಿ, ವರ್ಕ್ಸ್ ಕಮಿಟಿ ಅಧ್ಯಕ್ಷನಾಗಿ ಹಾಗೂ ಇನ್ನಿತರೆ ಸಮಿತಿಗಳ ಸದಸ್ಯನಾಗಿ ಕಾರ್ಯನಿರ್ವಹಿಸಿ ಸಾಕಷ್ಟು ಅನುಭವ ಪಡೆದಿದ್ದೇನೆ. ಈಗ ಆಡಳಿತ ಪಕ್ಷದ ನಾಯಕನಾಗಿ ಆಯ್ಕೆಯಾಗಿರುವುದು ಬಹಳ ಸಂತೋಷ ತಂದಿದೆ ಎಂದರು.

ಮೇಯರ್ ಜೊತೆಗೂಡಿ ಪಾಲಿಕೆಯ ಆಡಳಿತವನ್ನು ಮತ್ತಷ್ಟು ಚುರುಕುಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಜನಸಾಮಾನ್ಯರಿಗೆ ಪಾಲಿಕೆಯಿಂದ ದೊರೆಯುವ ಸೌಲಭ್ಯಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತೇನೆ. ಸ್ವಚ್ಛತೆಯ ಬಗ್ಗೆ ಇನ್ನಷ್ಟು ಅರಿವು ಮೂಡಿಸುವ ಅಗತ್ಯವಿದೆ. ಅಲ್ಲದೆ ಪ್ರತಿನಿತ್ಯ ಪಾಲಿಕೆಯ ಕಚೇರಿಯಲ್ಲಿ ಸಂಜೆ 4 ರಿಂದ 6 ಗಂಟೆಯವರೆಗೆ ಸಾರ್ವಜನಿಕರು ನನ್ನನ್ನು ಭೇಟಿ ಮಾಡಿ, ತಮ್ಮ ಕುಂದು–ಕೊರತೆಗಳನ್ನು ತಿಳಿಸಬಹುದು ಎಂದು ಹೇಳಿದರಲ್ಲದೆ ಆಡಳಿತ ಪಕ್ಷದ ನಾಯಕ ಸ್ಥಾನ ದೊರೆತಿರುವುದು ಮೇಯರ್ ಸ್ಥಾನ ಸಿಕ್ಕಷ್ಟೇ ಖುಷಿಯಾಗಿದೆ ಎಂದರು.

ಉಪ ಮೇಯರ್ ಡಾ.ರೂಪ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ರವೀಂದ್ರ ಸುಬ್ಬಯ್ಯ, ರಮೇಶ್, ಸಾತ್ವಿಕ್ ಸಂದೇಶ್ ಸ್ವಾಮಿ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಬಿಜೆಪಿ ಮುಖಂಡರಾದ ಜೋಗಿ ಮಂಜು, ಅಜಯ್‌ಶಾಸ್ತ್ರಿ, ವಿಕ್ರಂ ಅಯ್ಯಂಗಾರ್ ಮತ್ತಿತರರು ಉಪಸ್ಥಿತರಿದ್ದರು.

ಸಂಚಾರ ನಿಯಮಗಳ ಕುರಿತು ಜಾಗೃತಿ



ಮೈಸೂರು, ಆ.7(ಎಂಕೆ)– ದೇವರಾಜ ಸಂಚಾರ ಪೊಲೀಸ್ ಠಾಣೆ ವತಿಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ದ್ವಿಚಕ್ರ ವಾಹನ ಸವಾರರು ಹಾಗೂ ನಗರಪಾಲಿಕೆ ಟ್ರಾಕ್ಟರ್ ಚಾಲಕರಿಗೆ ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಠಾಣೆ ಆವರಣದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ದ್ವಿಚಕ್ರ ವಾಹನ ಸವಾರರಿಗೆ ಅರಿವು ಮೂಡಿಸಿದರೆ, ಸಬರ್ಬನ್ ಬಸ್ ನಿಲ್ದಾಣದ ಬಳಿ ಟ್ರಾಕ್ಟರ್ ಚಾಲಕರಿಗೆ ಸಂಚಾರ ನಿಯಮಗಳ ಮಾಹಿತಿಯುಳ್ಳ ಕರಪತ್ರಗಳನ್ನು ನೀಡಿ, ಜಾಗೃತಿ ಮೂಡಿಸಲಾಯಿತು.

ಈ ವೇಳೆ ದೇವರಾಜ ಸಂಚಾರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮುನಿಯಪ್ಪ ಮಾತನಾಡಿ, ಶಾಲಾ–ಕಾಲೇಜು ವಿದ್ಯಾರ್ಥಿಗಳು 18 ವರ್ಷ ವಯಸ್ಸಾಗುವವರೆಗೆ ಬೈಕ್, ಸ್ಕೂಟರ್, ಕಾರು ಇನ್ನಿತರೆ ಯಾವುದೇ ಬಗೆಯ ವಾಹನಗಳನ್ನು ಚಲಾಯಿಸುವಂತಿಲ್ಲ ಮುಖ್ಯವಾಗಿ ವ್ಹೀಲಿಂಗ್ ಮಾಡಬಾರದು. ವ್ಹೀಲಿಂಗ್‌ನಿಂದಾಗಿ ಸಾಕಷ್ಟು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಎಚ್ಚರಿಸಿದರು. ಟ್ರಾಕ್ಟರ್ ಚಾಲಕರು ಕಡ್ಡಾಯವಾಗಿ ಆರ್.ಸಿ ಕಾರ್ಡ್ ಹೊಂದಿರಬೇಕು. ಇನ್ಶೂರೆನ್ಸ್ (ವಿಮೆ) ಚಾಲ್ತಿಯಲ್ಲಿರಬೇಕು. ಸೈಡ್ ಮಿರರ್ ಹೊಂದಿರಬೇಕು. ಐಎನ್‌ಡಿ ನಂಬರ್ ಪ್ಲೇಟ್ ಹಾಕಬೇಕು ಎಂದು ತಿಳಿಸಿದರಲ್ಲದೆ ರೇಡಿಯಂ ಸ್ಟಿಕ್ಕರ್ ಅಳವಡಿಸಿಕೊಂಡು ವಾಹನ ಚಾಲನೆ ಮಾಡುವುದು ಸೇರಿದಂತೆ ಇನ್ನಿತರೆ ಸಂಚಾರ ನಿಯಮಗಳ ಬಗ್ಗೆ ಮಾಹಿತಿ ನೀಡಿದರು. ಸಬ್‌ಇನ್ಸ್‌ಪೆಕ್ಟರ್ ಮಲ್ಲವ್ವ ಭಂಡಿ, ಸಿಬ್ಬಂದಿ ಉಪಸ್ಥಿತರಿದ್ದರು.

ತಪಾಸಣಾ ಶಿಬಿರ

ಮೈಸೂರು, ಆ. 7–ಎನ್‌ಜೆಎಸ್ ಚಾರಿಟೇಬಲ್ ಟ್ರಸ್ಟ್ ಮತ್ತು ಮೈಸೂರು ವೀರ ಸಜ್ಜನ ಸಂಘದ ಆಶ್ರಯದಲ್ಲಿ ಆ.8ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ. 9916155453, 9448738657 ಸಂಪರ್ಕಿಸಬಹುದು.

ಜಂಬೂಸವಾರಿಗೆ ಕಾತರರಾಗಿರುವ 'ಸಕ್ರೆಬೈಲು' ಜಂಬೋಗಳು

● ದಸರಾಗಾಗಿ ಸಕ್ರೆಬೈಲು ಕ್ಯಾಂಪ್‌ನಲ್ಲಿ ಆನೆಗಳ ಪರಿಶೀಲನೆ ● ಸಾಗರ, ಹಾಲೇ, ಬಹದ್ದೂರ್, ನೇತ್ರ ಆರೋಗ್ಯ ಪರಿಶೀಲನೆ ● ಹಲವು ವರ್ಷಗಳ ನಿರೀಕ್ಷೆಗೆ ಫಲ ದೊರೆಯುವುದೇ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.7 – ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ಹಲವು ವರ್ಷಗಳಿಂದ ತಪಸ್ಸು ಮಾಡುತ್ತಿರುವ ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು ಆನೆ ಶಿಬಿರದ ಮಾವುತ ಹಾಗೂ ಕಾವಾಡಿಗಳ ಕನಸು ಈ ಬಾರಿಯಾದರೂ ಈಡೇರಲಿದೆಯೇ ಎಂಬ ಕಾತರಕ್ಕೆ ತೆರೆ ಬೀಳುವ ನಿರೀಕ್ಷೆ ಇದೆ.



ಈ ವಿಷಯದ ಕುರಿತು ಮೈಸೂರು ವನ್ಯಜೀವಿ ವಿಭಾಗದ ಅರಣ್ಯಾಧಿಕಾರಿಗಳ ತಂಡ ಸಕಾರಾತ್ಮಕವಾಗಿ ಸ್ಪಂದಿಸುವ ಸಾಧ್ಯತೆ ಇದೆ.

ದಸರಾ ಮಹೋತ್ಸವದ ಇತಿಹಾಸದಲ್ಲಿ ಮೈಸೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಗಜರಾಜರು, ಮಾವುತ, ಕಾವಾಡಿಗಳು ತಮ್ಮದೇ ಛಾಪು ಅಚ್ಚಳಿಯದಂತೆ ಮೂಡಿಸಿದ್ದು, ಪ್ರತಿ ಬಾರಿಯೂ ದಸರಾ ಮಹೋತ್ಸವದ ಯಶಸ್ವಿಗೆ ಸಾಥ್ ನೀಡುತ್ತಾ ಬಂದಿದ್ದಾರೆ.

ನಾಡಹಬ್ಬ ಎಂದು ಕರೆಸಿಕೊಳ್ಳುವ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ನಮಗೂ ಕೊಡುವಂತೆ ಸಕ್ರೆಬೈಲು ಕ್ಯಾಂಪ್‌ನ ಮಾವುತ, ಕಾವಾಡಿಗಳು ಹಲವು ವರ್ಷದಿಂದ ಬೇಡಿಕೆ ಸಲ್ಲಿಸುತ್ತಲೇ ಇದ್ದಾರೆ. ಆದರೂ, ಆಸೆ ಇದುವರೆಗೂ ಈಡೇರಿರಲಿಲ್ಲ. ಆದರೆ, ಈ ಬಾರಿ ಎರಡು ಆನೆಯಾದರೂ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಬಹುದು ಎಂಬ ನಿರೀಕ್ಷೆ ಹುಟ್ಟಿಸಿದೆ.

ಸಕ್ರೆಬೈಲಿನಲ್ಲಿ ಪರಿಶೀಲನೆ: ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್ ಕುಮಾರ್ ಸೂಚನೆ ಮೇರೆಗೆ ಆರ್‌ಎಫ್‌ಒ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕ ಅಕ್ರಮ್ ಸೋಮವಾರ ಶಿವಮೊಗ್ಗದ ಸಕ್ರೆಬೈಲು ಆನೆ ಕ್ಯಾಂಪ್‌ಗೆ ತೆರಳಿ ಆನೆಗಳನ್ನು ಪರಿಶೀಲಿಸಿದೆ. ಕ್ಯಾಂಪ್‌ನಲ್ಲಿನ ಸಾಗರ (38), ಬಹದ್ದೂರ್ (37), ನೇತ್ರ (25) ಹಾಗೂ ಹಾಲೇ (15) ಆನೆಗಳನ್ನು ಪರಿಶೀಲಿಸಲಾಗಿದೆ. ಇವುಗಳಲ್ಲಿ ಸಾಗರ ಹಾಗೂ ನೇತ್ರ ಆನೆ ಈ ಬಾರಿ ದಸರಾ ಗಜಪಡೆಯಲ್ಲಿ ಸ್ಥಾನ ಪಡೆಯಬಹುದೆಂಬ ನಿರೀಕ್ಷೆಯಿದೆ. ಒಂದು ವೇಳೆ ಸಕ್ರೆಬೈಲು ಕ್ಯಾಂಪ್‌ನ ಆನೆಗಳು ಆಯ್ಕೆಯಾದರೆ ದಸರಾ ಮಹೋತ್ಸವದಲ್ಲಿ ಮೊದಲ ಬಾರಿಗೆ ಪಾಲ್ಗೊಳ್ಳುವ ದಾಖಲೆಯನ್ನು ಸಕ್ರೆಬೈಲು ಕ್ಯಾಂಪ್ ಬರೆಯಲಿದೆ.

ಹೆಣ್ಣಾನೆಗಳಿಗಾಗಿ ಶೋಧ: ಜಂಬೂಸವಾರಿ ಮೆರವಣಿಗೆಯಲ್ಲಿ ಶಾಂತಿ ಸ್ವಭಾವದಿಂದ ಸಾಗುವ ಆನೆಗಳಿಗಾಗಿ ಅರಣ್ಯ ಇಲಾಖೆ ಶೋಧ ನಡೆಸುತ್ತಿದೆ. ಒಂದೆಡೆ ಭವಿಷ್ಯದಲ್ಲಿ ಅಂಬಾರಿ ಹೊರುವ ಆನೆಗಳ ತಯಾರಿಯ ಸವಾಲು ಇದ್ದರೆ, ಮತ್ತೊಂದೆಡೆ ಅಂಬಾರಿ ಆನೆಯೊಂದಿಗೆ ಕುಮ್ಕಿ ಆನೆಯಾಗಿ ಸಾಗುವ ಹೆಣ್ಣಾನೆಗಳ ಅವಶ್ಯಕತೆ ಇದೆ. ತಿತಿಮತಿ, ಆನೆಕಾಡು, ಭೀಮನಕಟ್ಟೆ, ದುಬಾರೆ, ರಾಂಪುರ ಕ್ಯಾಂಪ್‌ನಲ್ಲಿ ಸಾಕಷ್ಟು ಹೊಸ ಗಂಡಾನೆಗಳಿದ್ದು, ಅವುಗಳನ್ನು ಪಳಗಿಸಿದರೆ ಗಂಡಾನೆಗಳ ಕೊರತೆ ನೀಗಲಿದೆ. ಹೆಣ್ಣಾನೆಗಳು ನಮ್ಮ ಭಾಗದ ಕ್ಯಾಂಪ್‌ನಲ್ಲಿದ್ದರೂ, ಹಲವು ಆನೆಗಳು ಚಿಕ್ಕ ಮರಿಗಳನ್ನು ಹೊಂದಿದ್ದರೆ, ಕೆಲವು ಆನೆಗಳು ಗರ್ಭಿಣಿಯಾಗಿವೆ. ಇನ್ನು ಕೆಲವು 60 ವರ್ಷಕ್ಕಿಂತ ಮೇಲ್ಪಟ್ಟ ಆನೆಗಳಾಗಿವೆ. ಇನ್ನು ಕೆಲವು ಕ್ಯಾಂಪ್‌ನಲ್ಲಿ ಸರ್ಕಸ್ ಹಾಗೂ ವಿವಿಧ ಸಂಘ–ಸಂಸ್ಥೆಗಳಿಂದ ರಕ್ಷಿಸಲ್ಪಟ್ಟ ಆನೆಗಳಿದ್ದರೂ, ಅವುಗಳನ್ನು ದಸರಾ ಮಹೋತ್ಸವದಲ್ಲಿ ಬಳಸಿಕೊಳ್ಳಲು ಸಾಧ್ಯವಿಲ್ಲದ ಕಾರಣ, ಸಕ್ರೆಬೈಲು ಶಿಬಿರದ ಆನೆಗಳತ್ತ ದೃಷ್ಟಿ ಹಾಯಿಸಲಾಗಿದೆ.

ಪ್ರಮುಖವಾಗಿ ಸಕ್ರೆಬೈಲು ಕ್ಯಾಂಪ್‌ನಲ್ಲಿ ಹೆಣ್ಣಾನೆ ಆಯ್ಕೆ ಮಾಡಬೇಕಾಗಿತ್ತು. ಅಲ್ಲಿನ ಭಾಗೀರಥಿ ಆನೆ ಗರ್ಭಿಣಿಯಾಗಿರುವುದರಿಂದ ಎಲ್ಲರ ದೃಷ್ಟಿ ನೇತ್ರ ಆನೆಯತ್ತ ಹರಿದಿದೆ. ನಾಲ್ಕರಲ್ಲಿ ಯಾವ ಆನೆ ಆಯ್ಕೆಯಾಗುತ್ತದೆ ಎಂಬ ಕುತೂಹಲ ಸಕ್ರೆಬೈಲು ಮಾತ್ರವಲ್ಲದೆ, ಈ ಭಾಗದ ಆನೆ ಕ್ಯಾಂಪ್‌ಗಳ ಮಾವುತ ಹಾಗೂ ಕಾವಾಡಿಗಳಲ್ಲೂ ಮೂಡಿದೆ.

ವಾರದೊಳಗೆ ಆಯ್ಕೆ ಪಟ್ಟಿ

ದಸರಾ ಗಜಪಡೆ ಆಯ್ಕೆಗಾಗಿ ತಿತಿಮತಿ, ಭೀಮನಕಟ್ಟೆ, ಆನೆಕಾಡು, ದುಬಾರೆ ಹಾಗೂ ರಾಂಪುರ ಕ್ಯಾಂಪ್‌ಗೆ ತೆರಳಿ ಪರಿಶೀಲಿಸಲಾಗಿದೆ. ಶಿವಮೊಗ್ಗದ ಸಕ್ರೆಬೈಲು ಕ್ಯಾಂಪ್‌ಗೆ ನಮ್ಮ ತಂಡ ತೆರಳಿ ನಾಲ್ಕು ಆನೆಗಳನ್ನು ಪರಿಶೀಲಿಸಲಾಗಿದೆ. ಮುಂದಿನ ಒಂದು ವಾರದೊಳಗೆ ಗಜಪಡೆಯ 14 ಆನೆಗಳ ಪಟ್ಟಿ ತಯಾರಿಸಿ, ದಸರಾ ಸಮಿತಿಗೆ ನೀಡಲಾಗುತ್ತದೆ.

- ಸೌರಭ್ ಕುಮಾರ್, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಕೊಡಗಿನ 207 ಕಡೆ ಪರಿಣಾಮಕಾರಿ

ಮಿಷನ್ ಇಂದ್ರಧನುಷ್ 5.0 ಲಸಿಕಾಕರಣ

ಮಡಿಕೇರಿ, ಆ.7- ದಡಾರ, ರುಬೆಲ್ಲಾ ಸೇರಿದಂತೆ ಹಲವು ಮಾರಕ ರೋಗಗಳಿಂದ ಮಕ್ಕಳನ್ನು ರಕ್ಷಿಸಲು ಪರಿಣಾಮಕಾರಿ ಮಿಷನ್ ಇಂದ್ರಧನುಷ್ 5.0 ಲಸಿಕಾಕರಣ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಲಸಿಕೆಯನ್ನು ಕಾಲ ಕಾಲಕ್ಕೆ ಪಡೆಯದ ಮತ್ತು ಬಿಟ್ಟುಹೋದ ಹಾಗೂ ಹೊರಗುಳಿದ 5 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರು ಈ ಅವಕಾಶವನ್ನು ಬಳಸಿಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ತಿಳಿಸಿದ್ದಾರೆ.

ನಗರದ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಮಕ್ಕಳ ಲಸಿಕಾ ವಿಭಾಗದಲ್ಲಿ ಇಂದ್ರಧನುಷ್ 5.0 ಲಸಿಕಾ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು. ಕೊಡಗು ಜಿಲ್ಲೆಯ 207 ಕಡೆ ಇಂದ್ರಧನುಷ್ ಲಸಿಕಾಕರಣ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಮಕ್ಕಳಿಗೆ ಬರುವ ದಡಾರ, ರುಬೆಲ್ಲಾ ಸೇರಿದಂತೆ ಹಲವು ರೋಗಗಳನ್ನು ತಡೆಯಲು ಇಂದ್ರಧನುಷ್ 5.0 ಸಹಕಾರಿಯಾಗಿದೆ ಎಂದರು.

ಇಂದ್ರಧನುಷ್ 5.0 ಅಭಿಯಾನದಲ್ಲಿ ಲಸಿಕೆ ಬಿಟ್ಟುಹೋಗಿರುವ, ವಿಶೇಷವಾಗಿ ದಡಾರ-ರುಬೆಲ್ಲಾ ಲಸಿಕಾಕರಣ, ಪಿಸಿವಿ ಲಸಿಕಾಕರಣ ಮತ್ತು ಇತ್ತೀಚೆಗೆ 3 ನೇ ಡೋಸ್ ಆಗಿ ಸೇರ್ಪಡೆಗೊಳಿಸಲಾಗಿರುವ ಎಫ್ಐಪಿವಿ ಲಸಿಕಾಕರಣದ ಪ್ರಾತಿಯನ್ನು ಹೆಚ್ಚಿಸುವ ಸಲುವಾಗಿ ಪರಿಣಾಮಕಾರಿ ಮಿಷನ್ ಇಂದ್ರಧನುಷ್ ಅಭಿಯಾನ 5.0 ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹೇಳಿದರು.

ಆ.7 ರಿಂದ 12 ರವರೆಗೆ ಮೊದಲ ಸುತ್ತು, ಸೆಪ್ಟೆಂಬರ್ 11 ರಿಂದ 16 ರವರೆಗೆ 2 ನೇ ಸುತ್ತು ಮತ್ತು ಅಕ್ಟೋಬರ್ 9 ರಿಂದ 14 ರವರೆಗೆ 3 ನೇ ಸುತ್ತಿನಲ್ಲಿ ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳು, ಉಪ ಕೇಂದ್ರಗಳು, ಅಂಗನವಾಡಿ ಕೇಂದ್ರಗಳು ಮತ್ತು ಶಾಲೆಗಳಲ್ಲಿ ಪರಿಣಾಮಕಾರಿ ಇಂದ್ರಧನುಷ್ 5.0 ಲಸಿಕಾಕರಣ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರು ತಿಳಿಸಿದರು.



ಆರ್‌ಸಿಎಚ್ ಅಧಿಕಾರಿ ಡಾ.ಗೋಪಿನಾಥ್ ಅವರು ಕೊಡಗು ಜಿಲ್ಲೆಯಲ್ಲಿ ಇಂದ್ರಧನುಷ್ ಲಸಿಕಾಕರಣ ಸಂಬಂಧಿಸಿದಂತೆ 2 ವರ್ಷದೊಳಗಿನ 1,169 ಮಕ್ಕಳನ್ನು ಗುರುತಿಸಲಾಗಿದೆ. 2 ರಿಂದ 5 ವರ್ಷದೊಳಗಿನ 23 ಮಕ್ಕಳನ್ನು ಗುರುತಿಸಲಾಗಿದೆ. ಹಾಗೆಯೇ ಗರ್ಭಿಣಿಯರಲ್ಲಿ 278 ಮಂದಿಯನ್ನು ಗುರುತಿಸಲಾಗಿದ್ದು, ಲಸಿಕೆಯನ್ನು ನೀಡಿದ ಲಸಿಕಾಕರಣ ವಿವರವನ್ನು ಯು-ವಿನ್ ಪೋರ್ಟಲ್‌ನಲ್ಲಿ ದಾಖಲಿಸಿ ಇ-ಲಸಿಕಾಕರಣದ ಪ್ರಮಾಣಪತ್ರ ನೀಡಲಾಗುತ್ತದೆ ಎಂದರು.

ಇಂದ್ರಧನುಷ್ ಸರ್ಕಾರದ ಅತೀ ಮುಖ್ಯ ಕಾರ್ಯಕ್ರಮವಾಗಿದ್ದು, 7 ಮಾರಕ ರೋಗಗಳನ್ನು ತಡೆಯಲು ಈ ಲಸಿಕಾಕರಣ ಸಹಕಾರಿಯಾಗಲಿದೆ ಎಂದು ಡಾ.ಗೋಪಿನಾಥ್ ಅವರು ವಿವರಿಸಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಕಳ್ಳಿಚಂಡ ಕಾರ್ಯಪ್ಪ ಮಾತನಾಡಿ, ಇಂದ್ರಧನುಷ್ ಅತೀ ಮುಖ್ಯವಾದ ಲಸಿಕಾ ಕಾರ್ಯಕ್ರಮವಾಗಿದೆ. 5 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರು ಇಂದ್ರಧನುಷ್ ಲಸಿಕೆ ಪಡೆಯಬೇಕು ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ನಂಜುಂಡಯ್ಯ ಮಾತನಾಡಿ, ಸಮುದಾಯದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಇಂದ್ರಧನುಷ್ ಲಸಿಕಾಕರಣ ಹಮ್ಮಿಕೊಳ್ಳಲಾಗಿದೆ. ಲಸಿಕಾಕರಣ ಕಾರ್ಯಕ್ರಮ ಯಶಸ್ಸಿಗೆ ಕೈಜೋಡಿಸುವಂತೆ ಕೋರಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಪುರುಷೋತ್ತಮ ಮಾತನಾಡಿ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ ಮಕ್ಕಳ ಬೆಳವಣಿಗೆಗೆ ಚುಚ್ಚುಮದ್ದು ಅತ್ಯವಶ್ಯಕ ಎಂದರು. ಮಕ್ಕಳ ಆರೋಗ್ಯ ಕಾಪಾಡುವುದು ಅತೀ ಮುಖ್ಯವಾಗಿದೆ. ಪೋಲಿಯೋ, ಧನುರ್ವಾಯು, ದಡಾರ, ರುಬೆಲ್ಲಾ ಹೀಗೆ ಹಲವು ರೋಗವನ್ನು ತಡೆಯಲು ಚುಚ್ಚುಮದ್ದು ಅವಶ್ಯಕ. ಮಕ್ಕಳ ಬೆಳವಣಿಗೆಗೆ ಲಸಿಕಾಕರಣ ಅತೀ ಮುಖ್ಯ ಎಂದರು.

ಸರ್ಕಾರಿ ಆಸ್ಪತ್ರೆಯಲ್ಲಿ ಇರುವ ತಾಯಿ ಕಾರ್ಡ್ ಪ್ರತಿಯೊಬ್ಬರು ಓದಬೇಕು. ಚುಚ್ಚುಮದ್ದು ನೀಡಿದ ನಂತರ ನಿಗಾವಹಿಸಬೇಕು. ಕಾಲ ಕಾಲಕ್ಕೆ ಮಕ್ಕಳಿಗೆ ಲಸಿಕೆ ನೀಡುವ ಬಗ್ಗೆ ದಿನಚರಿಯಲ್ಲಿ ಬರೆದಿಟ್ಟುಕೊಳ್ಳಬೇಕು ಎಂದು ಡಾ.ಪುರುಷೋತ್ತಮ ವಿವರಿಸಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ರೂಪೇಶ್ ಗೋಪಾಲ್, ಸ್ಥಾನಿಕ ವೈದ್ಯಾಧಿಕಾರಿ ಡಾ.ಸತೀಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಕ್ರಮ ಅಧಿಕಾರಿ ಡಾ.ಎಸ್.ಆನಂದ್, ಡಾ.ಸೋಮಶೇಖರ್, ತಾಲೂಕು ಆರೋಗ್ಯಾಧಿಕಾರಿ ಡಾ.ಎಂ.ಯು.ಚೇತನ್, ಮಕ್ಕಳ ವಿಭಾಗದ ತಜ್ಞ ವೈದ್ಯ ಡಾ.ಕುಶ್ವಂತ್ ಕೋಳಿಬೈಲು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕಿ ಸೌಮ್ಯ ಪೊನ್ನಪ್ಪ ಇತರರು ಇದ್ದರು. 5 ವರ್ಷದೊಳಗಿನ ಮಕ್ಕಳಿಗೆ ಇದೇ ಸಂದರ್ಭದಲ್ಲಿ ಇಂದ್ರಧನುಷ್ 5.0 ಲಸಿಕೆ ನೀಡಲಾಯಿತು.

ಕಾಫಿ ತೋಟದಲ್ಲಿ ಗಾಂಜಾ ಬೆಳೆದಿದ್ದ ರೈತನ ಬಂಧನ



ಸಿದ್ದಾಪುರ, ಆ.7- ಕಾಫಿ ತೋಟದಲ್ಲಿ ಬೆಳೆದಿದ್ದ 30 ಕೆಜಿ ಗಾಂಜಾ ವಶಪಡಿಸಿಕೊಂಡಿರುವ ಸಿದ್ದಾಪುರ ಠಾಣೆ ಪೊಲೀಸರು ರೈತನನ್ನು ಬಂಧಿಸಿದ್ದಾರೆ.



ಗುಡ್ಡೂರಿನ ಕರಣ್ ಬಂಧಿತನಾಗಿದ್ದು, ಈತ ವಿರಾಜಪೇಟೆ ತಾಲೂಕಿನ ಚೆನ್ನಯ್ಯನಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆನ್ನಂಗಿ ಗುಡ್ಡೂರಿನಲ್ಲಿ ಮನೆಯ ಸಮೀಪದ ಕಾಫಿ ತೋಟದಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಸಿದ್ದ.

ಖಚಿತ ಮಾಹಿತಿ ಮೇರೆಗೆ ಎಸ್ಪಿ ರಾಮರಾಜನ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಜಗದೀಶ್, ಸರ್ಕಲ್ ಇನ್ಸ್‌ಪೆಕ್ಟರ್ ಅನೂಪ ಮಾದಪ್ಪ ನೇತೃತ್ವದಲ್ಲಿ ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಹಾಗೂ ಸಿಬ್ಬಂದಿಗಳು ದಿಢೀರ್ ಕಾರ್ಯಾಚರಣೆ ನಡೆಸಿ, ಪರಿಶೀಲಿಸಿದ ವೇಳೆ ಕಾಫಿ ತೋಟದಲ್ಲಿ ಬೆಳೆದು ನಿಂತಿದ್ದ ಅಂದಾಜು 31,900 ಗ್ರಾಂ ತೂಕದ ಅಂದಾಜು 2.50 ಲಕ್ಷ ಮೌಲ್ಯದ 17 ಗಾಂಜಾ ಗಿಡಗಳನ್ನು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ರಾಘವೇಂದ್ರ, ಉಪ ವಲಯ ಅರಣ್ಯಾಧಿಕಾರಿಗಳಾದ ಶ್ರೀನಿವಾಸ್, ಚೆನ್ನವೀರೇಶ್ ಸೇರಿದಂತೆ ಅಧಿಕಾರಿಗಳ ಸಮ್ಮುಖದಲ್ಲಿ ಆರೋಪಿಯನ್ನು ಬಂಧಿಸಿ, ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಳ್ಳಲಾಯಿತು.

ಕಾರ್ಯಾಚರಣೆಯಲ್ಲಿ ಸಿದ್ದಾಪುರ ಪೊಲೀಸ್ ಠಾಣೆಯ ಎಎಸ್ಐ ತಮ್ಮಯ್ಯ, ಸಿಬ್ಬಂದಿಗಳಾದ ಲಕ್ಷ್ಮಿ ಕ್ರಾಂತ್, ಬಸವರಾಜ್, ಸಂತೋಷ್, ಉಮೇಶ್, ಗುರುಪ್ರಸಾದ್, ಭರತ್, ಚಾಲಕ ಈರಪ್ಪ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸಂಚಾರ ನಿಯಮ ಉಲ್ಲಂಘನೆ ಶೇ.50ರ ರಿಯಾಯಿತಿಯಲ್ಲಿ ದಂಡ ಪಾವತಿಗೆ ಅವಕಾಶ

ಮಡಿಕೇರಿ, ಆ.7- ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತಾಲಯದ ಮನವಿಯಂತೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ, ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ಅನ್ವಯವಾಗುವಂತೆ ಸಂಚಾರಿ ಇ-ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ಈ ರಿಯಾಯಿತಿಯು ಸೆ.9 ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಪ್ರಕಟಣೆ ತಿಳಿಸಿದೆ.

ಬಿ.ಎಂ.ಸಾಗರ್ ಗುಡ್ಡೆಹೊಸೂರು ಡೇರಿ ಅಧ್ಯಕ್ಷ



ಗುಡ್ಡೆಹೊಸೂರು, ಆ.7- ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಎಂ.ಸಾಗರ್ ಮತ್ತು ಉಪಾಧ್ಯಕ್ಷರಾಗಿ ಎನ್.ಪಿ.ಸುಲೋಚನ ಅವರು ಅವಿರೋಧವಾಗಿ ಆಯ್ಕೆಯಾದರು.

ಜುಲೈ 30 ರಂದು 13 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯಬೇಕಿತ್ತು. 13 ಮಂದಿ ಮಾತ್ರ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಎಲ್ಲಾ ಸ್ಥಾನ ಅವಿರೋಧವಾಗಿ ಆಯ್ಕೆಯಾಯಿತು. ಇಂದು ಅಧ್ಯಕ್ಷರ ಸ್ಥಾನಕ್ಕೆ ಬಿ.ಎನ್.ಕಾಶಿ ಮತ್ತು ಬಿ.ಎಂ.ಸಾಗರ್ ನಾಮಪತ್ರ ಸಲ್ಲಿಸಿದ್ದರು. ಕೊನೆಕ್ಷಣದಲ್ಲಿ ಕಾಶಿ ನಾಮಪತ್ರ ವಾಪಸ್ಸು ಪಡೆದರು.

ಉಪಾಧ್ಯಕ್ಷರ ಸ್ಥಾನಕ್ಕೆ ಸುಲೋಚನ ಎನ್.ಪಿ. ಅವರು ಒಬ್ಬರೇ ನಾಮಪತ್ರ ನೀಡಿದ್ದರು. ಅವರು ಅವಿರೋಧ ಆಯ್ಕೆಯಾದರು. ಚುನಾವಣಾ ಅಧಿಕಾರಿಯಾಗಿ ಗುಡ್ಡೆಹೊಸೂರು ಗ್ರಾಮ ಪಂಚಾಯ್ತಿ ಅಧಿಕಾರಿ ಶ್ಯಾಂ ತಮ್ಮಯ್ಯ ಕಾರ್ಯ ನಿರ್ವಹಿಸಿದ್ದರು. ಈ ಸಂದರ್ಭ ಹೊಸದಾಗಿ ಆಯ್ಕೆಯಾದ ನಿರ್ದೇಶಕರು ಪಿ.ಬಿ.ಯತೀಶ್, ಮೋಹನ್‌ಕುಮಾರ್ ಬಿ.ವಿ, ಬಿ.ಎಸ್. ಧನಪಾಲ್, ಪಳಂಗಪ್ಪ. ಸಿ.ಬಿ, ಕಾಶಿ.ಬಿ.ಎನ್, ಅಭಿಷೇಕ್ ಎಂ, ಶುಭಶೇಖರ್, ಬಿ.ಎನ್, ಬಸಮ್ಮ, ಗುರುಪ್ರಸಾದ್, ಕೆ.ಆರ್, ಕಮಲಾಕ್ಷಿ.ಸಿ, ಕಮಲ ಎಸ್.ಆರ್. ಮತ್ತು ಸಂಘದ ಕಾರ್ಯದರ್ಶಿ ಬಿ.ಪಿ. ಗುರುಬಸಪ್ಪ ಮತ್ತು ಸಿಬ್ಬಂದಿಗಳಾದ ಸುಬ್ರಹ್ಮಣ್ಯ, ಬಿ.ಎಸ್.ದಿನೇಶ್ ಹಾಗೂ ಸದಸ್ಯರಾದ ನಾರಾಯಣ, ಕಾವೇರಪ್ಪ ಹಾಜರಿದ್ದರು.

ಸೌಜನ್ಯ ಹತ್ಯೆ ಪ್ರಕರಣ ಎಸ್‌ಐಟಿ ತನಿಖೆಗೆ ಆಗ್ರಹ

ಮಡಿಕೇರಿ, ಆ.7- ಉಜಿರೆ ಕಾಲೇಜು ವಿದ್ಯಾರ್ಥಿನಿ ಸೌಜನ್ಯ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಎಸ್‌ಐಟಿ ತನಿಖೆಗೆ ಒಪ್ಪಿಸಬೇಕೆಂದು ಕೊಡಗು ಜಿಲ್ಲಾ ಒಕ್ಕಲಿಗರ ಸಂಘ ಒತ್ತಾಯಿಸಿದೆ.



ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಜಿಲ್ಲಾಧ್ಯಕ್ಷ ಎಸ್.ಎಂ.ಚಂಗಪ್ಪ, ವಿದ್ಯಾರ್ಥಿನಿ ಸೌಜನ್ಯಳ ಹತ್ಯೆಯಾಗಿ 11 ವರ್ಷಗಳೇ ಕಳೆದರೂ ನೈಜ ಆರೋಪಿಯನ್ನು ಬಂಧಿಸದೇ ಇರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಎಸ್‌ಐಟಿ ತನಿಖೆ ಮೂಲಕ ತಪ್ಪಿತಸ್ಥರನ್ನು ಪತ್ತೆ ಮಾಡಿ ಶಿಕ್ಷೆಗೆ ಗುರಿಪಡಿಸಬೇಕು, ಆ ಮೂಲಕ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಅಮಾಯಕ ವಿದ್ಯಾರ್ಥಿನಿಯನ್ನು ಅತ್ಯಾಚಾರ ಮಾಡಿ ಹತ್ಯೆಗೈದಿರುವುದು ಪೈಶಾಚಿಕ ಕೃತ್ಯವಾಗಿದೆ. ಈ ರೀತಿಯ ಘಟನೆಗಳನ್ನು ಯಾವ ಸಮಾಜವೂ ಸಹಿಸಲು ಸಾಧ್ಯವಿಲ್ಲ. ಸುದೀರ್ಘ ಕಾಲದಿಂದ ನೈಜ ತಪ್ಪಿತಸ್ಥರನ್ನು ಪತ್ತೆ ಮಾಡದೆ ಇರುವುದರಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತಿದೆ. ಮುಂದೆ ಈ ರೀತಿಯ ಘಟನೆಗಳು ನಡೆಯದಂತೆ ಎಚ್ಚರ ವಹಿಸಲು ಅತ್ಯಾಚಾರ ಪ್ರಕರಣಗಳ ಆರೋಪಿಗಳನ್ನು ಶೀಘ್ರ ಪತ್ತೆ ಮಾಡಿ ಶಿಕ್ಷೆಗೆ ಗುರಿ ಪಡಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ. ಸೌಜನ್ಯ ಪ್ರಕರಣವನ್ನು ರಾಜ್ಯ ಸರ್ಕಾರ ವಿಶೇಷವಾಗಿ ಪರಿಗಣಿಸಿ ತುರ್ತು ತನಿಖೆಗೆ ಆದೇಶ ಹೊರಡಿಸಬೇಕು. ನೊಂದ ಕುಟುಂಬಕ್ಕೆ ಸೂಕ್ತ ರಕ್ಷಣೆ ಮತ್ತು ಪರಿಹಾರವನ್ನು ನೀಡಬೇಕೆಂದು ಚಂಗಪ್ಪ ಒತ್ತಾಯಿಸಿದ್ದಾರೆ.

ಶೂಟಿಂಗ್‌ನಲ್ಲಿ ಚಿನ್ನ

ಸುಂಟಿಕೊಪ್ಪ, ಆ.7- ಮೂಲತಃ ಸುಂಟಿಕೊಪ್ಪದವರಾದ ಪ್ರಸ್ತುತ ಬೆಂಗಳೂರಿನ ರೇವ ಯೂನಿವರ್ಸಿಟಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಂಥನ್ ರಾಷ್ಟ್ರೀಯ ಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.



ಬೆಂಗಳೂರಿನ ಇಂಟರ್ ಡೈರಕ್ಟರೇಟ್ ಶೂಟಿಂಗ್ ತರಬೇತಿ ವತಿಯಿಂದ ಕೇರಳದ ಪಟ್ಟಿಪೂರ್ ಕಾವ್ ಎಂಬಲ್ಲಿ ನಡೆದ ಶೂಟಿಂಗ್ ಸ್ಪರ್ಧೆಯಲ್ಲಿ ಮಂಥನ್ ಈ ಸಾಧನೆ ಮಾಡಿದ್ದಾರೆ. ಸುಂಟಿಕೊಪ್ಪ ನಿವಾಸಿಗಳಾದ ಟಿ.ಜಿ.ಅಶ್ವಥ್ ಹಾಗೂ ಜ್ಯೋತಿ ಅವರ ಪುತ್ರ ಮಂಥನ್ ಅವರು ರೇವ ಯೂನಿವರ್ಸಿಟಿಯಲ್ಲಿ ಮೊದಲ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿದ್ದು ಪೋಷಕರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ತಮಿಳುನಾಡಿಗೆ ಕಾವೇರಿ ನೀರು: ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ಚಾಮರಾಜನಗರ, ಆ.7- ತಮಿಳುನಾಡಿಗೆ ಕಾವೇರಿ ನೀರು ಹರಿಸದಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ತಮಿಳುನಾಡು ಸರ್ಕಾರ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.



ಪ್ರತಿಭಟನೆ ನೇತೃತ್ವ ವಹಿಸಿದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ,ರಾಜ್ಯದಲ್ಲಿ ಮಳೆ ಅಭಾವದಿಂದ ಜಲಾಶಯಗಳು ಬತ್ತಿಹೋಗುತ್ತಿದ್ದು, ಮುಂದಿನ ದಿನಗಳಲ್ಲಿ ನೀರಿನ ಅಭಾವ ಉಂಟಾಗುವ ಸಾಧ್ಯತೆ ಎದುರಾಗಿದೆ. ಇಲ್ಲಿಯ ಜನತೆಗೆ ಕುಡಿಯಲು ನೀರು, ಜಾನುವಾರುಗಳಿಗೆ, ಕೃಷಿಗೆ ನೀರು ಇಲ್ಲದಂತಾಗುತ್ತದೆ. ಇಂತಹ ಸಂದರ್ಭದಲ್ಲೂ ತಮಿಳುನಾಡು ಮುಖ್ಯಮಂತ್ರಿ ಸ್ಟಾಲೀನ್ ಕರ್ನಾಟಕದ ಮೇಲೆ ಇಲ್ಲದ ಸಲ್ಲದ ಆರೋಪ ಮಾಡಿ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯ ಮಾಡುವ ಮೂಲಕ ಕರ್ನಾಟಕದ ಮೇಲೆ ಕ್ಯಾತೆ ತೆಗೆಯಲು ಹೊರಟಿದ್ದಾರೆ. ನಿಮ್ಮ (ಸ್ಟಾಲೀನ್) ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಕಾವೇರಿ ನೀರು ಹರಿಸುವಂತೆ ಒತ್ತಾಯ ಮಾಡುತ್ತಿದ್ದೀರಿ. ಈ ವರ್ತನೆ ನಿಲ್ಲಿಸದಿದ್ದರೆ ನಿಮ್ಮ ವಿರುದ್ಧ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದರು.

ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ಭರ್ತಿಯಾಗುವ ತನಕ ಸುಮ್ಮನಿರಬೇಕು. ಕಳೆದ ಬಾರಿ ಹೆಚ್ಚಿನ ಮಳೆ ಬಿದ್ದು, ಪ್ರವಾಹ ಉಂಟಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ನಿಮ್ಮ ರಾಜ್ಯಕ್ಕೆ ಸೇರಿದೆ. ಆದರೂ ಕೂಡ ನೀವು ಕಾವೇರಿ ನೀರಿನ ಕ್ಯಾತೆಯನ್ನು ತೆಗೆಯುವುದು ಸರಿಯಲ್ಲ. ಮತ್ತೆ ಕಾವೇರಿ ನೀರು ಹರಿಸುವ ವಿಚಾರದಲ್ಲಿ ಕ್ಯಾತೆ ತೆಗೆದರೆ ನಿಮ್ಮ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ. ತಮಿಳುನಾಡು ಗಡಿಯನ್ನು ಮುಚ್ಚಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದರಾಜು, ಪಣ್ಯದಹುಂಡಿ ರಾಜು ರವಿಚಂದ್ರ ಪ್ರಸಾದ್, ಅರುಣ್ ಕುಮಾರ್‌ಗೌಡ, ಸಾಗರ್ ರಾವತ್, ಚಾ.ಸಿ.ಸಿದ್ದರಾಜು, ಮಹೇಶ್ ಗೌಡ, ಗು.ಪುರುಷೋತ್ತಮ್, ಇತರರು ಭಾಗವಹಿಸಿದ್ದರು.

ಚಾ.ನಗರದಲ್ಲಿ ಮಿಷನ್ ಇಂದ್ರಧನುಷ್ ಅಭಿಯಾನಕ್ಕೆ ಚಾಲನೆ

ಚಾಮರಾಜನಗರ, ಆ.7- ಮಾರಕ ರೋಗಗಳ ವಿರುದ್ಧ ಹೋರಾಡುವ ಲಸಿಕೆಗಳನ್ನು ಗರ್ಭಿಣಿಯರು ಹಾಗೂ ಮಕ್ಕಳಿಗೆ ತಪ್ಪದೇ ಕಾಲ ಕಾಲಕ್ಕೆ ಕೊಡಿಸುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಮಿಷನ್ ಇಂದ್ರಧನುಷ್ ಅಭಿಯಾನ 5.0 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ ದಡಾರ, ರುಬೆಲ್ಲಾ ನಿರ್ಮೂಲನೆ ಮಾಡಲು ಲಸಿಕೆ ನೀಡಲಾಗುತ್ತಿದೆ. ಇನ್ನಿತರ ರೋಗಗಳ ನಿರೋಧಕ ಶಕ್ತಿಗಾಗಿ ಕಾಲಕಾಲಕ್ಕೆ ಲಸಿಕೆ ಕೊಡಲಾಗುತ್ತಿದೆ. ಮಕ್ಕಳು, ಗರ್ಭಿಣಿಯರಿಗೆ ಲಸಿಕೆ ನೀಡುವ ಸಲುವಾಗಿ ಮಿಷನ್ ಇಂದ್ರಧನುಷ್ ಕಾರ್ಯಕ್ರಮದ ಮೂಲಕ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರ ಸದ್ಬಳಕೆ ಮಾಡಿಕೊಳ್ಳಬೇಕೆಂದು ಶಾಸಕರು ಸಲಹೆ ಮಾಡಿದರು.

ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ಅನಾರೋಗ್ಯ ನಿವಾರಣೆಗೆ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕು. ಜಿಲ್ಲೆಯಲ್ಲಿ ಯಾವುದೇ ರೀತಿಯ ಸಾಂಕ್ರಾಮಿಕ ರೋಗಗಳು ಹರಡದಂತೆ ಎಚ್ಚರಿಕೆ ವಹಿಸಬೇಕು. ವಿಶೇಷವಾಗಿ ಮಕ್ಕಳು ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಆರೋಗ್ಯ ರಕ್ಷಣೆಗೆ ವಿಶೇಷ ಮುತುವರ್ಜಿ ವಹಿಸಬೇಕೆಂದು ಅವರು ತಿಳಿಸಿದರು.



ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಮಾತನಾಡಿ, ಇಂದ್ರಧನುಷ್ 5.0 ಅಭಿಯಾನವು ಲಸಿಕೆಯನ್ನು ಪಡೆಯದ ಚಿಕ್ಕ ಮಕ್ಕಳು ಹಾಗೂ ಗರ್ಭಿಣಿಯರನ್ನು ಗುರುತಿಸಿ ಅವರಿಗೆ ಲಸಿಕೆ ನೀಡುವ ಕಾರ್ಯಕ್ರಮವಾಗಿದೆ. ಆರೋಗ್ಯ ಇಲಾಖೆಯ ಸಿಬ್ಬಂದಿ ಮನೆ ಮನೆಗೆ ತೆರಳಿ ಲಸಿಕೆಯ ಪ್ರಯೋಜನಗಳ ಬಗ್ಗೆ ತಿಳಿಸಿ ಅಭಿಯಾನ ಯಶಸ್ವಿಯಾಗಿಸಲು ಮುಂದಾಗಿದ್ದಾರೆ. ಲಸಿಕೆ ಪಡೆಯದ ಮಕ್ಕಳು, ಗರ್ಭಿಣಿಯರು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಪಡೆಯಬೇಕು ಎಂದು ಮನವಿ ಮಾಡಿದರು.

ಜನರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಿದೆ. ಮಾರಕ ರೋಗಗಳ ಬಗ್ಗೆ ಜಾಗೃತಿ ಮೂಡಿಸಿ ಅವುಗಳನ್ನು ಸಂಪೂರ್ಣ ತಡೆಗಟ್ಟುವಲ್ಲಿ ಕಾರ್ಯ ನಿರ್ವಹಿಸಬೇಕಿದೆ. ಜನರ ಆರೋಗ್ಯ ಸೌಲಭ್ಯಗಳಿಗೆ ಆದ್ಯತೆ ನೀಡಲಾಗುವುದು. ಕಾಯಿಲೆ ಬರುವ ಮುನ್ನವೇ ಅದನ್ನು ತಡೆಯುವುದು ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಕಾರ್ಯ ನಿರ್ವಹಿಸಲಿದೆ ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಿಷನ್ ಇಂದ್ರಧನುಷ್ ಅಭಿಯಾನ ಜಾಗೃತಿ ಕುರಿತ ಪೋಸ್ಟರ್‌ಗಳನ್ನು ಗಣ್ಯರು ಬಿಡುಗಡೆ ಮಾಡಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ಆರ್.ಸಿ.ಹೆಚ್. ಅಧಿಕಾರಿ ಡಾ. ಮಂಜುನಾಥ್, ನಗರಸಭಾ ಸದಸ್ಯರಾದ ಅಪ್ಸರ್ ಪಾಷ, ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, ಡಾ. ಉಮಾರಾಣಿ, ಡಾ. ಮಮತ ಕುಮಾರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶೋಟೋಕಾನ್ ಕರಾಟೆ ಸ್ಕೂಲ್ ವಿದ್ಯಾರ್ಥಿಗಳ ಸಾಧನೆ, 6 ಚಿನ್ನ ಸೇರಿ 15 ಪದಕ

ಬೆಂಗಳೂರಿನಲ್ಲಿ ನಡೆದ ಚಾಂಪಿಯನ್ ಶಿಪ್‌ನಲ್ಲಿ 6 ಚಿನ್ನ, 5 ಬೆಳ್ಳಿ, 4 ಕಂಚಿನ ಪದಕ



ಕೊಳ್ಳೇಗಾಲ, ಆ.7- ಬೆಂಗಳೂರಿನಲ್ಲಿ ಭಾನುವಾರ ಸಂಜೆ ನಡೆದ ಜಪಾನ್ ಕರಾಟೆ ಶೋಟೋಕಾನ್ ಅಕಾಡೆಮಿ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ಕೊಳ್ಳೇಗಾಲದ ಶೋಟೋಕಾನ್ ಕರಾಟೆ ವಿದ್ಯಾರ್ಥಿಗಳು 6 ಚಿನ್ನ, 5 ಬೆಳ್ಳಿ, 4 ಕಂಚು ಸೇರಿದಂತೆ 15 ಪದಕಗಳನ್ನು ಪಡೆದು ಸಾಧನೆಗೈದಿದ್ದಾರೆ

ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸಿದ ಸನ್ನಿಧಿ ಪಟೇಲ್.ಕೆ.ಪಿ, ಶ್ರೇಯಸ್.ಎಸ್, ಕುಶಾಲ್.ಡಿ.ಬೈಲೆ, ಧ್ರುವ.ಎಸ್, ಪ್ರೀತಮ್.ಎಂ, ಅಭಯ್ ಜೈರಾಜ್.ಆರ್, ಪ್ರಗ್ದೀಶ್.ಎಂ, ನಯನ.ಜಿ, ಕವನ.ಎಂ, ಪಾವನಿ.ಕೆ.ಎಸ್, ಪರಿಣಿತ. ಕೆ.ಎಸ್, ಯಶಸ್.ಪಿ, ಜೀವನ್ ನಾಯಕ.ಎಂ.ಎನ್, ಕಾರ್ತಿಕ್.ಜಿ.ಐ, ಸೂರಜ್.ಪಿ ಸಾಧನೆಗೈದ ವಿದ್ಯಾರ್ಥಿಗಳಾಗಿದ್ದು, ಶೋಟೋಕಾನ್ ಸ್ಕೂಲ್ ಆಫ್ ಕರಾಟೆಯ ಕಾರ್ಯದರ್ಶಿ ರೆನ್ಶಿ ಯೋಗೇಶ್, ಕೊಳ್ಳೇಗಾಲ ಪಟ್ಟಣದ ಕರಾಟೆ ತರಬೇತುದಾರರಾದ ಸೆನ್ಸೈ ಸೌಜನ್ಯ ಪ್ರಭಾಕರ್, ಸೆನ್ಸೈ ಭವ್ಯಶ್ರೀ ಅಭಿನಂದಿಸಿದ್ದಾರೆ.

ರೈತರ ಬೆಳೆಗೆ ನೀರು ಹರಿಸುವಂತೆ ಒತ್ತಾಯಿಸಿ ಹೆದ್ದಾರಿ ತಡೆ



ಚಾಮರಾಜನಗರ, ಆ.7- ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಕೆರೆ, ಕಟ್ಟೆಗಳ ಅಚ್ಚುಕಟ್ಟು ಭಾಗದ ರೈತರಿಗೆ ಬೆಳೆ ಬೆಳೆಯಲು ನೀರು ಹರಿಸುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಗರದಲ್ಲಿ ಹೆದ್ದಾರಿ ತಡೆ ಚಳವಳಿ ನಡೆಸಲಾಯಿತು.

ನಗರದ ಜಾಲಹಳ್ಳಿಹುಂಡಿ ಸಮೀಪ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 209ರಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ದಿಢೀರ್ ರಸ್ತೆತಡೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ರಾಜ್ಯ ಸರ್ಕಾರ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಕೆರೆಕಟ್ಟೆಯ ಅಚ್ಚುಕಟ್ಟು ಭಾಗದ ರೈತರಿಗೆ ಬೆಳೆ ಬೆಳೆಯಲು ನೀರು ಹರಿಸುವ ಮೂಲಕ ಅಂತರ್ಜಲ ವೃದ್ಧಿಸಿ ಜನ, ಜಾನುವಾರುಗಳಿಗೆ ಅನುಕೂಲ ಮಾಡಿ, ರೈತರಿಗೆ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಏಕಾಏಕಿ ತಮಿಳುನಾಡಿಗೆ ನೀರು ಹರಿಸುವ ಪರಿಸ್ಥಿತಿ ನಿರ್ಮಾಣ ಮಾಡುತ್ತಿದೆ. ರಾಜ್ಯದ ರೈತರು ಭತ್ತ ಬೆಳೆದರೆ ನಿಮಗೆ ಅಕ್ಕಿ ಸಿಗುವುದಿಲ್ಲವೇ? ಗ್ಯಾರಂಟಿ ಯೋಜನೆಯಲ್ಲಿ ಅಕ್ಕಿ ಕೊಡುತ್ತೇವೆ ಎಂದು ಈಗ ಹಣ ಕೊಡುತ್ತಿದ್ದಾರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲೆಯ ಎಲ್ಲಾ ನಾಲೆಗಳಿಗೂ ಭತ್ತ ಬೆಳೆಯಲು ನೀರು ಬಿಡಬೇಕು. ಜಿಲ್ಲೆಯಲ್ಲಿ ಕಬ್ಬು ಬೆಳೆ ಒಣಗುತ್ತಿದೆ. ನಾಲೆಗಳಿಗೆ ನೀರು ಹರಿಸಬೇಕು. ಅದನ್ನು ಬಿಟ್ಟು ಹೈಕೋರ್ಟ್ ತೀರ್ಪು ಇದೆ ಎಂದು ತಮಿಳುನಾಡಿಗೆ ಕಾವೇರಿ ನೀರು ಹರಿಸಬೇಕು ಎಂದು ನೀರಾವರಿ ಸಚಿವರು ಹೇಳುತ್ತಿರುವುದು ಮೂರ್ಖತನವಾಗಿದೆ ಎಂದು ಕಿಡಿಕಾರಿದರು. ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಮೇಕೆದಾಟು ಯೋಜನೆ ಪ್ರಾರಂಭಿಸುವುದಾಗಿ ಹೇಳಿದ್ದಿರಿ. ಕೂಡಲೇ ತಮಿಳುನಾಡಿಗೆ ನೀರು ಹರಿಸುವುದನ್ನು ಕೈ ಬಿಟ್ಟು ಮೇಕೆ ದಾಟು ಯೋಜನೆಯನ್ನು ಆರಂಭಿಸಬೇಕು ಎಂದು ಹಳ್ಳಿಕೆರೆಹುಂಡಿ ಭಾಗ್ಯರಾಜ್ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಬಸವಣ್ಣ, ಯರಿಯೂರು ಮಹೇಶ್, ಹೆಗ್ಗೋಠಾರ ವಿಜಿ, ಹೆಗ್ಗವಾಡಿ ಮಹದೇವಸ್ವಾಮಿ, ಗೌಡಹಳ್ಳಿ ಷಡಕ್ಷರಿ, ಕುರುಬೂರು ಸಿದ್ದೇಶ್, ಮಂಜು, ಕಿನಕಹಳ್ಳಿ ಬಸವಣ್ಣ, ಕುಂತೂರು ನಂಜುಂಡಸ್ವಾಮಿ, ಮೇಲಾಜಿಪುರ ಕುಮಾರ್, ಕಿಳಲೀಪುರದ ಶಿವಮೂರ್ತಿ ಇತರರು ಭಾಗವಹಿಸಿದ್ದರು.

ಉಚಿತ ಫಾಸ್ಟ್‌ಫುಡ್ ಉದ್ಯಮ ತರಬೇತಿ

ಚಾಮರಾಜನಗರ, ಆ.7- ಎಸ್‌ಬಿಐ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆ ನಿರುದ್ಯೋಗಿಗಳಿಗಾಗಿ ಆ.23 ರಿಂದ 10 ದಿನಗಳ ಕಾಲ ಫಾಸ್ಟ್‌ಫುಡ್ ಉದ್ಯಮ ತರಬೇತಿ ಉಚಿತವಾಗಿ ನೀಡಲಿದೆ. ಮಾದಾಪುರದ ಸಮಾಜ ಕಲ್ಯಾಣ ಇಲಾಖೆ ಕಟ್ಟಡದಲ್ಲಿ ತರಬೇತಿ ನೀಡಲಾಗುವುದು. ಅಭ್ಯರ್ಥಿಗಳು 18 ರಿಂದ 45ರ ವಯೋಮಿತಿಯಲ್ಲಿರಬೇಕು. ಬಿಪಿಎಲ್ ಕಾರ್ಡ್ ಹೊಂದಿರಬೇಕು. ಆಸಕ್ತರು ಆ.20ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ದೂ: 08226-200214, ಮೊ:9606098878 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಆರಗ ಜ್ಞಾನೇಂದ್ರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಯಳಂದೂರು, ಆ.7- ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರರವರ ಹೇಳಿಕೆಯನ್ನು ಖಂಡಿಸಿ ಸೋಮವಾರ ಶಾಸಕ ಎ.ಆರ್. ಕೃಷ್ಣಮೂರ್ತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾ ಮೆರವಣಿಗೆ ನಾಡಮೇಗಲಮ್ಮ ದೇವಸ್ಥಾನದಿಂದ ಪ್ರಾರಂಭಗೊಂಡು ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ನಿರ್ಮಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮೈ ಬಣ್ಣದ ಬಗ್ಗೆ ಹಾಗೂ ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಅವರ ಬಗ್ಗೆ ಹಗುರವಾಗಿ ಮಾತನಾಡಿದ ಆರಗ ಜ್ಞಾನೇಂದ್ರ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ನಂತರ ತಾಲೂಕು ಕಚೇರಿಯ ಮುಂದೆ ಪ್ರತಿಭಟನಾಕಾರರು ಜಮಾಯಿಸಿದರು. ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಆರಗ ಜ್ಞಾನೇಂದ್ರರವರು ಮಲ್ಲಿಕಾರ್ಜುನ ಖರ್ಗೆ ಮತ್ತು ಈಶ್ವರ ಖಂಡ್ರೆಯವರ ಬಗ್ಗೆ ಹಗುರವಾಗಿ ಮಾತನಾಡಿ, ನಮ್ಮ ನಾಯಕರುಗಳಿಗೆ ಅಪಮಾನ ಮಾಡಿದ್ದಾರೆ. ಇವರ ಮೇಲೆ ಕ್ರಿಮಿನಲ್ ಕೇಸ್ ಹಾಕಿಸಿ ಶಾಸಕ ಸ್ಥಾನದಿಂದ ಹೊರಹಾಕಬೇಕಾಗಿದೆ. ದಲಿತ ನಾಯಕರಾದ ಖರ್ಗೆಯವರ ರಾಜಕೀಯ ಅನುಭವದಲ್ಲಿ ಆರಗ ಜ್ಞಾನೇಂದ್ರ ಅನುಭವ ಏನೇನೂ ಅಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಶಿವಣ್ಣ, ಮಾಜಿ ಶಾಸಕರಾದ ಎಸ್ ಜಯಣ್ಣ, ಜಿ.ಎನ್. ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರು ಮತ್ತು ತೋಟೇಶ್, ಮಾಜಿ ಜಿಪಂ ಉಪಾಧ್ಯಕ್ಷ ಯೋಗೇಶ್, ಮಾಂಬಳ್ಳಿ ನಂಜುಂಡಸ್ವಾಮಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು

ಮೈಸೂರು ಮಿತ್ರ



ಪರಿಸರ ದಿನಾಚರಣೆ ಅಂಗವಾಗಿ ಕುವೆಂಪು ನಗರದ ವಾಸವಿ ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳಿಂದ ಸೌಗಂಧಿಕಾ ಉದ್ಯಾನವನದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು. ಶಾಲೆಯ ಮುಖ್ಯೋಪಾಧ್ಯಾಯಿನಿ ಲೀಲಾವತಿ, ಇತರ ಶಿಕ್ಷಕರನ್ನು ಕಾಣಬಹುದು.

ಒಂದನೇ ಪುಟದಿಂದ

ಡೆವಲಪರ್ಸ್ ವಿರುದ್ಧ ಕ್ರಮ ಕೈಗೊಳ್ಳಿ

ಸೂಚನೆ ನೀಡಿದರು. ಮೈಸೂರಿನ ಬಹಳಷ್ಟು ಖಾಸಗಿ ಬಡಾವಣೆಗಳಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳಿಲ್ಲ. ಮೈಸೂರು ನಗರ ಯೋಜನಾಬದ್ಧವಾಗಿ ಅಭಿವೃದ್ಧಿಯಾಗದೆ ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿದೆ. ಇದರ ಪರಿಣಾಮ ಮೂಲಭೂತ ಸೌಕರ್ಯಗಳಿಲ್ಲದೆ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇದಕ್ಕೆಲ್ಲಾ ಬೇಜವಾಬ್ದಾರಿ ಅಧಿಕಾರಿಗಳೇ ಕಾರಣ ಎಂದು ಡಾ.ಮಹದೇವಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ಮುಂದೆ ಯಾರೇ ಬಡಾವಣೆ ಅಭಿವೃದ್ಧಿಪಡಿಸಿದರೂ ಇಲ್ಲಿ ಒಳಚರಂಡಿ ನೀರು ರಾಜಕಾಲುವೆ ಸೇರದಂತೆ ಕ್ರಮ ವಹಿಸಬೇಕು. ನಿಯಮ ಪಾಲಿಸದಿದ್ದರೆ ಯಾವುದೇ ಕಾರಣಕ್ಕೂ ನಿವೇಶನ ಮಾರಾಟಕ್ಕೆ ಅನುಮತಿ ನೀಡಬಾರದು ಎಂದು ಮುಡಾ ಆಯುಕ್ತರಿಗೆ ತಾಕೀತು ಮಾಡಿದರು.

ಖಾಸಗಿ ಬಡಾವಣೆಗಳಲ್ಲಿ ಮೂಲ ಸೌಕರ್ಯ ಕಲ್ಪಿಸದಿದ್ದರೂ ನಿರಪೇಕ್ಷಣಾ ಪತ್ರ ನೀಡಿ ಎಲ್ಲೆಲ್ಲ ನಿಯಮ ಉಲ್ಲಂಘನೆಯಾಗಿದೆ ಎಂಬ ಬಗ್ಗೆ ಸಮಗ್ರ ವರದಿಯನ್ನು ನನಗೆ ಸಲ್ಲಿಸಿ. ಸೆಪ್ಟೆಂಬರ್ ಮೊದಲ ವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಈ ವಿಚಾರವಾಗಿ ಚರ್ಚೆ ಮಾಡುತ್ತೇನೆ ಎಂದು ಡಾ.ಮಹದೇವಪ್ಪ ತಿಳಿಸಿದರು.

ಮೈಸೂರು ನಗರದ ಒಳಚರಂಡಿ ನೀರು ಎಲ್ಲೆಲ್ಲಿ ರಾಜಕಾಲುವೆ ಹಾಗೂ ಮೋರಿ ಸೇರುತ್ತಿದೆ ಎಂಬುದನ್ನು ಮೊದಲು ಪತ್ತೆ ಹಚ್ಚಿ, ತರುವಾಯ ಒಳಚರಂಡಿ ನೀರು ಎಸ್‌ಟಿಪಿ ಪ್ಲಾಂಟ್ ಅನ್ನು ನೇರವಾಗಿ ಸೇರುವಂತೆ ಏನು ಮಾಡಬೇಕೆಂಬ ಬಗ್ಗೆ ಸಮಗ್ರ ಯೋಜನಾ ವರದಿ ಸಿದ್ಧ ಮಾಡಿ, ನನಗೆ ಸಲ್ಲಿಸಿ ಎಂದು ಪಾಲಿಕೆ ಆಯುಕ್ತರಿಗೆ ಸೂಚಿಸಿದರು. ಒಟ್ಟಾರೆ ಮೈಸೂರು ನಗರದ ಹಲವು ಸಮಸ್ಯೆಗಳ ಪರಿಹಾರವಾಗಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿ ರಚನೆ ಮಾಡಬೇಕು. ಈ ಸಮಿತಿಯಲ್ಲಿ ಮುಡಾ, ನಗರಪಾಲಿಕೆ, ಲೋಕೋಪಯೋಗಿ, ಸಣ್ಣ ನೀರಾವರಿ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ, ಚೆಸ್ಕಾಂ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು ಸದಸ್ಯರಾಗಿರಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ನಗರದ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಬೇಕು. ಅಲ್ಲಿ ಕೈಗೊಂಡ ನಿರ್ಣಯಗಳು ಹೇಗೆ ಅನುಷ್ಠಾನಗೊಂಡಿವೆ ಎಂದು ಮುಂದಿನ ಸಭೆಯಲ್ಲಿ ಪರಾಮರ್ಶೆ ಮಾಡಬೇಕು. ಸರ್ಕಾರದ ಮಟ್ಟದಲ್ಲಿ ಸಮಸ್ಯೆ ಇತ್ಯರ್ಥವಾಗಬೇಕಾದರೆ ಮೊದಲು ನನ್ನ ಗಮನಕ್ಕೆ ತರಬೇಕು ಎಂದು ತಾಕೀತು ಮಾಡಿದರು. ಮೈಸೂರು ನಗರದ ಅಭಿವೃದ್ಧಿಗೆ ನರ್ಮ್ ಯೋಜನೆಯಲ್ಲಿ ನೂರಾರು ಕೋಟಿ ರೂಪಾಯಿ ನೀಡಲಾಯಿತು. ಆದರೆ ಸರಿಯಾದ ಯೋಜನೆ ರೂಪಿಸದ ಕಾರಣ ಆ ಹಣ ಸದ್ಬಳಕೆ ಆಗಿಲ್ಲ ಎಂದು ಡಾ.ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು. ಶಾಸಕರಾದ ತನ್ವೀರ್ ಸೇಠ್, ಶ್ರೀವತ್ಸ, ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಮುಡಾ ಆಯುಕ್ತ ದಿನೇಶ್‌ಕುಮಾರ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ವ್ಯಾಪಾರ ವಹಿವಾಟು ನಿರ್ಬಂಧಿಸಿ

ರಸ್ತೆ ಮಧ್ಯದಲ್ಲಿ ವಾಹನ ನಿಲ್ಲಿಸಿಕೊಂಡು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಾರೆ. ಇದರಿಂದ ಇನ್ನಿತರ ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಮಸ್ಯೆ ಪರಿಹಾರ ಮಾಡುವುದು ಅತ್ಯವಶ್ಯ ಎಂದು ಅಭಿಪ್ರಾಯಪಟ್ಟರು.

ದನಿಗೂಡಿಸಿದ ಜಿಟಿಡಿ: ಇದಕ್ಕೆ ದನಿಗೂಡಿಸಿದ ಶಾಸಕ ಜಿ.ಟಿ.ದೇವೇಗೌಡರು, ರೈತ ಸಂತೆ ಬಳಿ ನಂಜನಗೂಡು ರಸ್ತೆಗೆ ನಿರ್ಮಾಣ ಮಾಡಿರುವ ಕೆಳಸೇತುವೆ ಕೂಡ ಕಿರಿದಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಮತ್ತಷ್ಟು ತೊಂದರೆ ಆಗಿದೆ. ಎಂ.ಜಿ.ರಸ್ತೆಯ ರೈತ ಸಂತೆ ಜಾಗದ ವಿವಾದ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ. ಕೋರ್ಟ್‌ನಲ್ಲಿ ವಿವಾದ ಇತ್ಯರ್ಥವಾಗುವುದು ವಿಳಂಬವಾಗುತ್ತದೆ. ಆದ ಕಾರಣ ಎಂ.ಜಿ.ರಸ್ತೆಯಲ್ಲಿ ಸಂಚಾರಕ್ಕೆ ತೊಂದರೆ ಆಗದಂತೆ ಕೂಡಲೇ ಪರಿಹಾರ ಮಾರ್ಗ ರೂಪಿಸಬೇಕು ಎಂದು ಸಲಹೆ ನೀಡಿದರು. ಜಿಲ್ಲಾಧಿಕಾರಿಗಳು ಪ್ರಸ್ತಾಪಿಸಿರುವ ಈ ವಿಚಾರ ಬಹಳ ಗಂಭೀರವಾಗಿದೆ. ಎಂ.ಜಿ.ರಸ್ತೆಯ ರೈತ ಸಂತೆ ತರಕಾರಿ ಮಾರಾಟಗಾರರಿಗೆ ಬೇರೆ ಸ್ಥಳ ನೀಡಲಾಗಿದೆ. ಆದರೆ ನಾವು ಅಲ್ಲಿಗೆ ಹೋಗುವುದಿಲ್ಲ ಎಂದು ಅವರು ಪಟ್ಟು ಹಿಡಿದಿದ್ದಾರೆ. ಆದರೆ ಅಲ್ಲಿನ ತರಕಾರಿ ಮಾರಾಟಗಾರರಿಂದ ಎಂ.ಜಿ.ರಸ್ತೆಯಲ್ಲಿ ವಾಹನ ಸುಚಾರಕ್ಕೆ ಯಾವ ತೊಂದರೆಯೂ ಆಗಬಾರದು. ಕೂಡಲೇ ಕ್ರಮ ತೆಗೆದುಕೊಳ್ಳಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರಿಗೆ ಸೂಚನೆ ನೀಡಿದರು.

ರೈತ ಸಂತೆ ಬಳಿ ರಸ್ತೆಯಲ್ಲಿ ಹಣ್ಣು-ತರಕಾರಿ ಸಾಗಿಸುವ ವಾಹನಗಳ ನಿಲುಗಡೆ ಹಾಗೂ ವ್ಯಾಪಾರ ಮಳಿಗೆಗಳಿಂದ ಯಾವ ರೀತಿಯಲ್ಲಿ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ ಎಂದು 'ಮೈಸೂರು ಮಿತ್ರ' ಚಿತ್ರಸಹಿತ ಸವಿಸ್ತಾರ ವರದಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸ್ವತಃ ಸಮಸ್ಯೆಗೀಡಾದ ಜಿಲ್ಲಾಧಿಕಾರಿಗೆ ಪರಿಹಾರದ ಜ್ಞಾನೋದಯ...!

ಎಂ.ಜಿ.ರಸ್ತೆಯ ರೈತ ಸಂತೆ ಬಳಿ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿರುವ ಬಗ್ಗೆ ಸ್ವತಃ ಜಿಲ್ಲಾಧಿಕಾರಿಗಳೇ ಈ ವಿಷಯವನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನ ಸೆಳೆದಿರುವುದು ಸಹಜವಾಗಿಯೇ ಸಭೆಯಲ್ಲಿದ್ದವರಿಗೆ ಅಚ್ಚರಿ ಉಂಟು ಮಾಡಿತು.

ಸ್ವತಃ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಈ ಸಮಸ್ಯೆ ಪ್ರಸ್ತಾಪಿಸಲು ಕಾರಣ ಏನಿರಬಹುದು ಎಂದು ಶಾಸಕ ತನ್ವೀರ್ ಸೇಠ್ ಹಾಸ್ಯ ಧಾಟಿಯಲ್ಲಿ ಪ್ರಶ್ನಿಸಿದರು. ಅದಕ್ಕೆ ತಾವೇ ಉತ್ತರ ಕಂಡುಕೊಂಡರು. ಸಿದ್ಧಾರ್ಥ ಲೇಔಟ್‌ನ ನಿಮ್ಮ ಕಚೇರಿಯಿಂದ ಮನೆಗೆ ತೆರಳಲು ಅದೇ ರಸ್ತೆಯಲ್ಲಿ ಹೋಗಬೇಕು– ಬರಬೇಕು. ಇದರಿಂದ ನಿಮಗೆ ಈ ಸಮಸ್ಯೆಯ ಅರಿವಾಗಿದೆ. ಈ ಕಾರಣದಿಂದ ಅಲ್ಲಿನ ಸಮಸ್ಯೆಯನ್ನು ಪ್ರಸ್ತಾಪ ಮಾಡುತ್ತಿದ್ದೀರಾ ಎಂದು ಶಾಸಕ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರನ್ನು ಛೇಡಿಸಿದರು. ಇದಕ್ಕೆ ಡಾ.ರಾಜೇಂದ್ರ, ಏನೂ ಮಾತನಾಡದೆ ನಕ್ಕು ಸುಮ್ಮನಾದರು.

ಅಭಿವೃದ್ಧಿ ಅನುದಾನವಿಲ್ಲ

ಅದನ್ನು ನಿವಾರಣೆ ಮಾಡುವಲ್ಲಿ ನಾವು ಅಸಹಾಯಕರಾಗುತ್ತಿದ್ದೇವೆ. ಟ್ರಾನ್ಸ್‌ಫಾರ್ಮರ್‌ಗಳ ಬದಲಾವಣೆ ಸೇರಿದಂತೆ ಸಣ್ಣಪುಟ್ಟ ಕೆಲಸಗಳನ್ನೂ ಮಾಡಲಾಗುತ್ತಿಲ್ಲ. ಒಂದು ಕಿಲೋಮೀಟರ್ ಕಚ್ಚಾ ರಸ್ತೆಯನ್ನು ಮಾಡಿಕೊಡುವ ಸ್ಥಿತಿಯಲ್ಲಿ ನಾವಿಲ್ಲ. ಹೀಗಿರುವಾಗ ಜನರಿಗೆ ಹೇಗೆ ಉತ್ತರಕೊಡಬೇಕು ಎಂದು ಶಾಸಕರು ತಮ್ಮ ಅಳಲನ್ನು ತೋಡಿಕೊಂಡರು.

ಕೆಲವು ಸಚಿವರು ಅಹಂಕಾರದಿಂದ ವರ್ತಿಸುತ್ತಿದ್ದಾರೆ. ಶಾಸಕರಾಗಿರುವ ನಮಗೆ ಗೊತ್ತಿಲ್ಲದೆ ಕ್ಷೇತ್ರದಲ್ಲಿ ಅಧಿಕಾರಿಗಳ ವರ್ಗಾವಣೆಯಾಗುತ್ತಿದೆ. ಹೀಗಾದರೆ ಅಧಿಕಾರಿಗಳು ನಮ್ಮ ಮಾತು ಕೇಳುತ್ತಾರೆಯೇ ಎಂದು ಶಾಸಕರು ಪ್ರಶ್ನಿಸಿದ್ದಾರೆ.

ಶಾಸಕರ ಮಾತುಗಳನ್ನು ಸಮಾಧಾನ ಚಿತ್ತದಿಂದ ಆಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಸದ್ಯಕ್ಕೆ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ನೀಡಲು ಸಾಧ್ಯವಾಗುತ್ತಿಲ್ಲ. ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲೇಬೇಕಾದ ಸವಾಲು ನನ್ನ ಮುಂದಿದೆ. ಗ್ಯಾರಂಟಿ ವಿಚಾರದಲ್ಲಿ ಎಡವಿದರೆ ರಾಜಕೀಯ ಎದುರಾಳಿಗಳಿಗೆ ಅಸ್ತ್ರವಾಗುತ್ತದೆ. ಜೊತೆಗೆ ಲೋಕಸಭಾ ಚುನಾವಣೆಗೂ ಮುನ್ನವೇ ಗ್ಯಾರಂಟಿ ಸೌಲಭ್ಯಗಳನ್ನು ಮನೆ ಮನೆಗೆ ತಲುಪಿಸಬೇಕಾದ ಅನಿವಾರ್ಯತೆ ಇದೆ ಎಂದು ಮನವರಿಕೆ ಮಾಡಿದ ಮುಖ್ಯಮಂತ್ರಿಗಳು ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಅನುದಾನ ಕೊರತೆಯಾಗಿರುವುದು ನಿಜ. ಸ್ವಲ್ಪ ದಿನ ನಿಟ್ಟಿಗೆ ಸಹಕರಿಸಿ. ಅಕ್ಟೋಬರ್ ವೇಳೆಗೆ ರಾಜ್ಯದ ಆರ್ಥಿಕತೆಯ ಸ್ಪಷ್ಟ ಚಿತ್ರಣ ದೊರೆಯಲಿದ್ದು, ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ. ಒಂದೆರಡು ತಿಂಗಳ ಬಳಿಕ ಕ್ಷೇತ್ರ ಅಭಿವೃದ್ಧಿ ವಿಚಾರದಲ್ಲಿ ನಿಮ್ಮ ನಿರೀಕ್ಷೆಗಳಿಗೆ ಸ್ಪಂದನೆ ದೊರೆಯಲಿದೆ. ಇದರ ಹೊರತಾಗಿಯೂ ತುರ್ತಾಗಿ ಆಗಲೇಬೇಕಾಗಿರುವ ಕೆಲಸಗಳಿದ್ದರೆ ಮಾಡಿಕೊಡುತ್ತೇನೆ. ಅದಕ್ಕಾಗಿಯೇ ಸಚಿವಾಲಯದಲ್ಲಿ ಕೆಲವು ಅಧಿಕಾರಿಗಳಿಗೆ ಜವಾಬ್ದಾರಿ ನೀಡಿದ್ದೇನೆ. ಏನೇ ಇದ್ದರೂ ನನ್ನನ್ನು ಭೇಟಿ ಮಾಡಿ ಎಂದು ಶಾಸಕರಿಗೆ ತಿಳಿಸಿದರು.

ವರ್ಗಾವಣೆ ಬಗ್ಗೆ ಮಾತನಾಡಿದ ಮುಖ್ಯಮಂತ್ರಿಗಳು, ವರ್ಗಾವಣೆ ವಿಚಾರದಲ್ಲಿ ಕೆಲವು ಸಚಿವರ ವರ್ತನೆ ಬಗ್ಗೆ ಶಾಸಕರಿಗೆ ಅಸಮಾಧಾನವಿರುವುದು ನಿಜ. ಅದು ಗೊತ್ತಾಗುತ್ತಲೇ ನೀವು ಬಯಸಿದ ವರ್ಗಾವಣೆಗಳನ್ನು ಮಾಡಿಕೊಟ್ಟಿದ್ದೇನೆ. ಇನ್ನೂ ಆಗಬೇಕಿದ್ದರೆ ಪೋಸ್ಟಿಂಗ್‌ಗಳಿದ್ದರೆ ಅದನ್ನೂ ಮಾಡಿಕೊಡುತ್ತೇನೆ ಎಂದು ಶಾಸಕರನ್ನು ಸಮಾಧಾನಪಡಿಸಿದ್ದಲ್ಲದೇ, ಯಾವುದೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ತನ್ನಿ. ಲೋಕಸಭಾ ಚುನಾವಣೆ ಅತ್ಯಂತ ಮುಖ್ಯವಾಗಿದ್ದು, ಅದಕ್ಕೆ ಪೂರಕವಾಗಿ ಕೆಲಸ ಮಾಡಿ.ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ತರುವಂತಹ ಹೇಳಿಕೆಗಳನ್ನು ನೀಡಬೇಡಿ. ಯಾವುದೇ ಇಲಾಖೆ ಅಥವಾ ಸಚಿವರ ಕೆಲಸಗಳ ಬಗ್ಗೆ ಆಕ್ಷೇಪವಿದ್ದರೂ ಅದನ್ನು ನನ್ನ ಗಮನಕ್ಕೆ ತಂದರೆ ಪರಿಹಾರ ದೊರಕಿಸಿಕೊಡುತ್ತೇನೆ ಎಂದು ಶಾಸಕರಿಗೆ ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಗರ್ಭಿಣಿಯರು, ಮಕ್ಕಳ ಆರೋಗ್ಯ ಕಾಪಾಡಲು ಕಾರ್ಯಕ್ರಮಗಳ ಅನುಷ್ಠಾನ

ಮಿಷನ್ ಇಂದ್ರಧನುಷ್ 5-0 ವಿಶೇಷ ಅಭಿಯಾನಕ್ಕೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಚಾಲನೆ

ಮೈಸೂರು,ಆ.7(ಎಂಟಿವೈ)– ವಿವಿಧ ಲಸಿಕೆಗಳಿಂದ ವಂಚಿತರಾಗಿರುವ ಗರ್ಭಿಣಿಯರು ಹಾಗೂ 5 ವರ್ಷದೊಳಗಿನ ಮಕ್ಕಳ ಆರೋಗ್ಯ ಕಾಪಾಡಲು ಲಸಿಕೆ ನೀಡುವ 'ಮಿಷನ್ ಇಂದ್ರ ಧನುಷ್–5.0' ವಿಶೇಷ ಅಭಿಯಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹಾದೇವಪ್ಪ ಚಾಲನೆ ನೀಡಿದರು.



ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ 'ತೀವ್ರತರ ಮಿಷನ್ ಇಂದ್ರಧನುಷ್–5.0' ಲಸಿಕಾ ಅಭಿಯಾನದಲ್ಲಿ ನವಜಾತ ಶಿಶುಗಳಿಗೆ ಲಸಿಕೆ ಹಾಕುವ ಮೂಲಕ ಸಚಿವರು ಚಾಲನೆ ನೀಡಿದರು.

ಕೇಂದ್ರ ಸರ್ಕಾರ 2014ರಲ್ಲಿ ಇಂದ್ರ ಧನುಷ್ ಕಾರ್ಯಕ್ರಮವನ್ನು ಜಾರಿಗೊಳಿಸಿತ್ತು. ಅಂದಿನಿಂದಲೂ ವಿಶೇಷ ಅಭಿಯಾನದ ಮೂಲಕ ಗರ್ಭಿಣಿಯರು ಹಾಗೂ 5 ವರ್ಷದೊಳಗಿನ ಮಕ್ಕಳ ಆರೋಗ್ಯ ಕಾಪಾಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ. ಗರ್ಭಾವಸ್ಥೆಯಲ್ಲಿರುವ ಶಿಶುಗಳು ಹಾಗೂ 5 ವರ್ಷದೊಳಗಿನ ಮಕ್ಕಳೊಂದಿಗೆ ಗರ್ಭಿಣಿಯರು ಹಾಗೂ ಬಾಣಂತಿಯರ ಆರೋಗ್ಯ ಕಾಪಾಡಲು ಇಂದ್ರಧನುಷ್‌ನಂತಹ ಕಾರ್ಯಕ್ರಮ ಪೂರಕವಾಗಿದೆ. ಮಕ್ಕಳ ಆರೋಗ್ಯ ಕಾಪಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಲಸಿಕೆ ಹಾಕುವ ಉದ್ದೇಶ ಮಕ್ಕಳಿಗೆ ಯಾವುದೇ ರೋಗ ಬರದಂತೆ ತಡೆಗಟ್ಟುವುದೇ ಆಗಿದೆ. ಗುರುತಿಸಲ್ಪಟ್ಟ ವಿವಿಧ ಲಸಿಕೆಗಳನ್ನು ಸಕಾಲಕ್ಕೆ ತಮ್ಮ ಮಕ್ಕಳಿಗೆ ಹಾಕಿಸಿದರೆ, ಆರೋಗ್ಯವಂತ ಮಕ್ಕಳ ಜನನವಾಗಲಿದೆ ಎಂದರು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 7,18,478 ಮನೆಗಳಿದ್ದು, ಈಗಾಗಲೇ 6,48,147 ಮನೆಗಳಿಗೆ ಆಶಾ ಹಾಗೂ ಆರೋಗ್ಯ ಕಾರ್ಯಕರ್ತರು ಭೇಟಿ ನೀಡಿ ಸಮೀಕ್ಷೆ ನಡೆಸಿದ್ದಾರೆ. ಈ ಸಮೀಕ್ಷೆಯಲ್ಲಿ 0–2 ವರ್ಷದೊಳಗಿನ 5075 ಮಕ್ಕಳು, 2–5 ವರ್ಷದೊಳಗಿನ 432 ಮಕ್ಕಳು ಹಾಗೂ 1211 ಗರ್ಭಿಣಿಯರನ್ನು ಗುರುತಿಸಲಾಗಿದೆ. ಇಂದ್ರಧನುಷ್ ಅಭಿಯಾನ ಮೂರು ಹಂತದಲ್ಲಿ ನಡೆಯಲಿದ್ದು, ಮಕ್ಕಳು ಹಾಗೂ ಗರ್ಭಿಣಿಯರಿಗಾಗಿ ಲಸಿಕೆ ಹಾಕಲು ಜಿಲ್ಲೆಯಲ್ಲಿ 900 ಕೇಂದ್ರ ತೆರೆಯಲಾಗಿದೆ. 345 ವ್ಯಾಕ್ಸಿನೇಟರ್, 1773 ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸಲಿದ್ದಾರೆ. 496 ಹೈರಿಸ್ಕ್ ಪ್ರದೇಶಗಳನ್ನು ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಲಸಿಕೆ ಹಾಕಿಸಿಕೊಳ್ಳದ ಗರ್ಭಿಣಿಯರು ಹಾಗೂ 0–5 ವರ್ಷದೊಳಗಿನ ಮಕ್ಕಳಿಗೆ ಈ ಅಭಿಯಾನದಲ್ಲಿ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳುವಂತೆ ತಿಳಿಸಿದರು.

ಪೋಷಕಾಂಶಗಳು, ಲಸಿಕೆ, ಶಿಕ್ಷಣ ಹಾಗೂ ಮಕ್ಕಳ ಆರೋಗ್ಯಕ್ಕೆ ಸರಕಾರ ಮೊದಲ ಆದ್ಯತೆ ನೀಡಲಿದೆ. ಈ ನಿಟ್ಟಿನಲ್ಲಿ ಇಂದ್ರಧನುಷ್ ಮುಖ್ಯವಾದ ಕಾರ್ಯಕ್ರಮವಾಗಿದೆ. ಇದರೊಂದಿಗೆ ಮಕ್ಕಳ ಹಾಗೂ ಗರ್ಭಿಣಿಯರ ಹಿತಕಾಯಲು ಹಲವು ಕಾರ್ಯಕ್ರಮ ರೂಪಿಸಲಾಗಿದೆ. ಎಲ್ಲರೂ ಮಕ್ಕಳ ಆರೋಗ್ಯ ಕಾಪಾಡಲು ಸರ್ಕಾರದ ಕಾರ್ಯಕ್ರಮಗಳ ಯಶಸ್ವಿಗೆ ಸಹಕಾರ ನೀಡಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಆಶಾ ಹಾಗೂ ಆರೋಗ್ಯ ಕಾರ್ಯಕರ್ತರ ಶ್ರಮದಿಂದಾಗಿ ಇಂದು ಭಾರತ ಪೋಲಿಯೋ ಮುಕ್ತ ದೇಶವಾಗಿ ಮಾರ್ಪಟ್ಟಿದೆ. ಪೋಲಿಯೋ ಲಸಿಕಾ ಅಭಿಯಾನವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿದ ಫಲವಾಗಿ ಪೋಲಿಯೋ ಪ್ರಕರಣ ಶೂನ್ಯವಾಗಿದೆ. ಇದೇ ಮಾದರಿಯಲ್ಲಿ ಇಂದ್ರಧನುಷ್ ಅಭಿಯಾನವನ್ನು ಯಶಸ್ವಿಗೊಳಿಸಬೇಕಾಗಿದೆ ಎಂದರು.

ಮಿಷನ್ ಇಂದ್ರಧನುಷ್ ಅಭಿಯಾನ ಮೂರು ಹಂತದಲ್ಲಿ ಅಂದರೆ ಆ.7 ರಿಂದ 8 ರವರೆಗೆ, ಸೆ.11 ರಿಂದ 16ರವರೆಗೆ, ಅ.9ರಿಂದ 14ರವರೆಗೆ ನಡೆಯಲಿದ್ದು, ಲಸಿಕೆ ಹಾಕಿಸಿಕೊಳ್ಳದ ಗರ್ಭಿಣಿಯರು ಹಾಗೂ 0–5 ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸುವಂತೆ ಮನವಿ ಮಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ಇಂದ್ರಧನುಷ್ ಅಭಿಯಾನದ ಯಶಸ್ಸಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ 893 ಲಸಿಕಾ ಕೇಂದ್ರ ಹಾಗೂ 7 ಸಂಚಾರಿ ಲಸಿಕಾ ಕೇಂದ್ರದ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ಯು–ವಿನ್ ತಂತ್ರಾಶದ ಮೂಲಕ ಸಮೀಕ್ಷೆ ಮಾಡಲಾಗುತ್ತಿದ್ದು, ಗರ್ಭಿಣಿಯರ ತಾಯಿ ಕಾರ್ಡ್, ಪಡೆದಿರುವ ಲಸಿಕಾ ವಿವರ, ಸೇರಿದಂತೆ ಅಗತ್ಯ ಮಾಹಿತಿ ತಂತ್ರಾಂಶದಲ್ಲಿ ನಮೂದಾಗಿರುತ್ತದೆ. ಇದರಿಂದ ಲಸಿಕೆ ಪಡೆಯ ಬೇಕಾಗಿರುವವರನ್ನು ಗುರುತಿಸಲು ಸುಲಭವಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾ ಸರ್ಜನ್ ಡಾ. ಅಮರ್‌ನಾಥ್, ಆರ್‌ಸಿಹೆಚ್‌ಓ ಡಾ.ಜಯಂತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಈ ಹಿಂದೆ ನಾನು ಆರೋಗ್ಯ ಸಚಿವನಾಗಿದ್ದಾಗ ಮಕ್ಕಳ ಆರೋಗ್ಯ ಕಾಪಾಡಲು ಆದ್ಯತೆ ನೀಡಿದ್ದೆ. ಆ ಸಂದರ್ಭದಲ್ಲಿ ಮೆಟರ್ನಿಟಿ ಚೈಲ್ಡ್ ಹೆಲ್ತ್ ವಿಭಾಗವನ್ನು ರಿಪ್ರೊಡೆಕಟಿವ್ ಚೈಲ್ಡ್ ಹೆಲ್ತ್ ಎಂದು ಬದಲಿಸಲಾಯಿತು. ಅಲ್ಲದೇ ಮೈಸೂರಿನ ಜಿಲ್ಲಾಸ್ಪತ್ರೆ ನಿರ್ಮಾಣಕ್ಕೆ ಉದ್ದೇಶಿಸಲಾಗಿತ್ತು. ವಿವಿಧ ಸಮುದಾಯ ಆಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲಾಯಿತು. ಇದರಿಂದ ಕೋವಿಡ್ ಸಂದರ್ಭದಲ್ಲಿ ಸಾವಿರಾರು ಜನರ ಜೀವ ಉಳಿಯಿತು.
>
> -ಡಾ.ಹೆಚ್.ಸಿ.ಮಹಾದೇವಪ್ಪ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ನಾಳೆ ಬೆಂಗಳೂರಿನಿಂದ ಮೈಸೂರಿಗೆ ಬೈಕ್ ರ್‍ಯಾಲಿ

'ಮನೆ ಮನೆ ಮೇಲೆ ಕನ್ನಡ ಬಾವುಟ' ಅಭಿಯಾನ



ಮೈಸೂರು, ಆ.7(ಪಿಎಂ)– ಕನ್ನಡ ಚಳವಳಿ ಕೇಂದ್ರ ಸಮಿತಿ ಮತ್ತು ಕನ್ನಡ ಮೊದಲು ಸ್ನೇಹಿತರ ತಂಡದ ಜಂಟಿ ಆಶ್ರಯದಲ್ಲಿ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಳಿಸಲು ಸಮ್ಮತಿಸಿ ಸಹಿ ಹಾಕಿದ ದಿನದ ಸ್ಮರಣೆಗಾಗಿ ಆ.9ರಂದು ಬೆಂಗಳೂರಿನಿಂದ ಮೈಸೂರಿಗೆ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರ ಸಮಿತಿ ಅಧ್ಯಕ್ಷ ಗುರುದೇವ್ ನಾರಾಯಣ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ ಭಾರತದ ಒಕ್ಕೂಟಕ್ಕೆ ಅಂದಿನ ಮೈಸೂರು ಸಂಸ್ಥಾನ ಸೇರ್ಪಡೆಗೊಳಿಸುವ ಸಂಬಂಧ ಸಂಸ್ಥಾನದ ಅಂದಿನ ಮಹಾರಾಜ ಜಯಚಾಮರಾಜ ಒಡೆಯರ್ 1947ರ ಆ.9ರಂದು ಸಮ್ಮತಿಸಿ ಸಹಿ ಹಾಕಿದ್ದರು. ಆ ಮೂಲಕ ತಮ್ಮ ಸಂಸ್ಥಾನವನ್ನೇ ತ್ಯಾಗ ಮಾಡಿದರು. ಈ ದಿನದ ಸ್ಮರಣೆಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಅಂದು ಬೆಳಗ್ಗೆ 7ಕ್ಕೆ ಬೆಂಗಳೂರಿನ ಮೈಸೂರು ರಸ್ತೆಯ ಕವಿಕಾ ಕಾರ್ಖಾನೆ ಬಳಿಯಿಂದ ಬೈಕ್ ರ್‍ಯಾಲಿ ಆರಂಭವಾಗಲಿದ್ದು, ಬಳಿಕ ಮೈಸೂರು–ಬೆಂಗಳೂರು ಸರ್ವೀಸ್ ರಸ್ತೆ ಮೂಲಕ ಬೈಕ್ ರ್‍ಯಾಲಿ ಮೈಸೂರು ತಲುಪಲಿದೆ. ನಂತರ ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಇದರ ಜೊತೆಗೆ ಅಂದು 'ಮನೆ ಮನೆ ಮೇಲೆ ಕನ್ನಡಬಾವುಟ' ಅಭಿಯಾನ ಹಮ್ಮಿಕೊಂಡಿದ್ದು, ರಾಜ್ಯದ ಜನತೆ ತಮ್ಮ ಮನೆಗಳ ಮೇಲೆ ಕನ್ನಡ ಧ್ವಜ ಹಾರಿಸಬೇಕೆಂದು ಮನವಿ ಮಾಡಿದರು.

ಮೈಸೂರು ಚಲೋ: ದೇಶಕ್ಕೆ ಸ್ವಾತಂತ್ರ್ಯ ಘೋಷಣೆಯಾಗುವ 1947ರ ಆ.15ಕ್ಕೂ 5 ದಿನಗಳು ಮೊದಲೇ ಜಯಚಾಮರಾಜ ಒಡೆಯರ್ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗಲು ಆ.9ರಂದು ಸಮ್ಮತಿಸಿ ಸಹಿ ಹಾಕಿದ್ದರು. ಆದರೆ ಜಯಚಾಮರಾಜ ಒಡೆಯರ್ ಕೆಲ ಷರತ್ತುಗಳನ್ನು ಮುಂದಿಡುವ ಮೂಲಕ ಅಧಿಕಾರ ಹಸ್ತಾಂತರ ಮಾಡದ ಹಿನ್ನೆಲೆಯಲ್ಲಿ ಮೈಸೂರು ಚಲೋ ಚಳವಳಿ ನಡೆಯಿತು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕನ್ನಡ ಮೊದಲು ಸ್ನೇಹಿತರ ತಂಡದ ಜ್ಞಾಟಿಮಧು, ಡಾ.ರಾಜ್‌ಕುಮಾರ್ ಅಭಿಮಾನಿಗಳ ಬಳಗದ ಎಂ.ರಾಮೇಗೌಡ, ಮುಖಂಡ ಹರೀಶ್ ಗೋಷ್ಠಿಯಲ್ಲಿದ್ದರು.

ರೈತ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ



ಮೈಸೂರು,ಆ.7 (ಎಂಟಿವೈ)– ರಾಜ್ಯ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿ.ಪಂ. ಕಚೇರಿ ಬಳಿ ಪ್ರತಿಭಟನೆ ನಡೆಸಿದ ರೈತ ಮೋರ್ಚಾ ಕಾರ್ಯಕರ್ತರು, ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ರೈತ ಪರ ಯೋಜನೆಗಳನ್ನು ರಾಜ್ಯ ಸರ್ಕಾರ ಕೈ ಬಿಟ್ಟಿದೆ. ದಲ್ಲಾಳಿಗಳ ಹಾವಳಿ ತಪ್ಪಿಸಲು ಜಾರಿಗೊಳಿಸಿದ್ದ ಎಪಿಎಂಸಿ ಕಾಯ್ದೆ ರದ್ದು ಮಾಡಿ ರೈತರ ಆದಾಯ ಕ್ಷೀಣಿಸುವಂತೆ ಮಾಡಿದೆ. ಅವೈಜ್ಞಾನಿಕ ವಿದ್ಯುತ್ ದರ ಏರಿಕೆಯಿಂದಾಗಿ ಹತ್ತಿ ಉದ್ಯಮ, ರೈಸ್ ಮಿಲ್, ಆಲೆಮನೆಗಳು, ಸಣ್ಣ, ಮಧ್ಯಮ ಕೈಗಾರಿಕೆಗಳಿಗೆ ತೊಂದರೆಯಾಗಿದೆ. ರೈತರ ಮಕ್ಕಳ ಶಿಕ್ಷಣಕ್ಕೆಂದು ಜಾರಿಗೊಳಿಸಿದ್ದ ವಿದ್ಯಾನಿಧಿ ಯೋಜನೆಯನ್ನು ರದ್ದು ಮಾಡಿ ರೈತರ ಮಕ್ಕಳಿಗೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ಗೋ ಹತ್ಯೆ ತಡೆ ಮತ್ತು ಜಾನುವಾರು ಸಂರಕ್ಷಿಸಲು ಜಿಲ್ಲೆಗೊಂದು ಗೋಶಾಲೆ ಸ್ಥಾಪಿಸಲು ಬಿಜೆಪಿ ಸರ್ಕಾರ ತೀರ್ಮಾನಿಸಿತ್ತು ಆದರೆ ಈ ಯೋಜನೆಯನ್ನು ಹಿಂಪಡೆಯಲು ಮುಂದಾಗಿದೆ. ಭೂ ಸಿರಿ ಯೋಜನೆ, ಕಿಸಾನ್ ಸಮ್ಮಾನ್ ಯೋಜನೆ, ಕೃಷಿ ಮಾರಾಟ ಕಾಯ್ದೆ ರದ್ದು ಮಾಡಿರುವುದರಿಂದ ರೈತರಿಗೆ ನಷ್ಟವಾಗಲಿದೆ. ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡದೆ ನಿರ್ಲಕ್ಷಿಸಿದೆ. ಮೇಕೆದಾಟು ಪಾದಯಾತ್ರೆ ಕೇವಲ ರಾಜಕೀಯ ಉದ್ದೇಶಕ್ಕೆ ಸೀಮಿತಗೊಳಿಸಲಾಗಿದೆ ಎಂದರು.

ಕ್ಷೀರ ಸಮೃದ್ಧಿ ಸಹಕಾರಿ ಬ್ಯಾಂಕ್, ಶ್ರಮ ಶಕ್ತಿ ಯೋಜನೆ ರದ್ದುಗೊಳಿಸುತ್ತಿದೆ. ಮುಂಗಾರು ವೈಫಲ್ಯದಿಂದಾಗಿ ರಾಜ್ಯದಲ್ಲಿ 42 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಿಜೆಪಿ ಸರ್ಕಾರ ರೈತರ ಪರವಾಗಿ ಹಲವು ಯೋಜನೆ ಕೊಟ್ಟಿತ್ತು ರಾಜ್ಯ ಸರ್ಕಾರ ಇದೇ ರೀತಿ ರೈತ ವಿರೋಧಿ ಧೋರಣೆ ಮುಂದುವರಿಸಿದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಮುಖಂಡರಾದ ಮಿರ್ಲೆ ಶ್ರೀನಿವಾಸಗೌಡ, ರಮೇಶ್‌ಕುಮಾರ್, ದೇವರಾಜ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸ್ತನ್ಯಪಾನ ; ತಾಯಿ, ಮಗು ಇಬ್ಬರ ಆರೋಗ್ಯಕ್ಕೂ ಒಳ್ಳೆಯದು



ಮೈಸೂರು,ಆ.7(ಪಿಎಂ)– ಮಗುವಿಗೆ ತಾಯಿ ಎದೆಹಾಲು ಪೌಷ್ಟಿಕ ಆಹಾರವಷ್ಟೇ ಅಲ್ಲ. ಅದು ತಾಯಿ ಮತ್ತು ಮಗು ಇಬ್ಬರ ಆರೋಗ್ಯಕ್ಕೂ ಒಳ್ಳೆಯದು ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರ ತಂಡ ತಿಳಿಸಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸ್ತನ್ಯಪಾನ ಸಪ್ತಾಹ ಅಂಗವಾಗಿ ಸ್ತನ್ಯಪಾನ, ತಾಯ್ತನ ಮತ್ತು ಮಗುವಿನ ಆರೈಕೆಯ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಸೋಮವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಶಾಹೀನ್ ಅಖ್ತರ್, ಸ್ತನ್ಯಪಾನವು ಮಗುವಿನ ಬೆಳವಣಿಗೆಗೆ ಅಗತ್ಯವಾದ ಎಲ್ಲಾ ಪೋಷಕಾಂಶಗಳನ್ನು ನೀಡಲಿದೆ ಎಂದು ತಿಳಿಸಿದರು.

ಸ್ತನ್ಯಪಾನ ತಾಯಿಗೆ ಸ್ವಾಭಾವಿಕವಾಗಿ ಬರುವುದಾಗಿದೆ. ಆದರೆ ಇತ್ತೀಚೆಗಿನ ದಿನಗಳಲ್ಲಿ ಹಲವು ಕಾರಣಗಳಿಗಾಗಿ ಎದೆ ಹಾಲುಣಿಸುವುದು ಕಡಿಮೆಯಾಗಿದೆ. ಅದನ್ನು ಕಲಿಸಬೇಕಾದ ಅಗತ್ಯವೂ ಬಂದಿದೆ. ಅನೇಕ ತಾಯಂದಿರು ಎದೆಹಾಲಿನ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಬಗ್ಗೆ ಸರಿಯಾದ ಸಮಯದಲ್ಲಿ ಮಾರ್ಗದರ್ಶನ ಪಡೆದರೆ ಅದನ್ನು ಸುಲಭವಾಗಿ ನಿವಾರಿಸಬಹುದು ಎಂದರು.

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಕೆ.ಜಿ. ಅಮೂಲ್ಯ ಮಾತನಾಡಿ, ಹಾಲುಣಿಸುವಿಕೆಯ ಬಗ್ಗೆ ಇರುವ ಸಮಸ್ಯೆಗಳನ್ನು ಪ್ರಸವಪೂರ್ವವಾಗಿ ಪರಿಹರಿಸುವುದು ಮುಖ್ಯ. ವೃತ್ತಿನಿರತ ತಾಯಂದಿರು ಎದೆಹಾಲನ್ನು ಸಂಗ್ರಹಿಸಿಟ್ಟು ಮಗುವಿಗೆ ಕುಡಿಸುವ ಶಿಕ್ಷಣ ಪಡೆದುಕೊಳ್ಳುವುದರಿಂದ ಅನೇಕ ಪ್ರಯೋಜನಗಳಿವೆ. ಹೀಗಾಗಿ ಎದೆಹಾಲು ಉಣಿಸುವ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಆಗಸ್ಟ್ ಮೊದಲ ವಾರವನ್ನು ಪ್ರಪಂಚದಾದ್ಯಂತ ಸ್ತನ್ಯಪಾನ ಸಪ್ತಾಹವಾಗಿ ಆಚರಿಸಲಾಗುತ್ತಿದೆ. ಅಂತೆಯೇ ಆ.1ರಿಂದ 7ರವರೆಗೆ ನಮ್ಮ ಆಸ್ಪತ್ರೆಯಲ್ಲಿ ಸ್ತನ್ಯಪಾನ ಸಪ್ತಾಹ ಅಂಗವಾಗಿ ಜಾಗೃತಿ ಅಭಿಯಾನ ನಡೆಸಲಾಗಿದೆ ಎಂದು ಹೇಳಿದರು.

ಹಿರಿಯ ಆಹಾರ ತಜ್ಞೆ ಕಾವ್ಯ ಮಾತನಾಡಿ, ಹಾಲುಣಿಸುವ ತಾಯಿಗೆ ಪೌಷ್ಟಿಕಾಂಶದ ಆಹಾರ ಅಗತ್ಯ. ಹೆರಿಗೆ ನಂತರದ ಮೊದಲ ಆರು ತಿಂಗಳಲ್ಲಿ ಮಗುವಿಗೆ ಎದೆಹಾಲು ಮಾತ್ರವೇ ನೀಡಬೇಕು. ನಮ್ಮ ಆಸ್ಪತ್ರೆಯಲ್ಲಿ ತಾಯಿ ಮತ್ತು ಮಗುವಿನ ಆರೈಕೆಗಾಗಿ ವಿಶೇಷ ಪ್ಯಾಕೇಜ್ ವ್ಯವಸ್ಥೆ ಇದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ದೂಸಂ. 0821–255–5000 ಸಂಪರ್ಕಿಸಬಹುದು ಎಂದು ತಿಳಿಸಿದರು.

ಆಸ್ಪತ್ರೆಯ ಲಕ್ಷೇಷನ್ ಕೌನ್ಸೆಲರ್ ವಿನುತಾ, ಹಿರಿಯ ಫಿಸಿಯೋಥೆರಪಿಸ್ಟ್ ಕೆ.ಇಸ್ಮಾಯಿಲ್ ಗೋಷ್ಠಿಯಲ್ಲಿದ್ದರು.

ಛಾಯಾಗ್ರಾಹಕ ಅನುರಾಗ್ ಬಸವರಾಜ್ ಛಾಯಾಚಿತ್ರಕ್ಕೆ ಚಿನ್ನದ ಪದಕ

ಮೈಸೂರು, ಆ.7(ಎಂಕೆ)– ಫೋಟೋಗ್ರಫಿ ಸೊಸೈಟಿ ಆಫ್ ಅಮೆರಿಕಾ ಸಂಸ್ಥೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಯಲ್ಲಿ ಮೈಸೂರಿನ ಪತ್ರಿಕಾ ಛಾಯಾಗ್ರಾಹಕ ಅನುರಾಗ್ ಬಸವರಾಜ್(ಎಂ.ಎಸ್.ಬಸವಣ್ಣ)ಅವರ ಛಾಯಾಚಿತ್ರಗಳಿಗೆ ಎರಡು ಚಿನ್ನದ ಪದಕ ಸೇರಿದಂತೆ ಒಟ್ಟು 14 ಪದಕಗಳು ಲಭಿಸಿದೆ. ಅನುರಾಗ್ ಬಸವರಾಜ್ ಅವರ ನಾಗರಹೊಳೆ ಅಭಯಾರಣ್ಯದಲ್ಲಿ ತೆಗೆದಿರುವ ಕಾಡು ಹಂದಿಯೊಂದನ್ನು ಬೇಟೆಯಾಡಲು ಅಟ್ಟಾಡಿಸುತ್ತಿರುವ ಹುಲಿ ಚಿತ್ರ, ಚಿರತೆ ಸೆರೆ ಕಾರ್ಯಾಚರಣೆ ವೇಳೆ ಜನರನ್ನು ಅಟ್ಟಾಡಿಸುತ್ತಿರುವ ಚಿರತೆ ಹಾಗೂ ದಸರಾ ಗಜಪಡೆಯ ತಾಲೀಮು ಚಿತ್ರಕ್ಕೆ ಫೋಟೋಗ್ರಫಿ ಸೊಸೈಟಿ ಆಫ್ ಅಮೆರಿಕಾ ಸಂಸ್ಥೆಯ ಎರಡು ಚಿನ್ನದ ಪದಕ ಹಾಗೂ ಒಂದು ಕ್ಲಬ್ ಗೋಲ್ಡ್, ಕ್ಲಬ್ ಸಿಲ್ವರ್ ಹಾಗೂ ಮೆರಿಟ್ ಚಾಯ್ಸ್ ಗೋಲ್ಡ್ ಮೆಡಲ್ ಲಭಿಸಿದೆ.



ಮಕ್ಕಳಿಗೆ, ಭಾವಗೀತೆ, ಜನಪದ ಸೊಗಡು, ಸಂಸ್ಕೃತಿ ಕಲಿಸಿ



ಮೈಸೂರು, ಆ.7(ಸಿಎನ್) ಇಂದಿನ ಪೀಳಿಗೆ ಮಕ್ಕಳು ಭಾವಗೀತೆ, ಜನಪದ ಗೀತೆಗಳ ಸೊಗಡನ್ನು ಕಲಿಯುತ್ತಿಲ್ಲ. ಪೋಷಕರು ತಮ್ಮ ಮಕ್ಕಳಿಗೆ ದೇಸಿ ಸಂಸ್ಕೃತಿಯನ್ನು ಕಲಿಸಿ ಉಳಿಸುವ ಕೆಲಸ ಮಾಡಬೇಕು ಎಂದು ಮಹಾರತ್ನ ಟ್ರಸ್ಟ್ ಅಧ್ಯಕ್ಷ ಮೈಸೂರು ಎಂ.ಮಹಾಲಿಂಗು ಸಲಹೆ ನೀಡಿದರು.

ಜಯನಗರದ ಕೌಟುಂಬಿಕ ನ್ಯಾಯಾಲಯ ಮುಂಭಾಗದಲ್ಲಿರುವ ನೇಗಿಲ ಯೋಗಿ ಟ್ರಸ್ಟ್ ಸಭಾಂಗಣದಲ್ಲಿ, ಮಹಾರತ್ನ ಟ್ರಸ್ಟ್ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ 'ಭಾವಗೀತೆ ಹಾಗೂ ಜನಪದ ಗೀತೆ'ಯ 5 ದಿನಗಳ ಕಲಿಕಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಹೆಚ್ಚಾಗಿ ಭಾಗವಹಿಸಬೇಕಾದ ಶಿಬಿರಗಳಲ್ಲಿ ಹಿರಿಯರೇ ಕುಳಿತಿರುವುದು ಒಂದು ಕಡೆ ಖುಷಿಯಾದರೆ, ಮತ್ತೊಂದೆಡೆ ಬೇಸರವಾಗುತ್ತಿದೆ. ಈಗಿನ ಮಕ್ಕಳಿಗೆ ಅರ್ಥವಿಲ್ಲದ ಸಾಹಿತ್ಯ ರಿಂಗಣಿಸುತ್ತದೆ. ಆದರೆ ಜಾನಪದ, ಭಾವಗೀತೆ ಸಂಗೀತದ ತಾಯಿಬೇರು, ಅವುಗಳ ಬಗ್ಗೆ ಆಸಕ್ತಿ ಕಡಿಮೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ನಂತರ ಹಲವು ಜಾನಪದ, ಭಾವ ಗೀತೆಗಳನ್ನು ಶಿಬಿರಾರ್ಥಿಗಳು ಹಾಡುವ ಮೂಲಕ ಮೊದಲ ದಿನದ ಶಿಬಿರವನ್ನು ಪ್ರಾರಂಭಿಸಿದರು. ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಪಾರ್ಥ ಸಾರಥಿ, ನೇಗಿಲ ಯೋಗಿ ಟ್ರಸ್ಟ್ ಕಾರ್ಯದರ್ಶಿ ಪುಟ್ಟಸ್ವಾಮಿ ಮತ್ತಿತರರಿದ್ದರು.

ಹಿರಿಯ ನಾಗರಿಕರು ಆದಾಯ ತೆರಿಗೆ ಕುರಿತು ಸಂವಾದ

ಮೈಸೂರು, ಆ.7–(ಸಿಎನ್)– ಹಿರಿಯ ನಾಗರಿಕರು ತಮ್ಮ ಆದಾಯ ತೆರಿಗೆ ರಿಟರ್ನ್ಸ್ (ITR) ಸಲ್ಲಿಸುವ ಕುರಿತಂತೆ ಚಾರ್ಟೆಡ್ ಅಕೌಂಟೆಂಟ್ ಕು.ತೇಜಸ್ವಿನಿ ಮಾಹಿತಿ ನೀಡಿದರು.

ನಗರದ ಜಯಲಕ್ಷ್ಮಿಪುರಂನ ಸರಸ್ವತಿ ಸಮುದಾಯ ಭವನದಲ್ಲಿ, ಹಿರಿಯ ನಾಗರಿಕರ ಮಂಡಳಿ ವತಿಯಿಂದ ಸೋಮವಾರ ನಡೆದ 'ಆದಾಯ ತೆರಿಗೆ' ಕುರಿತು ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ವೇಳೆ ಹಳೆಯ ತೆರಿಗೆ ಪದ್ಧತಿ ಅಥವಾ ಹೊಸ ತೆರಿಗೆ ಪದ್ಧತಿಯ ಅಡಿಯಲ್ಲಿ ಸಲ್ಲಿಸಬಹುದು. ಮೌಲ್ಯಮಾಪನ ವರ್ಷ 2023–24ಗಾಗಿ ನೀವು ITR ಅನ್ನು ಸಲ್ಲಿಸಲು ಹೋದಾಗ ಎರಡೂ ಆಯ್ಕೆಗಳು ಲಭ್ಯವಿರುತ್ತವೆ. ಇ–ಫೈಲಿಂಗ್ ವೆಬ್‌ಸೈಟ್‌ನಲ್ಲಿ ಹೊಸ ತೆರಿಗೆ ಪದ್ಧತಿಯು ಡೀಫಾಲ್ಟ್ ಕಾಣಿಸುತ್ತದೆಯಾದರೂ, ಹಿರಿಯ ನಾಗರಿಕರು ಹಳೆಯ ತೆರಿಗೆ ಪದ್ಧತಿಗೆ ಹೋಗುವ ಆಯ್ಕೆ ಪಡೆಯಬಹುದು ಎಂದು ತೇಜಸ್ವಿನಿ ಮಾಹಿತಿ ನೀಡಿದರು.

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು 3 ಲಕ್ಷ ರೂ.ವರೆಗೆ ಆದಾಯ ತೆರಿಗೆಯನ್ನು ಕಟ್ಟುವಂತಿಲ್ಲ. 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು 5 ಲಕ್ಷ ರೂ.ವರೆಗೆ ತೆರಿಗೆ ಕಟ್ಟುವಂತಿಲ್ಲ ಎಂದರು.

ಆದಾಯ ತೆರಿಗೆ ಇಲಾಖೆಯಲ್ಲಿ ಎರಡು ಬಗೆಯ ಸ್ಲ್ಯಾಬ್ ಇದ್ದು, ಹಳೆ ತೆರಿಗೆ ರಿಸ್ಯೂಮ್ ಹಾಗೂ ಹೊಸ ತೆರಿಗೆ ರಿಸ್ಯೂಮ್ ನಿಯಮವಿದೆ. ಹಿರಿಯ ನಾಗರಿಕರು ತಮಗೆ ಅನುಕೂಲವಾಗುವಂತ ಸ್ಲ್ಯಾಬ್ ಪರಿಶೀಲಿಸಿ ತೆರಿಗೆ ಪಾವತಿಸಬೇಕು. ಗೊಂದಲಗಳಿಂದ ತೆರಿಗೆ ಪಾವತಿಸಬಾರದು ಎಂದು ಸಲಹೆ ನೀಡಿದರು.

7 ಲಕ್ಷ ಸಂಬಳ ಪಡೆಯುವವರಿಗೆ ತೆರಿಗೆ ಇರಲ್ಲ. 7 ಲಕ್ಷ 50 ಸಾವಿರ ಮೀರಿದರೆ 3 ಲಕ್ಷದಿಂದ ತೆರಿಗೆ ಕೌಂಟ್ ಆಗುತ್ತೆ. ಕೃಷಿಕರಿಗೆ ಆದಾಯಕ್ಕೆ ತೆರಿಗೆ ಇರಲ್ಲ. ಹಿರಿಯ ನಾಗರಿಕರು ಎಸ್.ಬಿ, ಎಫ್‌ಡಿ, ಆರ್‌ಡಿ ಖಾತೆಗಳಲ್ಲಿರುವ ಹಣಕ್ಕೆ ಐವತ್ತು ಸಾವಿರ ವಿನಾಯಿತಿ ಸಿಗುತ್ತದೆ ಎಂದರು.

ಹೊಸ ತೆರಿಗೆ ಪದ್ಧತಿಗೆ ಬದಲಾಯಿಸುವವರು ಇನ್ಮುಂದೆ 50,000 ಸ್ಟ್ಯಾಂಡರ್ಡ್ ಡಿಡಕ್ಷನ್ ಅನ್ನು ಪಡೆಯಬಹುದು. ಈ ನಿಯಮವು ಫೆಬ್ರವರಿ 01, 2023ರಿಂದ ನವೀಕರಿಸಲಾಗಿದ್ದು, ಮುಂದಿನ ವರ್ಷ 2024ರ ಏಪ್ರಿಲ್‌ನಿಂದ ಜಾರಿಗೆ ಬರಲಿದೆ ಎಂದರು.

ಈ ವೇಳೆ ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಹೆಚ್.ಎಂ. ನಾಗರಾಜು, ಸಿಎ ಅಂತಿಮ ವರ್ಷದ ವಿದ್ಯಾರ್ಥಿ ಕು. ಸುಮಾ ಬಿ.ವಿ, ಕಾರ್ಯದರ್ಶಿ ಕೆ.ಎಸ್ ಕೃಷ್ಣ, ಟ್ರಸ್ಟ್ ಛೇರ್ಮನ್ ಎಸ್.ವಿ.ಗೌಡಪ್ಪ, ಹಿರಿಯ ನಾಗರಿಕರ ಮಂಡಳಿ ಉಪಾಧ್ಯಕ್ಷ ರಾಮನಾಥ್, ಕೆ.ಎಸ್ ಕೃಷ್ಣ ಇದ್ದರು.

ಮೈಸೂರು ಮಿತ್ರ

ಧಾರ್ಮಿಕ ಆಚರಣೆಗಳಿಂದ ನೆಮ್ಮದಿ: ಕೆ.ಆರ್.ಸತ್ಯನಾರಾಯಣ್



ಮೈಸೂರು, ಆ. 7–ಧಾರ್ಮಿಕ ಆಚರಣೆಗಳಿಂದ ಮತ್ತು ದೈವಾನುಗ್ರಹದಿಂದ ಜೀವನದಲ್ಲಿ ನೆಮ್ಮದಿ ಲಭಿಸುತ್ತದೆ. 'ಅಧಿಕಸ್ಯ ಅಧಿಕ ಲಾಭಂ' ಎನ್ನುವ ಶಾಸ್ತ್ರಾಭಿಪ್ರಾಯವಿದೆ. ದೇವರ ಪ್ರೀತಿಗಾಗಿ ಮಾಡಿದ ಎಲ್ಲಾ ಕರ್ಮಗಳೂ ಅಧಿಕ ಪಟ್ಟಿನ ಪುಣ್ಯ ಫಲ ನೀಡಲಿವೆ. ಕುಟುಂಬದ ನೆಮ್ಮದಿ ಹಾಗೂ ಆರೋಗ್ಯ, ಸಂಪತ್ತಿಗೆ ನೆರವಾಗಲಿವೆ' ಎಂದು ಹೊಯ್ಸಳ ಕರ್ನಾಟಕ ಸಂಘದ ಕಾರ್ಯಾಧ್ಯಕ್ಷ ಕೆ.ಆರ್.ಸತ್ಯನಾರಾಯಣ್ ಅಭಿಪ್ರಾಯಪಟ್ಟರು.

ನಗರದ ವಿಶ್ವೇಶ್ವರ ನಗರದಲ್ಲಿರುವ ಕೆವಿಆರ್ ಕಲ್ಯಾಣ ಮಂಟಪದಲ್ಲಿ ವಿಪ್ರ ಜಾಗೃತಿ ವೇದಿಕೆಯ 10ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಲೋಕ ಕಲ್ಯಾಣಕ್ಕಾಗಿ 25 ವಿಪ್ರ ದಂಪತಿಗಳಿಂದ ಗಿರಿಜಾ ಕಲ್ಯಾಣ ಮಹೋತ್ಸವವನ್ನು ಆಯೋಜಿಸಿದ್ದ ಸಂಧರ್ಭದಲ್ಲಿ ಅಧಿಕ ಮಾಸದ ಧಾರ್ಮಿಕ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ಭೂಮಿಯಲ್ಲಿನ ಸರ್ವರಿಗೂ ಒಳಿತಾಗಲಿ, ಆರೋಗ್ಯ, ಸುಖ, ಸಂಪತ್ತು ಲಭಿಸಲೆಂದು ಲೋಕ ಕಲ್ಯಾಣಾರ್ಥ ಹೋಮಗಳು, ಹಾಗೂ ಬೆಳಗಿನಿಂದಲೇ ಕಲ್ಯಾಣೋತ್ಸವದ ಪ್ರಯುಕ್ತ ನಾನಾ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಕಾರ್ಯಕ್ರಮದಲ್ಲಿ ಬೆಳಿಗ್ಗೆ ವಿಷ್ಣು ಸಹಸ್ರನಾಮ ಪಾರಾಯಣ, ಮಂತ್ರ ಜಪ ಸಂಕಲ್ಪ, ಪುರುಷ ಸೂಕ್ತ, ಶ್ರೀಸೂಕ್ತ, ಪುಷ್ಪಾರ್ಚನೆ, ಕುಂಕುಮಾರ್ಚನೆ, ಭಜನೆ ಸೇವೆಗಳು ಜರುಗಿದವು.

ಇದೇ ಸಂದರ್ಭದಲ್ಲಿ ಶಾಸಕ ಟಿ.ಎಸ್. ಶಿವತ್ಸ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಮಹರ್ಷಿ ಶಿಕ್ಷಣ ಸಂಸ್ಥೆಯ ಭವಾನಿ ಶಂಕರ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ. ಶ್ರೀಕಂಠ ಕುಮಾರ್, ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ವಿಪ್ರ ಜಾಗೃತಿ ವೇದಿಕೆಯ ಕಾರ್ಯದರ್ಶಿ ಮುಳ್ಳೂರು ಸುರೇಶ್, ಖಜಾಂಚಿ ಮಂಜುನಾಥ್, ಉಪಾಧ್ಯಕ್ಷರಾದ ನಾಗರಾಜ್, ಸುಚೀಂದ್ರ, ಹಾಗೂ ಇನ್ನಿತರರು ಭಾಗವಹಿಸಿದ್ದರು.



ನಂಜನಗೂಡು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರದ ಹದಿನಾರು ಗ್ರಾಮದ ನೂತನ ಗ್ರಾಮ ಪಂಚಾಯಿತಿ ಕಟ್ಟಡವನ್ನು ಸಚಿವ ಡಾ.ಹೆಚ್.ಸಿ ಮಹದೇವಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಜೆರಾಲ್ಡ್ ರಾಜೇಶ್, ಡಿವೈಎಸ್ಪಿ ಗೋವಿಂದರಾಜು, ಗ್ರಾಮ ಪಂಚಾಯಿತಿ ಅಧ್ಯಕ್ಷ. ಅವಿನಾಶ್, ಉಪಾಧ್ಯಕ್ಷೆ ಮಹದೇವಮ್ಮ. ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಎಚ್ಎನ್ ನಂಜಪ್ಪ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಗುರುಮಲ್ಲಪ್ಪ. ಡಿ.ಕೆ.ಶಿವಕುಮಾರ್, ಗೌಡರ ಶಿವಣ್ಣ, ಮುದ್ದುಮಲ್ಲಪ್ಪ, ಗ್ರಾಮ ಪಂಚಾಯತಿ ಎಲ್ಲಾ ಸದಸ್ಯರು ಹಾಜರಿದ್ದರು.

ದೇಶಭಕ್ತಿಗೀತೆಗಳು ಭಾವೈಕ್ಯತೆಯನ್ನು ಇಮ್ಮಡಿಗೊಳಿಸುತ್ತವೆ

ನಿವೃತ್ತ ಕರ್ನಲ್ ರವಿ ಅಭಿಮತ



ಮೈಸೂರು, ಆ. 7– ದೇಶಭಕ್ತಿಗೀತೆಗಳನ್ನು ಕೇಳುವುದರಿಂದ ಹಾಗೂ ಹಾಡುವುದರಿಂದ ಭಾವೈಕ್ಯತೆ ಇಮ್ಮಡಿಗೊಳ್ಳುತ್ತದೆ ಎಂದು ಮಾಜಿ ಕರ್ನಲ್ ರವಿ ಹೇಳಿದ್ದಾರೆ.

ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ 'ಜೈಹಿಂದ್–ದೇಶಭಕ್ತಿಗೀತೆಗಳ ಗಾಯನ ಸ್ಪರ್ಧೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಶ ನಮ್ಮ ಹೆಮ್ಮೆ. ತ್ರಿವರ್ಣ ಧ್ವಜವು ಭಾವೈಕ್ಯತೆಯ ಸಂಕೇತ. ಮುಗಿಲೆತ್ತರದಲ್ಲಿ ಹಾರಾಡುವ ಧ್ವಜವನ್ನು ಕಂಡಾಗ ಎದೆಯುಬ್ಬಿಸಿ ವಂದಿಸುವ ಭಾವ ಪ್ರತಿ ಭಾರತೀಯರಲ್ಲೂ ಗೋಚರಿಸುತ್ತದೆ ಎಂದರು. ದೇಶ ಕಾಯುವ ಯೋಧರು ತಮ್ಮೆಲ್ಲ ಭಾವನೆಗಳನ್ನು ತಿರಂಗದಲ್ಲಿಯೇ ಕಾಣುತ್ತಾರೆ, ಒಲಂಪಿಕ್‌ನಂತಹ ಕ್ರೀಡೆಗಳಲ್ಲಿ ಗೆದ್ದಾಗ ಹೊರ ಹೊಮ್ಮುವ ರಾಷ್ಟ್ರಗೀತೆ ರೋಮಾಂಚನಗೊಳಿಸುತ್ತದೆ ಎಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಮಾಜ ಸೇವಕ ರಘುರಾಂ ವಾಜಪೇಯಿ ಮಾತನಾಡಿ, ಇಂದಿನ ಮಕ್ಕಳು ದೇಶಾಭಿಮಾನ ಮೈಗೂಡಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ. ದೇಶಭಕ್ತಿಗೀತೆ ಹೇಳುವುದರ ಜೊತೆಗೆ ಬಹುಮಾನವನ್ನೂ ಗಳಿಸಿಕೊಂಡು ಹೋಗುವುದರಿಂದ ಮಕ್ಕಳಲ್ಲಿ ಮತ್ತಷ್ಟು ದೇಶಪ್ರೇಮ ಹೆಚ್ಚುತ್ತದೆ ಎಂದರು. ನಂತರ ಶಾಲಾ ಮಕ್ಕಳು, ಮಹಿಳೆಯರು ಹಾಗು ಹಿರಿಯ ನಾಗರೀಕರು ದೇಶಭಕ್ತಿಗೀತೆಗಳನ್ನು ಪ್ರತ್ಯೇಕವಾಗಿ ಹಾಡಿದರು.

ಸಮಾರಂಭದಲ್ಲಿ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್, ಅಧ್ಯಕ್ಷ ಹೆಚ್.ಆರ್. ಸುಂದರೇಶನ್ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಸ್ಪಂದನಾ ಹೃದಯಾಘಾತದಿಂದ ನಿಧನ

ಶೌರ್ಯ ಎಂಬ ಓರ್ವ ಪುತ್ರ ನಿದ್ದಾನೆ. ಸ್ಪಂದನಾ ಅವರ ಸಹೋದರ ರಕ್ಷಿತ್ ಶಿವರಾಂ ಇತ್ತೀಚೆಗೆ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆಗ ಸ್ಪಂದನಾ ಸಹೋದರನ ಪರ ಪ್ರಚಾರ ನಡೆಸಿದ್ದರು. ಬ್ಯಾಂಕಾಕ್‌ನಲ್ಲಿ ನಿನ್ನೆ ಸಂಜೆ ಶಾಪಿಂಗ್ ಮುಗಿಸಿ ರೂಂಗೆ ಬರುವಾಗ ಈ ಘಟನೆ ನಡೆದಿದೆ. ಹೃದಯಾಘಾತಕ್ಕೆ ಒಳಗಾಗಿದ್ದ ಸ್ಪಂದನಾರನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ಪತ್ರೆಗೆ ಕರೆದೊಯ್ಯುವ ವೇಳೆಯೇ ಸಾವನ್ನಪ್ಪಿರುವುದಾಗಿ ವೈದ್ಯರು ಘೋಷಣೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ನಾಳೆ ಬೆಂಗಳೂರಿಗೆ ಸ್ಪಂದನಾ ವಿಜಯರಾಘವೇಂದ್ರ ಅವರ ಪಾರ್ಥಿವ ಶರೀರವನ್ನು ತರಲಾಗುತ್ತಿದೆ ಎಂದು ವಿಜಯ ರಾಘವೇಂದ್ರ ಅವರ ಕುಟುಂಬ ಮಾಹಿತಿ ನೀಡಿದೆ ಲೋ ಬಿಪಿಯಿಂದ ಹೃದಯಾಘಾತ ಆಗಿದೆ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ವಿಜಯರಾಘವೇಂದ್ರ ಕುಟುಂಬದವರು ಬ್ಯಾಂಕಾಕ್‌ಗೆ ತೆರಳಿದ್ದಾರೆ.

ಪ್ರೀತಿಸಿ ಮದುವೆಯಾಗಿದ್ದ ಜೋಡಿ: ವಿಜಯರಾಘವೇಂದ್ರ–ಸ್ಪಂದನಾ ಒಬ್ಬರಿಗೊಬ್ಬರು ಪ್ರೀತಿಸಿ ಮದುವೆಯಾಗಿದ್ದರು. ಮಾತ್ರವಲ್ಲ ಮದುವೆ ಬಳಿಕವೂ ಇಬ್ಬರು ಪ್ರೇಮಿಗಳಂತೆಯೇ ಇದ್ದರು. ಮೊದಲಿಗೆ ಸ್ಪಂದನಾ ಅವರ ಪರಿಚಯವಾಗಿದ್ದು, ಮಲ್ಲೇಶ್ವರಂನ ಕಾಫಿ ಡೇಯಲ್ಲಿ. ಸ್ಪಂದನಾ ಅವರನ್ನು ನೋಡುತ್ತಿದ್ದ ಹಾಗೆ ವಿಜಯ ರಾಘವೇಂದ್ರ ಅವರು ಮನಸಾರೆ ಇಷ್ಟಪಡುತ್ತಾರೆ. ಅವರನ್ನು ನೋಡಿದ ಕೂಡಲೇ ಮಾತನಾಡಲು ಶುರು ಮಾಡುತ್ತಾರೆ. ಇದಾದ ನಂತರ 2007ರಲ್ಲಿ ಮತ್ತೊಮ್ಮೆ ಶೇಷಾದ್ರಿಪುರಂನ ಕಾಫಿ ಡೇಯಲ್ಲಿ ವಿಜಯರಾಘವೇಂದ್ರ ಹಾಗೂ ಸ್ಪಂದನಾ ಭೇಟಿಯಾಗುತ್ತಾರೆ. ಎರಡನೇ ಬಾರಿ ಭೇಟಿಯಾದ ನಂತರ ಏನಾದರೂ ಮಾಡಿ ಅವರ ಬಳಿ ಪ್ರೀತಿಯನ್ನು ಹೇಳಿಕೊಳ್ಳಬೇಕು ಎಂದು ನಿರ್ಧರಿಸಿ ಕೊನೆಗೆ ಅವರ ಪ್ರೀತಿಯನ್ನು ಸ್ಪಂದನಾ ಅವರ ಬಳಿ ಹೇಳಿಕೊಳ್ಳುತ್ತಾರೆ. ವಿಜಯ ರಾಘವೇಂದ್ರ ಅವರ ಪ್ರೀತಿಯನ್ನು ಸ್ಪಂದನಾ ಕೂಡ ಒಪ್ಪಿಕೊಳ್ಳುತ್ತಾರೆ. ತದನಂತರ ವಿಜಯ ರಾಘವೇಂದ್ರ ಅವರಿಗೆ ಸ್ಪಂದನಾ, ಎಸಿಪಿ ಬಿಕೆ ಶಿವರಾಂ ಅವರ ಮಗಳು ಎಂಬುದು ತಿಳಿಯುತ್ತದೆ. ಕರ್ನಾಟಕದಲ್ಲಿ ಒಳ್ಳೆ ಹೆಸರು ಮಾಡಿದ್ದ ಅಧಿಕಾರಿ ಬಿಕೆ ಶಿವರಾಂ ಹಾಗೂ ಚನ್ನೇಗೌಡರ ನಡುವೆ ಉತ್ತಮ ಬಾಂಧವ್ಯವಿತ್ತು. ಇದೇ ಸಂದರ್ಭದಲ್ಲಿ ಇವರಿಬ್ಬರ ಮನೆಯಲ್ಲಿ ಮದುವೆಗಾಗಿ ಹುಡುಗ–ಹುಡುಗಿಯನ್ನು ಹುಡುಕುತ್ತಿದ್ದರು. ಇವರಿಬ್ಬರ ಪ್ರೀತಿ ಇಬ್ಬರ ಮನೆಯವರಿಗೂ ತಿಳಿದು ಮದುವೆಗೆ ಒಪ್ಪಿಕೊಂಡಿದ್ದರು.

ಮೈಸೂರು ಪಾಲಿಕೆಯ ವಾಣಿಜ್ಯ ಮಳಿಗೆಗಳ ಬಾಡಿಗೆ ಪರಿಷ್ಕರಣೆಗೆ ಮೀನಾಮೇಷ

ನ್ಯಾಯಯುತ ಪರಿಷ್ಕರಣೆಗೆ ಆಕ್ಷೇಪವಿಲ್ಲವೆಂದ ಬಾಡಿಗೆದಾರರು

ಮೈಸೂರು, ಆ.7(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ವಾಣಿಜ್ಯ ಮಳಿಗೆಗಳ ಬಾಡಿಗೆ ಪರಿಷ್ಕರಣೆಗೆ ನಿರ್ಣಯ ಕೈಗೊಂಡು ಎರಡು ತಿಂಗಳಾಗಿದ್ದು, ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆದಂತಿಲ್ಲ.

ಪಾಲಿಕೆ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಎರಡು ದಶಕಗಳಿಂದಾಗದ ಮಳಿಗೆ ಬಾಡಿಗೆ ಪರಿಷ್ಕರಣೆಗೆ ಜೂನ್ 9ರ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಈ ಸಂಬಂಧ ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಉತ್ತರಕ್ಕಾಗಿ ಕಾದಿರುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ. ಆದರೆ ಪಾಲಿಕೆಯ ಆರ್ಥಿಕ ವಿಚಾರವಾದ್ದರಿಂದ ಮತ್ತೊಮ್ಮೆ ಸರ್ಕಾರಕ್ಕೆ ಮನವಿ ಮಾಡಬಹುದಿತ್ತು ಎಂಬುದು ಕೆಲವು ಸದಸ್ಯರ ಅಭಿಪ್ರಾಯ.

ನಿರ್ಣಯವೇನು?: ಪಾಲಿಕೆಗೆ ಸೇರಿದ ಹಲವು ಮಳಿಗೆಗಳಿಗೆ ಇಂದಿಗೂ 30–40 ರೂ. ಮಾಸಿಕ ಬಾಡಿಗೆ ಪಾವತಿಸಲಾಗುತ್ತಿದೆ. ಹಾಗಾಗಿ ಆದಾಯ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ನಗರದ 15 ಕಡೆಗಳಲ್ಲಿರುವ ಒಟ್ಟು 1941 ಮಳಿಗೆಗಳಿಗೆ ಆಯಾಯ ಪ್ರದೇಶದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸ್ಥಿರಾಸ್ತಿ ಮಾರ್ಗಸೂಚಿ ದರ (ಎಸ್‌ಆರ್ ವ್ಯಾಲ್ಯೂ) ಆಧಾರದಲ್ಲಿ ಚದರಡಿಗೆ ಇಂತಿಷ್ಟು ಎಂದು ಪೂರ್ವಾನ್ವಯ ಬಾಡಿಗೆ ಪರಿಷ್ಕರಣೆ ಮಾಡಲು ಪಾಲಿಕೆ ಕೌನ್ಸಿಲ್‌ನಲ್ಲಿ ನಿರ್ಣಯಿಸಲಾಗಿದೆ.

5 ಕೋಟಿ ನಿರೀಕ್ಷೆ: ದೇವರಾಜ ಮಾರುಕಟ್ಟೆ, ವಿಶ್ವೇಶ್ವರಯ್ಯ ಭವನ, ಧನ್ವಂತ್ರಿ ರಸ್ತೆ, ಲ್ಯಾನ್ಸ್‌ಡೌನ್ ಕಟ್ಟಡ, ಕಾಳಿದಾಸ ರಸ್ತೆ, ಹಳೇ ಬಸ್ ನಿಲ್ದಾಣ, ಜಯಲಕ್ಷ್ಮಿಪುರಂ, ಮೇಟಗಳ್ಳಿ, ಬಿಡಾರ ಕೃಷ್ಣಪ್ಪ ರಸ್ತೆ, ಕುಂಬಾರಕೊಪ್ಪಲು, ಮಂಡಿ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆ, ಗುಜರಿ ಮಳಿಗೆಗಳ ಬಾಡಿಗೆ ಮತ್ತು ಪೆಟ್ರೋಲ್ ಬಂಕ್, ಟೆನ್ನಿಸ್ ಕೋರ್ಟ್, ಕ್ಷೀರಕೇಂದ್ರ, ಮೀನು ಮಳಿಗೆಗಳ ನೆಲ ಬಾಡಿಗೆ ಪರಿಷ್ಕರಣೆಯಾಗಿ 18 ವರ್ಷ ವಾಗಿದೆ. ಹಳೆ ಬಾಡಿಗೆಯಿಂದ ಕೇವಲ 1.60 ಕೋಟಿ ರೂ. ಬಾಡಿಗೆ ಸಂಗ್ರಹವಾಗುತ್ತಿದ್ದು, ಪರಿಷ್ಕರಣೆ ಮಾಡಿದರೆ ಸುಮಾರು 5 ಕೋಟಿ ಆದಾಯ ನಿರೀಕ್ಷಿಸಲಾಗಿದೆ.



ಪರಿಷ್ಕರಣೆಗೆ ಆದ್ಯತೆ: ದೇವರಾಜ ಮಾರುಕಟ್ಟೆಯಲ್ಲಿ ಮೂಲ ಬಾಡಿಗೆದಾರರಿಲ್ಲ. ಲೀಸ್ ಹಾಗೂ ಸಬ್‌ಲೀಸ್ ಪಡೆದು ವ್ಯಾಪಾರ ಮಾಡುವವರೇ ಹೆಚ್ಚಿದ್ದಾರೆ. ಹಾಗಾಗಿ ಬಾಡಿಗೆದಾರರನ್ನು ಖಾಲಿ ಮಾಡಿಸಿ, ಬಾಡಿಗೆ ಪರಿಷ್ಕರಣೆಯೊಂದಿಗೆ ಮಳಿಗೆಗಳನ್ನು ಹೊಸದಾಗಿ ಹಂಚಿಕೆ ಮಾಡಬೇಕು ಎಂಬುದು ಹಲವು ಸದಸ್ಯರ ಆಗ್ರಹ. ಆದರೆ ಮಳಿಗೆದಾರರ ಖಾಲಿ ಮಾಡಿಸಲು ನೋಟಿಸ್ ನೀಡಿದ್ದರಿಂದ ಹಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಈಗಲೂ ಮೂಲ ಬಾಡಿಗೆದಾರರ ಹೆಸರಲ್ಲೇ ವ್ಯವಹರಿಸುತ್ತಿರುವ ಹಿನ್ನೆಲೆಯಲ್ಲಿ ಸದ್ಯ ಬಾಡಿಗೆ ಪರಿಷ್ಕರಣೆ ಮಾಡಿದರೆ ಆದಾಯ ಹೆಚ್ಚುತ್ತದೆ. ಮತ್ತೊಂದೆಡೆ ಮೂಲ ಮಳಿಗೆದಾರರಲ್ಲದವರನ್ನು ಖಾಲಿ ಮಾಡಿಸುವ ಪ್ರಯತ್ನವನ್ನೂ ಮುಂದುವರೆಸಬಹುದು ಎನ್ನುವುದು ಪಾಲಿಕೆ ಲೆಕ್ಕಾಚಾರವಾಗಿದೆ.

ತಿಳುವಳಿಕೆ ಪತ್ರ ತಲುಪಿಲ್ಲ: ಮಳಿಗೆ ಬಾಡಿಗೆ ಪರಿಷ್ಕರಣೆ ಸಂಬಂಧ ಕೌನ್ಸಿಲ್‌ನಲ್ಲಿ ನಿರ್ಣಯ ಕೈಗೊಂಡಿರುವುದಾಗಿ ತಿಳಿಯಿತು. ಆದರೆ ಈವರೆಗೆ ಮಳಿಗೆದಾರರಿಗೆ ಯಾವುದೇ ತಿಳುವಳಿಕೆ ಪತ್ರ ಜಾರಿ ಮಾಡಿಲ್ಲ. ಆದರೆ ಎಸ್‌ಆರ್ ವ್ಯಾಲ್ಯೂ ಆಧಾರದಲ್ಲಿ ಬಾಡಿಗೆ ಪರಿಷ್ಕರಣೆ ಮಾಡುವುದಾಗಿ ತಿಳಿಸಿದ್ದಾರೆ. ಹಾಗಾದರೆ ದೇವರಾಜ ಮಾರುಕಟ್ಟೆಯ ರಸ್ತೆ ಭಾಗದ ಮಳಿಗೆಗಳಿಗೆ 30–40 ಸಾವಿರ ಹಾಗೂ ಒಳಭಾಗದ ಮಳಿಗೆಗಳಿಗೆ 15–20 ಸಾವಿರ ಬಾಡಿಗೆ ಆಗಬಹುದು. ಆ ಪ್ರಮಾಣದ ಬಾಡಿಗೆ ಪಾವತಿಸಲು ಖಂಡಿತವಾಗಿ ಯಾರಿಂದಲೂ ಸಾಧ್ಯವಾಗುವುದಿಲ್ಲ ಎಂದು ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಮಹದೇವ್ ತಿಳಿಸಿದ್ದಾರೆ.

ಎರಡು ದಶಕಗಳಿಂದ ಬಾಡಿಗೆ ಪರಿಷ್ಕರಣೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಕಾಲಕಾಲಕ್ಕೆ ಪರಿಷ್ಕರಣೆ ಮಾಡುವುದು ಪಾಲಿಕೆಯ ಕರ್ತವ್ಯ. ಈಗ ಏಕಾಏಕಿ ಹೆಚ್ಚಿಸಿದರೆ ವ್ಯಾಪಾರಿಗಳಿಗೆ ಹೊರೆಯಾಗುತ್ತದೆ. ವ್ಯಾಪಾರಿಗಳು ಯಾವ ವೃತ್ತಿ ನಡೆಸುತ್ತಿದ್ದಾರೆ, ಅವರ ಆದಾಯ ಎಷ್ಟು, ಬಾಡಿಗೆದಾರರಿಗೆ ಯಾವ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ, ಕಟ್ಟಡ ಯಾವ ಸ್ಥಿತಿಯಲ್ಲಿದೆ, ಕಾಲಕಾಲಕ್ಕೆ ದುರಸ್ತಿ ಮಾಡಿದ್ದೀರಾ, ಬಾಡಿಗೆ ಪರಿಷ್ಕರಣೆ ನಂತರವಾದರೂ ದುರಸ್ತಿ ಮಾಡಲಾಗುವುದೇ ಇದೆಲ್ಲದರ ಬಗ್ಗೆ ಚರ್ಚೆ ಮಾಡಿ, ಉಭಯತ್ರರುರ ಒಪ್ಪಿಗೆಯೊಂದಿಗೆ ನಿರ್ಧಾರಕ್ಕೆ ಬರಬೇಕು. ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡರೆ ನಾವು ಕಾನೂನಿನ ಚೌಕಟ್ಟಿನಲ್ಲಿ ಹೋರಾಟ ಮುಂದುವರೆಸುವುದು ಅನಿವಾರ್ಯವಾಗುತ್ತದೆ ಎಂದು ಹೇಳಿದ್ದಾರೆ.

ನ್ಯಾಯಯುತವಾಗಿದ್ದರೆ ಸ್ವಾಗತ: ದೇವರಾಜ ಮಾರುಕಟ್ಟೆಯಲ್ಲಿ ಮಾಸಿಕ ಬಾಡಿಗೆ ನಿಗದಿಯಾಗಿರುವ 822 ಹಾಗೂ ದಿನವಹಿ ಶುಲ್ಕ ಸಂಗ್ರಹಿಸುವ 300 ಮಳಿಗೆಗಳಿವೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬಾಡಿಗೆದಾರರಿಗೆ ಹೊರೆಯಾಗದಂತೆ, ಹಾಗೂ ಪಾಲಿಕೆಗೂ ನಷ್ಟವಾಗದಂತೆ ಬಾಡಿಗೆ ಪರಿಷ್ಕರಣೆ ಮಾಡಬೇಕು. ಬಾಡಿಗೆ ಪರಿಷ್ಕರಣೆಗೆ ಯಾರ ವಿರೋಧವೂ ಇಲ್ಲ. ಆದರೆ ಅದು ನ್ಯಾಯಯುತವಾಗಿರಬೇಕು. ಯಾರಿಗೂ ಹೊರೆಯಾಗಬಾರದು ಎಂದು ತಿಳಿಸಿದ್ದಾರೆ.

ಬಳ್ಳಾರಿಯಲ್ಲಿ ಕೆಕೆಆರ್ ಟಿಸಿ ಭದ್ರತಾ ಇನ್ಸ್‌ಪೆಕ್ಟರ್ ತಲೆಗೆ ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ!

ಬಳ್ಳಾರಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ಭದ್ರತಾ ಇನ್ಸ್‌ಪೆಕ್ಟರ್ ಹುಸೇನಪ್ಪ ಅವರನ್ನು ಭಾನುವಾರ ರಾತ್ರಿ ದುಷ್ಕರ್ಮಿಗಳು ಭೀಕರವಾಗಿ ಹತ್ಯೆ ಮಾಡಿದ್ದಾರೆ.

ಹುಸೇನಪ್ಪ ರಾತ್ರಿ 8–30ರ ಸುಮಾರಿಗೆ ಬೀದರ್‌ಗೆ ಹೊರಡಲು ಬ್ಯಾಗ್ ತೆಗೆದುಕೊಂಡು ಸ್ಕೂಟಿಯಲ್ಲಿ ಮನೆಯಿಂದ ಹೊರಟ್ಟಿದ್ದಾಗ ಬೈಕ್‌ನಲ್ಲಿ ಬಂದ ಅಪರಿಚಿತರು ಅವರ ತಲೆಗೆ ಮಾರಕಾಸ್ತಗಳಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ಕೆಕೆಆರ್ ಟಿಸಿ ಮೂಲಗಳು ತಿಳಿಸಿವೆ.

ಬೀದರ್‌ನಲ್ಲಿ ನಡೆಯುತ್ತಿರುವ ಚಾಲಕರ ನೇಮಕಾತಿ ಪರೀಕ್ಷೆಗೆ ಅವರನ್ನು ನಿಯೋಜಿಸಲಾಗಿತ್ತು. ಮನೆಯಿಂದ ಕೂಗಳತೆ ದೂರದಲ್ಲಿಯೇ ಹತ್ಯೆ ನಡೆದಿದೆ. ಹುಸೇನಪ್ಪ ಕಿರುಚಾಟಕ್ಕೆ ಮನೆಯವರು ಹೊರಗೆ ಬಂದಿದ್ದಾರೆ. ಆ ವೇಳೆಗೆ ಆರೋಪಿಗಳು ಬೈಕ್‌ನಲ್ಲಿ ಪರಾರಿಯಾಗಿದ್ದಾರೆ. ಹುಸೇನಪ್ಪ ಇಬ್ಬರು ಗಂಡು ಮಕ್ಕಳು, ಓರ್ವ ಪುತ್ರಿಯನ್ನು ಅಗಲಿದ್ದಾರೆ ಕೊಲೆಗೆ ಕಾರಣ ತಿಳಿದು ಬಂದಿಲ್ಲ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ. ಈ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

ದೇವರಾಜ ಬಾಲಕಿಯರ ಪಿಯು ಕಾಲೇಜಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಆ.7–ಉತ್ತಮ ಆರೋಗ್ಯ ಅಭಿವೃದ್ಧಿಗೆ ರಹದಾರಿಯಾಗಿದೆ. ಆರೋಗ್ಯವೇ ಭಾಗ್ಯ ಎಂಬ ತತ್ವದಡಿಯಲ್ಲಿ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ, ಚಿಕಿತ್ಸೆ ಒದಗಿಸುವುದು ಶಿಬಿರದ ಉದ್ದೇಶವಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್ ಹೇಳಿದರು.

ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನೇತೃತ್ವದಲ್ಲಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದೊಂದಿಗೆ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆ ಸಿಬ್ಬಂದಿ, ಪೌರ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ 200ಕ್ಕೂ ಹೆಚ್ಚು ಮಂದಿ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಆಸ್ಪತ್ರೆಯ ಎಂ.ಆರ್.ಸುದರ್ಶನ್, ಡಾ. ಶ್ವೇತ ಶ್ರೀ, ನರ್ಸ್‌ಗಳಾದ ಕಲಾ, ರಮ್ಯಾ, ಟೆಕ್ನಿಷಿಯನ್ ಶಿರಿನ್ ಹಾಗೂ ಚಾಲಕರಾದ ಪ್ರಜ್ವಲ್ ಮತ್ತು 23ನೇ ವಾರ್ಡಿನ ನಗರ ಪಾಲಿಕೆಯ ಹೆಲ್ತ್ ಸೂಪರ್‌ವೈಸರ್ ನಂಜುಂಡಸ್ವಾಮಿ, ಪೌರಕಾರ್ಮಿಕರು ಮತ್ತು ವಾರ್ಡಿನ ಬಿಜೆಪಿ ಮುಖಂಡರಾದ ಭರತ್, ಆರ್. ಪರಮೇಶ, ಸುರೇಂದ್ರ, ಶ್ರೀನಿವಾಸ್, ಸಚಿನ್, ವಿಜ್ಞೇಶ್ವರ ಭಟ್, ಗೋಪಿ, ರಾಜಣ್ಣ ಪ್ರವೀಣ್, ಚರಣ್, ಲಕ್ಷ್ಮಿ, ಪಾಪಣ್ಣ ಗಣೇಶ್, ವಿಜಯಾನಂದ, ವಿನೋದ್, ಪ್ರಮೋದ್, ಸುಕನ್ಯಾ, ಚಂದ್ರಕಲಾ, ಜ್ಯೋತಿ, ರವಿ ಮುಂತಾದವರು ಉಪಸ್ಥಿತರಿದ್ದರು.

ಸ್ವಂತ ಕಟ್ಟಡಕ್ಕೆ ಪಾಲಿಕೆ ಒಂದನೇ ವಲಯ ಕಚೇರಿ ಸ್ಥಳಾಂತರ



ಮೈಸೂರು, ಆ.7(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆಯ ಒಂದನೇ ವಲಯ ಕಚೇರಿ, ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. ಈವರೆಗೆ ತ್ಯಾಗರಾಜ ರಸ್ತೆ, 5ನೇ ಕ್ರಾಸ್, ಅಕ್ಕನ ಬಳಗ ಶಾಲೆಯ ಪಕ್ಕದ ಉದ್ಯಾನದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಾಲಿಕೆಯ ವಲಯ ಕಛೇರಿ–1, ಸೋಮವಾರದಿಂದ ಉತ್ತರಾಧಿ ಮಠದ ರಸ್ತೆ, 5ನೇ ಕ್ರಾಸ್‌ನಲ್ಲಿರುವ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ.

ವಾರ್ಡ್ ನಂ. 49, 50, 51, 52, 54, 55, 61ನೇ ವಾರ್ಡ್‌ನ ಸಾರ್ವಜನಿಕರು ಇಲ್ಲಿಯೇ ವ್ಯವಹರಿಸುವಂತೆ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ತಿಳಿಸಿದ್ದಾರೆ. ನೂತನ ಕಟ್ಟಡದಲ್ಲಿ ವಲಯ ಮಟ್ಟದ ಇಂಜಿನಿಯರಿಂಗ್ ವಿಭಾಗ, ಕಂದಾಯ ವಿಭಾಗ, ಪರಿಸರ ಮತ್ತು ಆರೋಗ್ಯ ವಿಭಾಗ, ಜನನ ಮತ್ತು ಮರಣ ನೋಂದಣಿ ವಿಭಾಗ, ಕಂದಾಯ ಮತ್ತು ನೀರಿನ ಬಿಲ್ ಪಾವತಿ ಕೇಂದ್ರಗಳು ಕಾರ್ಯನಿರ್ವಹಿಸಲಿವೆ. ಮುಂದಿನ ದಿನಗಳಲ್ಲಿ ವಿದ್ಯುತ್ ಬಿಲ್ ಪಾವತಿ ಕೇಂದ್ರವನ್ನೂ ಆರಂಭಿಸುವ ಪ್ರಯತ್ನ ನಡೆದಿದೆ ಎಂದಿದ್ದಾರೆ.

ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ವಲಯ ಕಛೇರಿ–1ರ ಜಾಗದಲ್ಲಿ 40 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದು ಗುತ್ತಿಗೆದಾರನಿಗೆ ಕಾರ್ಯಾದೇಶ ಪತ್ರ ನೀಡಲಾಗಿದೆ. ಸದ್ಯದಲ್ಲೇ ಉದ್ಯಾನ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಹಳೇನಾಡು ಸ್ಮಾರ್ಥ ಬ್ರಾಹ್ಮಣ ಯುವ ವೇದಿಕೆ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಆ. 7– ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರದಲ್ಲಿ ಹಳೇನಾಡು ಸ್ಮಾರ್ಥ ಬ್ರಾಹ್ಮಣ ಯುವ ವೇದಿಕೆ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.



ನಂಜನಗೂಡು ಬ್ರಾಹ್ಮಣ ಧರ್ಮ ಸಹಾಯ ಸಭಾ ಅಧ್ಯಕ ಆರ್. ಗೋವರ್ಧನ್ ಮಾತನಾಡಿ, ಬ್ರಾಹ್ಮಣ ಸಮುದಾಯದಲ್ಲಿ ಹಳೇನಾಡು ಸ್ಮಾರ್ಥ ಬ್ರಾಹ್ಮಣರ ಜನಸಂಖ್ಯೆ 20ಸಾವಿರಕ್ಕೂ ಹೆಚ್ಚು ಮಂದಿ ಇದ್ದೇವೆ. ಶೈಕ್ಷಣಿಕ, ವೈದ್ಯಕೀಯ, ಉದ್ಯೋಗ, ಸಾಂಸ್ಕೃತಿಕ, ಧಾರ್ಮಿಕ, ಸಹಕಾರಿ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಸಮುದಾಯದ ಮಂದಿಗೆ ನೆರವಾಗಲು ಸ್ಥಾಪಿತವಾಗಿರುವ ಯುವಕರ ತಂಡ ಶ್ಲಾಘನೀಯವಾದುದು, ಮುಂದಿನ ದಿನದಲ್ಲಿ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಕುಟುಂಬಕ್ಕೆ ನೆರವಾಗಿ ಮುಖ್ಯವಾಹಿನಿಗೆ ತರಲು ಯೋಜನೆ ರೂಪಿಸಲಾಗುವುದು ಎಂದರು. ನಂಜನಗೂಡು ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗೋಪಾಲ್ ರಾವ್ ಮಾತನಾಡಿ, ಹಳೇನಾಡು ಸ್ಮಾರ್ಥ ಬ್ರಾಹ್ಮಣರಿಗೆ ಹಳೇ ಮೈಸೂರು ಭಾಗದಲ್ಲಿ 500 ವರ್ಷಗಳ ಇತಿಹಾಸವಿದೆ. ಶೃಂಗೇರಿ ಶಂಕರ ಮಠದ ಧಾರ್ಮಿಕ ಆಚರಣೆಯನ್ನು ಪಾಲಿಸುತ್ತಿದ್ದು, ಮೈಸೂರು, ಕೆ.ಆರ್.ನಗರ, ನಂಜನಗೂಡು ಮುಳ್ಳೂರು ಸೇರಿದಂತೆ ಸಮುದಾಯದ ಜನಸಂಖ್ಯೆ ಹೆಚ್ಚಿದ್ದು ಮನೆಗೊಬ್ಬರೊಂತೆ ಹಳೇನಾಡು ಸ್ಮಾರ್ಥ ಬ್ರಾಹ್ಮಣರು ಸಂಘಟನಾತ್ಮಕವಾಗಿ ಮುಂದೆ ಬರಬೇಕು ಎಂದರು. ಹಳೇನಾಡು ಸ್ಮಾರ್ಥ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಮುಳ್ಳೂರು ಗುರುಪ್ರಸಾದ್ ಮಾತನಾಡಿ, ಸಮಾಜದ ಸಂಘಟನೆ ಎಂದರೆ ಒಂದು ಕಛೇರಿಗೆ ಮೂರ್ನಾಲ್ಕು ಜನರಿಗೆ ಅದು ಸೀಮಿತಗೊಳಿಸಬಾರದು, ಸುಮುದಾಯದ ಕಟ್ಟಕಡೆಯ ವ್ಯಕ್ತಿಯನ್ನು ಕರೆತಂದು ಸಂಘಟಿಸಬೇಕು, ಮುಂದಿನ ದಿನದಲ್ಲಿ ಉಪನಯನ, ಉಪಾಕರ್ಮ, ವಧು ವರರ ಸಮಾನ್ವೇಷಣೆ, ವೈದಿಕ ಕಾರ್ಯಕ್ರಮಗಳಿಗೆ ವಿಪ್ರ ಯುವ ಸಮಿತಿ ರಚಿಸಲಾಗುವುದು ಎಂದರು.

ಹಳೇನಾಡು ಸ್ಮಾರ್ಥ ಬ್ರಾಹ್ಮಣ ಯುವ ವೇದಿಕೆ ನೂತನ ಅಧ್ಯಕ್ಷ ಮುಳ್ಳೂರು ಗುರುಪ್ರಸಾದ್, ಉಪಾಧ್ಯಕ್ಷ ಶಶಾಂಕ್ ಎಸ್, ಖಜಾಂಚಿ ರಾಘವೇಂದ್ರ ಪಿ, ಪ್ರಧಾನ ಕಾರ್ಯದರ್ಶಿ ಭರತ್ ಜಿ, ಸಹ ಕಾರ್ಯದರ್ಶಿ ಅಜಿತ್ ಕುಮಾರ್ ಆರ್, ಸಂಜಯ್ ಭಾರದ್ವಾಜ್, ನಿರ್ದೇಶಕರಾದ ವಿವೇಕ್ ಎ, ಮುಖಂಡರಾದ ಶ್ರೀಪತಿ ಎಂಎಸ್, ಗಿರೀಶ್ ಎಂಎನ್, ಆನಂದರಾಮು, ಬಾಲಕುಮಾರ್, ಗೋವಿಂದರಾಜನ್, ನೋಟರಿ ಸಂಗಮೇಶ್ವರನ್ ಇನ್ನಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯೋತ್ಸವ ಅಂಗವಾಗಿ ಶಾಲಾ ಮಕ್ಕಳಿಗೆ ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯ ಬಗ್ಗೆ ಜಾಗೃತಿ

ಮೈಸೂರು, ಆ.7–ವಿಚಾರ ವಿನಮಯ ವೇದಿಕೆಯ ವತಿಯಿಂದ ಕನಕಗಿರಿಯಲ್ಲಿರುವ ಶಾರದಾ ವಿಲಾಸ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ ಅಂಗವಾಗಿ ಶಾಲಾ ಮಕ್ಕಳಿಗೆ ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯ ಬಗ್ಗೆ ಜಾಗೃತಿ ಕಾರ್ಯಕ್ರಮವು ಆ.8 ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ವಿಚಾರ ವಿನಮಯ ವೇದಿಕೆಯ ಅಧ್ಯಕ್ಷ ಪುರುಷೋತ್ತಮ್ ತಿಳಿಸಿದ್ದಾರೆ

ಮುಖ್ಯ ಅತಿಥಿಗಳಾಗಿ ಶಾಸಕರಾದ ಟಿ.ಎಸ್. ಶ್ರೀವತ್ಸ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಶಾಲೆಯ ಮುಖ್ಯ ಶಿಕ್ಷಕರಾದ ಉಷಾ ಮತ್ತು ಜಯಲಕ್ಷ್ಮಿ ಹಾಗೂ ಉದ್ಯಮಿ ಅಪೂರ್ವ ಸುರೇಶ್ ಹಾಗೂ ಜಯರಾಮ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಭಾರತೀಯರು ಒಗ್ಗಟ್ಟಾಗಿ ನಿಲ್ಲಬೇಕಿದೆ

ಮೈಸೂರು, ಆ. 7– ಮಣಿಪುರ ಹಿಂಸಾಚಾರ ಕುರಿತು ನೈಜ ವಿಚಾರ ಅನಾವರಣ ಕಾರ್ಯಕ್ರಮವನ್ನು ವೀರ ಸಾವರ್ಕರ್ ಯುವ ಬಳಗದಿಂದ ನಗರದ ಕೃಷ್ಣವಿಲಾಸ ರಸ್ತೆಯ ಐಡಿಯಲ್ ಜಾವಾ ರೋಟರಿ ಶಾಲೆಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಮಣಿಪುರ ಭಾಗದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಯೋಧ ಎಂ.ಎಸ್.ಸುಬ್ರಮಣಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿ, ಮಣಿಪುರದಲ್ಲಿ ಯುವ ಜನತೆಯನ್ನು ಮಾದಕ ದ್ರವ್ಯದ ವ್ಯಸನಿಗಳಾಗಿಸುವ ಕುತಂತ್ರ ನಡೆಯುತ್ತಿದೆ. ಇದರ ವಿರುದ್ಧ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಸಾವಿರಾರು ಎಕರೆ ಗಾಂಜಾ ನಾಶ ಮಾಡಿದೆ, ಜೊತೆಗೆ ಅಲ್ಲಿನ ಜನರನ್ನು ಸೈನ್ಯದ ವಿರುದ್ಧ ಎತ್ತಿ ಕಟ್ಟಲಾಗುತ್ತಿದೆ. ಇದರ ಜೊತೆಗೆ ಮಯನ್ಮಾರ್‌ನಿಂದ ನುಸುಳಿರುವ ವಲಸಿಗರ ಸಂಖ್ಯೆ ಸಹ ಗಣನೀಯವಾಗಿ ಏರಿದೆ. ಇದನ್ನು ಜನತೆ ಅರಿಯಬೇಕಿದೆ ಎಂದರು. ವಿಧಾನ ಪರಿಷತ್ ಮಾಜಿ ಸದಸ್ಯರು ಹಾಗೂ ನಿವೃತ್ತ ಯೋಧ ಕ್ಯಾಪ್ಟನ್ ಗಣೇಶ್ ಕಾರ್ಮಿಕ ಮಾತನಾಡಿ, 1901ರಿಂದ 2011ರವರೆಗಿನ ಮಣಿಪುರದಲ್ಲಿ ಮೈಟಿ ಜನಾಂಗ, ನಾಗ ಹಾಗೂ ಕುಕಿ ಜನಾಂಗಗಳ ಅಂಕಿ–ಅಂಶ ನೀಡಿದರು, ನ್ಯಾಯಾಲಯದ ಆದೇಶದಂತೆ ಮೈಟಿ ಜನಾಂಗಕ್ಕೆ ಮೀಸಲಾತಿ ನೀಡುವ ವಿಚಾರ ಈಗ ಹಿಂಸಾಚಾರ ರೂಪ ಪಡೆದಿದೆ. ಭಾರತೀಯ ಸೈನ್ಯ ಅಲ್ಲಿ ತೆರಳದಂತೆ ರಸ್ತೆಗಳನ್ನು ಅಗೆದು ಹಾಕಲಾಗುತ್ತಿದೆ, ಸೈನಿಕರನ್ನು ಕೊಂದು ಶಸ್ತ್ರಾಸ್ತ್ರ ಅಪಹರಿಸಲಾಗುತ್ತಿದೆ. ಈ ಕಾರಣದಿಂದ ಹಿಂಸಾಚಾರ ನಿಯಂತ್ರಣಕ್ಕೆ ತಡವಾಯಿತು ಎಂದರು. ಮಣಿಪುರದಲ್ಲಿ ಸೈನಿಕರ ವಿರುದ್ಧ ಪ್ರತಿಭಟನೆ ಹೆಸರಿನಲ್ಲಿ ಕೆಲ ಮಹಿಳೆಯರು ವಿವಸ್ತ್ರವಾಗಿ ನಿಲ್ಲುತ್ತಾರೆ. ಅದನ್ನು ಯಾರೂ ಖಂಡಿಸುತ್ತಿಲ್ಲ, ಮೈಟಿ ಮಹಿಳೆಯರ ಮೇಲಾದ ಅತ್ಯಾಚಾರ ಖಂಡಿಸುತ್ತಿಲ್ಲ. ಅನ್ಯಾಯ, ಅಕ್ರಮಗಳ ವಿರುದ್ಧ ಖಂಡನೆ ಹಾಗೂ ಪ್ರತಿಭಟನೆ ವ್ಯಕ್ತಪಡಿಸಲು ಸಹ ಜಾತಿ–ಮತ ನೋಡುವ ಕೆಟ್ಟ ಮನೋಭಾವನೆ ಅನೇಕರಲ್ಲಿ ಬೆಳೆಯುತ್ತಿದೆ. ಇದರಿಂದ ಜನ ಹೊರ ಬರಬೇಕಿದೆ. ನರೇಂದ್ರ ಮೋದಿ ಅವರ ಸರ್ಕಾರ ಗಲಭೆ ಹತ್ತಿಕ್ಕಲು ಸರ್ವ ಪ್ರಯತ್ನ ಮಾಡಿದೆ, ಮೋದಿಯವರು ಹೇಳುವಂತೆ ಅವರಿಗೆ ದೇಶವೇ ಮೊದಲು, ಅವರ ನಡೆ ಸಹ ಎಂದಿಗೂ ದೇಶದ ಪರವಾಗಿಯೇ ಇರುತ್ತದೆ. ಅದನ್ನು ನಾನು ಶೇ100ರಷ್ಟು ಒಪ್ಪುತ್ತೇನೆ. ಈ ಸಲುವಾಗಿಯ ಅವರು ಸೈನ್ಯಕ್ಕೆ ಬೇಕಾದ ಗಡಿ ಪ್ರದೇಶಗಳಲ್ಲೆಲ್ಲ ಉತ್ತಮ ರಸ್ತೆಗಳನ್ನು ನಿರ್ಮಿಸುತ್ತಿದ್ದಾರೆ. ಉತ್ತಮ ಶಸ್ತ್ರಾಸ್ತ್ರಗಳನ್ನು ದೇಶದಲ್ಲಿ ಉತ್ಪಾದಿಸಲು ಪ್ರಾಶಸ್ತ್ಯ ನೀಡುತ್ತಿದ್ದಾರೆ. ಅವರ ಬದ್ಧತೆ ಮೇಲೆ ಅನುಮಾನ ಪಡುವ ಬದಲು ಹೆಚ್ಚಿನ ರೀತಿ ಬೆಂಬಲಿಸಿ ಎಂದು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಪ್ರಶಾಂತ್ ಗೌಡರವರು ಅತಿಥಿಯಾಗಿ ಭಾಗವಹಿಸಿದ್ದರು, ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷರಾದ ರಾಕೇಶ್ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪಾಧ್ಯಕ್ಷ ಸಂದೇಶ ಪವಾರ್, ಕಾರ್ಯದರ್ಶಿ ದೀಪಕ್, ಸದಸ್ಯರಾದ ಜಯಸಿಂಹ, ವಿಕ್ರಂ ಅಯ್ಯಂಗಾರ್, ಟಿ.ಎಸ್. ಅರುಣ್, ಅಜಯ್ ಶಾಸ್ತ್ರಿ, ಚಂದನ್ ಗೌಡ, ಉಮೇಶ್ ಹರೀಶ್ ಗೌಡ, ಸ್ಕಂದ ಗುರು ಕಾರ್ಯಕ್ರಮವನ್ನು ಆಯೋಜಿಸಿದ್ದರು. ಸ್ಥಳೀಯ ಮುಖಂಡರಾದ ಪರಮೇಶ್ ಗೌಡ, ಪ್ರಮೋದ್ ಗೌಡ, ಸುರೇಂದ್ರ ಸೇರಿದಂತೆ ಇತರರು ಭಾಗವಹಿಸಿದ್ದರು.

ಗ್ಯಾರಂಟಿ ಯೋಜನೆ ಜಾರಿಗೊಳಿಸಿದ ಏಕೈಕ ರಾಜ್ಯ ಕರ್ನಾಟಕ

ಪಶುಸಂಗೋಪನೆ, ರೇಷ್ಮೆ ಸಚಿವ ಕೆ.ವೆಂಕಟೇಶ್



ಕಂಪಲಾಪುರ, ಆ.7– ಚುನಾವಣಾ ಪೂರ್ವ ಜನತೆಗೆ ಕೊಟ್ಟ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಅನುಷ್ಠಾನಕ್ಕೆ ತಂದಿದ್ದು, ಗ್ಯಾರಂಟಿ ಯೋಜನೆ ಜಾರಿಗೊಳಿಸಿದ ಏಕೈಕ ರಾಜ್ಯ ಕರ್ನಾಟಕ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಇಲ್ಲಿನ ಗ್ರಾಪಂ ಆವರಣದಲ್ಲಿ ಸೋಮವಾರ ಸಾರ್ವಜನಿಕರ ಕುಂದುಕೊರತೆ ಆಲಿಸಿ ಮಾತನಾಡಿದ ಅವರು, ರಾಜ್ಯದ ದೀನ ದಲಿತರ, ಬಡವರ ಉದ್ಧಾರ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ನಮ್ಮ ಗ್ಯಾರಂಟಿಗಳನ್ನು ಮೆಚ್ಚಿ ರಾಜ್ಯದ ಜನ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ನೀಡಿದ್ದಾರೆ. ಅದೇ ರೀತಿ ನಾವೂ ನುಡಿದಂತೆ ನಡೆಯುತ್ತಿದ್ದೇವೆ ಎಂದರು.

ಶಕ್ತಿ ಯೋಜನೆಯಡಿ ಈಗಾಗಲೇ ರಾಜ್ಯದ ಕೋಟ್ಯಾಂತರ ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸೇರಿ ಪ್ರತಿಯೊಬ್ಬರಿಗೂ ತಲಾ 10 ಕೆಜಿ ಅಕ್ಕಿ ನೀಡಬೇಕಿದೆ. ಆದರೆ ಮೊದಲು ಕೇಂದ್ರ ಸರ್ಕಾರ ಅಕ್ಕಿ ಕೊಡಲು ಒಪ್ಪಿ ಆನಂತರ ಕೊಡಲು ಆಗಲ್ಲ ಎಂದಿತ್ತು. ನಿಮಗೆ ಕೊಟ್ಟ ಮಾತು ತಪ್ಪಬಾರದು ಎಂಬ ಕಾರಣಕ್ಕೆ ಅಕ್ಕಿ ಶೇಖರಣೆಯಾಗುವವರೆಗೆ ಪ್ರತಿ ಕಾರ್ಡ್‌ದಾರರಿಗೆ ಕೆಜಿಗೆ 34 ರೂ.ರಂತೆ ನೇರವಾಗಿ ಅವರ ಖಾತೆಗೆ ಹಣ ಜಮಾ ಮಾಡುತ್ತಿದ್ದೇವೆ. ನಾವು ಜಾರಿಗೆ ತಂದಿರುವ ಯೋಜನೆಗಳನ್ನು ತಡೆಯುವುದೇ ಬಿಜೆಪಿ ದುರುದ್ದೇಶವಾಗಿದೆ ಎಂದ ಅವರು ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡಲಾಗಿದೆ. ಯಾರೂ ಸಹ ವಿದ್ಯುತ್ ಬಿಲ್ ಬಾಕಿ ಇಟ್ಟುಕೊಳ್ಳಬಾರದು. ಬಾಕಿ ಇಲ್ಲದವರು ಜುಲೈನಿಂದ ಈ ಯೋಜನೆ ಫಲಾನುಭವಿಯಾಗಿರುತ್ತಾರೆ. ಇನ್ನು ಗೃಹಲಕ್ಷ್ಮಿ ಯೋಜನೆಗೆ ಆ.15 ರಂದು ಚಾಲನೆ ನೀಡಲಾಗುವುದು. ಆ ಮನೆ ಯಜಮಾನಿಗೆ ತಿಂಗಳಿಗೆ 2 ಸಾವಿರ ರೂ.ಗಳನ್ನು ಅವರ ಖಾತೆಗೆ ಜಮಾ ಮಾಡಲಾಗುವುದು. ನಾವು ಜಾರಿಗೆ ತಂದಿರುವ ಯೋಜನೆಗಳನ್ನು ಕೇವಲ ಕಾಂಗ್ರೆಸ್ ಪಕ್ಷದವರು ಪಡೆಯುತ್ತಿಲ್ಲ. ಬದಲಿಗೆ ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷದವರೂ ಪಡೆಯು ತ್ತಿದ್ದಾರೆ. ಇದನ್ನು ಮನಗಂಡು ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಎಂದು ಮನವಿ ಮಾಡಿದರು.

ಕಂಪಲಾಪುರ ದೊಡ್ಡಗ್ರಾಮ. ಜೊತೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಇಲ್ಲಿನ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇನೆ ಎಂದರು.

ಇದೇ ವೇಳೆ ಗ್ರಾಮಕ್ಕೆ ಅಗತ್ಯವಿರುವ ಪಿಯು ಕಾಲೇಜು, ಅಂಬೇಡ್ಕರ್ ಭವನ, ಸರ್ಕಾರಿ ಪ್ರೌಢಶಾಲೆ, ಆಸ್ಪತ್ರೆ ಹಾಗೂ ಗ್ರಾಪಂ ಮುಂಭಾಗ ಒಟ್ಟು 3 ಹೈಮಾಸ್ಕ್ ಲೈಟ್‌ಗಳು, ಸಿಸಿ ರಸ್ತೆ, ಒಳಚರಂಡಿ ಕಾಮಗಾರಿ, ಬಸ್ ಸೌಲಭ್ಯ ಹೀಗೆ ಹತ್ತಾರು ಬೇಡಿಕೆಗಳನ್ನು ಗ್ರಾಮದ ಮುಖಂಡರು ಸಚಿವರ ಮುಂದಿಟ್ಟರು.

ಈ ಸಂದರ್ಭ ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಇಓ ಸುನೀಲ್ ಕುಮಾರ್, ಉಪ ತಹಸೀಲ್ದಾರ್ ಶುಭ, ಬೆಟ್ಟದಪುರ ಬ್ಲಾಕ್ ಅಧ್ಯಕ್ಷ ರೆಹಮತ್ ಜಾನ್‌ಬಾಬು, ರಾವಂದೂರು ಬ್ಲಾಕ್ ಅಧ್ಯಕ್ಷ ಡಿ.ಟಿ.ಸ್ವಾಮಿ, ಇಓ ಚಂದ್ರಶೇಖರ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ರಮೇಶ್, ನಿಂಗರಾಜು, ಮುಖಂಡರಾದ ಯ.ಸ್ವಾಮಿಗೌಡ, ಪ್ರಕಾಶ್‌ಗೌಡ, ಬಿ.ಜೆ.ಬಸವರಾಜ್, ಪಿ.ಮಹದೇವ್, ಮಂಜು, ಕೆ.ಪಿ.ಮಹೇಶ್, ಗ್ರಾಪಂ ಅಧ್ಯಕ್ಷೆ ಜಾನಕಿ, ಉಪಾಧ್ಯಕ್ಷೆ ಸುಮಾ, ಪಿಡಿಓ ಪರಮೇಶ್, ಸುಷ್ಮಾ, ಸುಮಿತ್ರಾ, ಸದಸ್ಯರಾದ ಶ್ರೀಪತಿ, ರಾಣಿ, ಮಮತ, ಶೀಲಾ, ಸೋಮು, ಆಪ್ತ ಸಹಾಯಕ ಮಹೇಂದ್ರ ಸೇರಿದಂತೆ ಇನ್ನಿತರರಿದ್ದರು.

ಆಣೆ ಪ್ರಮಾಣಕ್ಕಿಲ್ಲ ಕಿಮ್ಮತ್ತು

ಸಿಂಧುವಳ್ಳಿ ಗ್ರಾಪಂನಲ್ಲಿ ಆಣೆ ಪ್ರಮಾಣ ಮಾಡಿಸಿಕೊಂಡೂ ಸೋತ ಅಭ್ಯರ್ಥಿ

ಕಾಂಗ್ರೆಸ್ ಬೆಂಬಲಿತನಿಗೆ ಒಲಿದ ಅಧ್ಯಕ್ಷ ಸ್ಥಾನ



ನಂಜನಗೂಡು, ಆ.7– ಸಾಲಿಗ್ರಾಮ ತಾಲೂಕಿನ ಮೇಲೂರು ಗ್ರಾಪಂ ಅಧ್ಯಕ್ಷಗಿರಿ ಹಿಡಿಯಲು ಜೆಡಿಎಸ್ ಬೆಂಬಲಿತ ಅಭ್ಯರ್ಥಿಯು 8 ಮಂದಿಯಿಂದ ಆಣೆ ಪ್ರಮಾಣ ಮಾಡಿಸಿಕೊಂಡು ಮಹದೇಶ್ವರ ಬೆಟ್ಟಕ್ಕೆ ಪ್ರವಾಸ ಕರೆದೊಯ್ದರು ಕೂಡ ಪ್ರಮಾಣ ಮಾಡಿದ ಮೂವರು ಕೈಕೊಟ್ಟ ಘಟನೆ ಬೆನ್ನಲ್ಲೇ ಇಂತಹದ್ದೇ ಘಟನೆ ನಂಜನಗೂಡು ತಾಲೂಕು ಸಿಂಧುವಳ್ಳಿ ಗ್ರಾಪಂನಲ್ಲಿ ನಡೆದಿದೆ.

15 ಸದಸ್ಯರ ಬಲ ಹೊಂದಿರುವ ಸಿಂಧುವಳ್ಳಿ ಗ್ರಾಪಂ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಗೆಲ್ಲಲ್ಲು 8 ಮತಗಳ ಅಗತ್ಯವಿದ್ದು, ಬಿಜೆಪಿ ಬೆಂಬಲಿತ ಅಭ್ಯರ್ಥಿ ನಾಗಮ್ಮ ಅವರು 7 ಸದಸ್ಯರಿಂದ ದೇವರ ಮುಂದೆ ಆಣೆ ಪ್ರಮಾಣ ಮಾಡಿಸಿಕೊಂಡು ಮಲೆ ಮಹದೇಶ್ವರ ಬೆಟ್ಟ ಸೇರಿದಂತೆ ಕೆಲವು ಸ್ಥಳಗಳಿಗೆ 8 ದಿನಗಳ ಪ್ರವಾಸ ಕರೆದೊಯ್ದಿದ್ದರು. ಚುನಾವಣೆ ದಿನವಾದ ಇಂದು ಇವರೆಲ್ಲರೂ ಗ್ರಾಪಂ ಕಚೇರಿಗೆ ಬಂದು ಮತ ಚಲಾಯಿಸಿದರು. 7 ಮಂದಿ ಆಣೆ ಮಾಡಿರುವುದರಿಂದ ತನ್ನದೂ ಸೇರಿ 8 ಮತಗಳೊಂದಿಗೆ ಅಧ್ಯಕ್ಷೆಯಾಗುವ ಆತ್ಮವಿಶ್ವಾಸ ಹೊಂದಿದ್ದ ನಾಗಮ್ಮ ಫಲಿತಾಂಶ ಹೊರಬಿದ್ದಾಗ ಬೆಸ್ತು ಬಿದ್ದರು. ಅವರಿಗೆ ದೊರೆತಿದ್ದು ಕೇವಲ 7 ಮತ. ಎದುರಾಳಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಹೊಣಕಾರನಾಯಕ 8 ಮತ ಪಡೆದು ಅಧಿಕಾರದ ಚುಕ್ಕಾಣಿ ಹಿಡಿದರು.

ಆಣೆ ಪ್ರಮಾಣ ಮಾಡಿದ್ದ 7 ಮಂದಿಯಲ್ಲಿ ಅಡ್ಡ ಮತದಾನ ಮಾಡಿದ್ದು ಯಾರು ಎಂಬುದು ಯಕ್ಷಪ್ರಶ್ನೆಯಾಗಿದೆ. ವಿಶೇಷವೆಂದರೆ ಮತದಾನ ನಂತರವೂ ಈ 7 ಮಂದಿಯೂ ತಾವೂ ನಾಗಮ್ಮ ಅವರಿಗೆ ಮತದಾನ ಮಾಡಿರುವುದಾಗಿ ಮತ್ತೆ ಆಣೆ ಪ್ರಮಾಣ ಮಾಡಿರುವುದರಿಂದ ನಾಗಮ್ಮರಿಗೆ ಕೈಕೊಟ್ಟವರು ಯಾರು ಎಂಬುದು ನಿಗೂಢವಾಗಿಯೇ ಉಳಿದಿದೆ. ಉಳಿದಂತೆ ಉಪಾಧ್ಯಕ್ಷರಾಗಿ ಇದೇ ಪಂಚಾಯಿತಿಯ ಮಾಜಿ ಅಧ್ಯಕ್ಷೆ ಕಾಂಗ್ರೆಸ್ ಬೆಂಬಲಿತರಾದ ಲತಾ 8 ಮತಗಳೊಂದಿಗೆ ಆಯ್ಕೆಯಾದರೇ ಬಿಜೆಪಿ ಬೆಂಬಲಿತ ಅಭ್ಯರ್ಥಿ ಕೆ.ಪಿ.ನಾಗು 7 ಮತ ಪಡೆದು ಪರಾಭವಗೊಂಡರು.

ಚುನಾವಣಾಧಿಕಾರಿಯಾಗಿ ತಾಪಂ ಯೋಜನಾಧಿಕಾರಿ ಗುರುಮಹದೇವ ಕಾರ್ಯ ನಿರ್ವಹಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ಮಣಿಕಂಠ, ಕೃಷ್ಣಕುಮಾರ್, ಶಾಂತಮಲ್ಲು, ಮಂಗಳಮ್ಮ, ಸುಮಾ, ಮುಖಂಡರಾದ ಅಶೋಕ್, ಪಿಡಿಓ ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಕರೋಹಟ್ಟಿ ಗ್ರಾಪಂಗೆ ಜಯಶ್ರೀ ಅಧ್ಯಕ್ಷೆ



ತಿ.ನರಸೀಪುರ, ಆ.7– ತಾಲೂಕಿನ ಕರೋಹಟ್ಟಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಜಯಶ್ರೀ, ಉಪಾಧ್ಯಕ್ಷರಾಗಿ ನಾಗರಾಜು ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸವಿತಾ ಹಾಗೂ ಜಯಶ್ರೀ ಉಮೇದುವಾರಿಕೆ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಮತ್ತು ದಿವ್ಯ ನಾಮಪತ್ರ ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ 13 ಮತ ಪಡೆದ ಜಯಶ್ರೀ ಅಧ್ಯಕ್ಷೆಯಾಗಿ ಆಯ್ಕೆಯಾದರೇ, 5 ಮತ ಪಡೆದ ಸವಿತಾ ಪರಾಭವಗೊಂಡರು. ಇನ್ನು 14 ಮತಗಳನ್ನು ಪಡೆದ ನಾಗರಾಜು ಉಪಾಧ್ಯಕ್ಷರಾಗಿ ಆಯ್ಕೆಯಾದರೆ ಪ್ರತಿಸ್ಪರ್ಧಿ ದಿವ್ಯಾ ಕೇವಲ 4 ಮತಗಳನ್ನು ಪಡೆದು ಪರಾಭವಗೊಂಡರು. ಒಟ್ಟು 19 ಸದಸ್ಯರ ಪೈಕಿ ನಾಗರಾಜು ಗೈರಾದರೇ, ಪ್ರಭು, ಜಗದೀಶ್, ಸುರೇಶ್, ಪುಟ್ಟಸ್ವಾಮಿ, ರೇವಣ್ಣ, ಮಂಜುಳಾ ರೇವಣ್ಣ, ನಂದಿನಿ, ಮಮತಾ, ಮಂಜು, ಸಿದ್ದಮ್ಮ, ಸುಶೀಲಮ್ಮ, ಪುಟ್ಟಬಸಮ್ಮ, ಗೋವಿಂದ, ಪ್ರಕಾಶ ಚುನಾವಣೆಯಲ್ಲಿ ಹಾಜರಿದ್ದರು. ಚುನಾವಣಾಧಿಕಾರಿಯಾಗಿ ನೀರಾವರಿ ಇಲಾಖೆ ಎಇಇ ಸುಹಾಸ್ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷೆ, ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಗುತ್ತಿಗೆದಾರ ರಾಜಣ್ಣ, ಕೆ.ಎನ್. ಪ್ರಭುಸ್ವಾಮಿ, ಶಿವಕುಮಾರ್, ಬಿಜೆಪಿ ಮುಖಂಡ ಕರೋಹಟ್ಟಿ ಮಹದೇವಯ್ಯ, ಗುರುಮಲ್ಲಪ್ಪ, ಗೌಡ್ರ ಮಹೇಶ್, ಬನ್ನಹಳ್ಳಿ ಹುಂಡಿ ಸೋಮಣ್ಣ, ಡಿ.ಎಂ.ಸ್ವಾಮಿ, ಬಿಜೆಪಿ ಬಸವರಾಜು, ಮಾದೇಶ್, ಮಲ್ಲಿಕಾರ್ಜುನಪ್ಪ, ನಟರಾಜು, ಯೋಗೀಶ್(ಲೋಕಿ), ಮಹದೇವಯ್ಯ ಮತ್ತಿತರಿದ್ದರು.

ಆದಿವಾಸಿ ಮುಖಂಡರಿಂದ ಸಚಿವ ನಾಗೇಂದ್ರ ಭೇಟಿ

ಸಚಿವರೊಂದಿಗೆ ಸಮಸ್ಯೆಗಳ ಬಗ್ಗೆ ಚರ್ಚೆ



ಹುಣಸೂರು, ಆ.7– ಬೆಂಗಳೂರಿನಲ್ಲಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಇಲಾಖೆ ಹಾಗೂ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಸಚಿವ ಬಿ.ನಾಗೇಂದ್ರ ಅವರನ್ನು ಹುಣಸೂರಿನ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ನೇತೃತ್ವದಲ್ಲಿ ಆದಿವಾಸಿ ಮುಖಂಡರು ಭೇಟಿ ಮಾಡಿ ಮಾತುಕತೆ ನಡೆಸಿದರು.

ಈ ವೇಳೆ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಹಾಗೂ ಕೊಡಗು ಜಿಲ್ಲಾ ಆದಿವಾಸಿ ಮುಖಂಡರು ಸಚಿವರೊಂದಿಗೆ ಆದಿವಾಸಿಗಳ ಅಭಿವೃದ್ಧಿ ಹಾಗೂ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು.

ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ಆದಿವಾಸಿಗಳ ಸಮಸ್ಯೆ ಹಾಗೂ ಅಭಿವೃದ್ಧಿ ಬಗ್ಗೆ ಸಚಿವರ ಗಮನ ಸೆಳೆದರು.

ಸಚಿವ ಬಿ.ನಾಗೇಂದ್ರ ಮಾತನಾಡಿ, ಮುಂದಿನ ದಿನಗಳಲ್ಲಿ ಗಿರಿಜನ ಹಾಡಿಗಳಲ್ಲಿ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ವಾಸ್ತವ್ಯ ಹೂಡಿ ಸ್ಥಳದಲ್ಲಿ ಆದಿವಾಸಿಗಳ ಸಮಸ್ಯೆ ಆಲಿಸಿ ಬಗೆಹರಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಮೈಸೂರು ಜಿಲ್ಲಾ ಜೇನು ಕುರುಬರ ಸಂಘದ ಅಧ್ಯಕ್ಷ ಜೆ.ಟಿ. ರಾಜಪ್ಪ, ಚಂದ್ರು, ಶಿವಣ್ಣ, ಬಾಬು, ಮಧುರ, ಪಿರಿಯಾಪಟ್ಟಣ ತಾಲೂಕಿನ ಬಸಪ್ಪ, ಬಸವಣ್ಣ, ಕೋಟೆ ತಾಲೂಕಿನ ಅಯ್ಯಪ್ಪ, ಗಣೇಶ್, ಕೊಡಗಿನ ಮುತ್ತಮ್ಮ ಸೇರಿದಂತೆ 200ಕ್ಕೂ ಹೆಚ್ಚು ಆದಿವಾಸಿ ಮುಖಂಡರು ಇದ್ದರು.

ಇಂದು ಕೋಟೆಯಲ್ಲಿ ಕೆಂಪೇಗೌಡ ಜಯಂತಿ



ಹೆಚ್.ಡಿ.ಕೋಟೆ, ಆ.7– ತಾಲೂಕು ಒಕ್ಕಲಿಗರ ಸಂಘದ ವತಿಯಿಂದ ಪಟ್ಟಣದಲ್ಲಿ ಆ.8ರಂದು ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಸುರೇಂದ್ರ ಡಿ.ಗೌಡ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 11 ಗಂಟೆಗೆ ಕೆಂಪೇಗೌಡರ ಪ್ರತಿಮೆಯನ್ನು ವಿವಿಧ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೆಳ್ಳಿರಥದಲ್ಲಿ ಮೆರವಣಿಗೆ ಮಾಡಲಾಗುವುದು. ಆದಿಚುಂಚನಗಿರಿ ಕಾಲೇಜು ಆವರಣದಿಂದ ಹೊರಡುವ ಮೆರವಣಿಗೆ ಬಿಜಿಎಸ್ ಕಲ್ಯಾಣ ಮಂಟಪದಲ್ಲಿ ಕೊನೆಗೊಂಡು ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ವಹಿಸಲಿದ್ದಾರೆ. ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಪಶುಸಂಗೋಪನಾ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್, ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಕೆ.ಹರೀಶ್‌ಗೌಡ ಸೇರಿದಂತೆ ಇತರ ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಚಲುವರಾಜು, ಗೌರವಾಧ್ಯಕ್ಷ ರಾಮು, ಶಿವಲಿಂಗೇಗೌಡ, ಉಪಾಧ್ಯಕ್ಷ ಕಾಳಪ್ಪ ಇದ್ದರು.

ಚಾ.ನಗರ ಲೋಕಸಭಾ ಟಿಕೆಟ್ ನನಗೆ ಸಿಗಲಿದೆ



ತಿ.ನರಸೀಪುರ, ಆ.7– ದಲಿತ ಸಮುದಾಯದಲ್ಲಿ ಮಾಜಿ ಶಾಸಕನಾಗಿ ಅತ್ಯಂತ ಹಿರಿಯನಿದ್ದೇನೆ. ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಲ್ಲಿ ಎಡ್ಗೈ(ಮಾದಿಗ)ನವರಿಗೆ ಅವಕಾಶ ನೀಡಬೇಕಿರುವುದರಿಂದ ಬಿಜೆಪಿಯಲ್ಲಿ ನನ್ನ ಹಿರಿತನ ಪರಿಗಣಿಸಿ ಸ್ಪರ್ಧಿಸಲು ಟಿಕೆಟ್ ನೀಡುವ ವಿಶ್ವಾಸವಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಗೋಪಾಲಪುರದ ನಿವಾಸದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಸದ ವಿ.ಶ್ರೀನಿವಾಸಪ್ರಸಾದ್ ವಯಸ್ಸಿನಲ್ಲಿ ಹಿರಿಯರಿದ್ದರೂ ಬಿಜೆಪಿಗೆ ನನಗಿಂತಲೂ ಕಿರಿಯರು. ಎರಡು ದಶಕಗಳಿಗೂ ಹೆಚ್ಚು ಕಾಲ ಪಕ್ಷಕ್ಕಾಗಿ ದುಡಿದಿರುವ ನನ್ನ ನಿಷ್ಠೆ ಪರಿಗಣಿಸಿ ಹೈಕಮಾಂಡ್ ಈ ಬಾರಿಯ ಚುನಾವಣೆಗೆ ನನ್ನನ್ನೇ ಕಣಕ್ಕಿಳಿಸಲಿದೆ ಎಂದರು.

ಯುವಕರಿಗೆ ಕೊಡುವುದಾದರೆ ಆರ್.ಅರ್ಜುನ್‌ಗೆ ಕೊಡಿ

ಲೋಕಸಭಾ ಚುನಾವಣೆಯಲ್ಲಿ ಯುವಕರಿಗೆ ಆದ್ಯತೆ ನೀಡುವುದಾದರೇ ಸಿಎಂ ಕ್ಷೇತ್ರದ ಪುರಸಭೆಯಲ್ಲಿ ಅತ್ಯಧಿಕ ಮತಗಳ ಅಂತರದಿಂದ ಗೆದ್ದು ಸದಸ್ಯರಾಗಿರುವ ಪುತ್ರ ಆರ್.ಅರ್ಜುನ್ ಅವರಿಗೆ ಚಾಮರಾಜನಗರದಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕು. ಯುವ ಮೋರ್ಚಾ ಅಧ್ಯಕ್ಷರಾಗಿ, ಜಿಲ್ಲಾ ಹಾಗೂ ರಾಜ್ಯ ಕಾರ್ಯಕಾರಣಿ ಸದಸ್ಯರಾಗಿ ಪ್ರತಿಯೊಂದು ಬಡಾವಣೆ, ಗ್ರಾಮಗಳಲ್ಲಿ ನೂರಾರು ಸಂಖ್ಯೆಯಲ್ಲಿ ಬೆಂಬಲಿಗರನ್ನು ಹೊಂದಿರುವ ಆತ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಲ್ಲಿ ಗೆಲ್ಲುವುದು ಬಹುತೇಕ ಖಚಿತ. **–ಸಿ.ರಮೇಶ್, ವಿಧಾನಪರಿಷತ್ ಮಾಜಿ ಸದಸ್ಯ.**

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಲಗೈ ಸಮುದಾಯದ 2 ಲಕ್ಷ ಮಂದಿ ಇದ್ದರೂ ಚುನಾವಣೆಯಲ್ಲಿ ಚದುರಿ ಹೋಗಲಿವೆ. ಎಡ್ಗೈ ಸಮುದಾಯದ ನಾಯಕ ಸ್ಪರ್ಧಿಸಿದರೆ 1.6 ಲಕ್ಷ ಮತಗಳು ಧೃವೀಕರಣಗೊಳ್ಳಲಿವೆ. ಬಿಜೆಪಿಯ ಸಾಂಪ್ರದಾಯಿಕ ಮತಗಳಾದ ವೀರಶೈವ ಲಿಂಗಾಯತ ಮತಗಳು ಶೇ.75 ಚಲಾವಣೆಯಾಗುವುದರಿಂದ ಬಿಜೆಪಿ ಗೆಲುವು ಮುಂದುವರೆಯಲಿದೆ. ಈಗಿನ ಸಂಸದರು ಕೂಡ ವೀರಶೈವ ಲಿಂಗಾಯತರ ಮತಗಳಿಂದಲೇ ಗೆದ್ದಿದ್ದಾರೆ. ರಾಜಶೇಖರಮೂರ್ತಿ, ವೀರೇಂದ್ರ ಪಾಟೀಲ್ ಹಾಗೂ ನಿಜಲಿಂಗಪ್ಪ ಅವರ ಶಿಷ್ಯನೆಂದೇ ಗುರುತಿಸಿಕೊಂಡಿದ್ದೇನೆ. ಗೋವಿಂದ ಕಾರಜೋಳ ಹಾಗೂ ನಾರಾಯಣಸ್ವಾಮಿ ಅವರಿಗಿಂತಲೂ ಹಿರಿಯನಿರುವ ನನಗೆ ನಿರಂತರ ಅನ್ಯಾಯವಾಗಿರುವ ಬಗ್ಗೆ ಜನರಿಗೆ ತಿಳಿದಿರುವುದರಿಂದ ಈ ಬಾರಿ ಬಿಜೆಪಿ ಟಿಕೆಟ್ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.



ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ರಾಮಮ್ಮ, ಉಪಾಧ್ಯಕ್ಷರಾಗಿ ಕೆ.ದೇವರಾಜು ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ಬೋರಯ್ಯ, ಗ್ರಾಪಂ ಸದಸ್ಯರಿದ್ದರು.

ಮುತ್ತಲವಾಡಿ ಗ್ರಾಪಂಗೆ ಪುಷ್ಪ ಅಧ್ಯಕ್ಷೆ, ಅಶೋಕ್ ಉಪಾಧ್ಯಕ್ಷ



ತಿ.ನರಸೀಪುರ, ಆ.7– ತಾಲೂಕಿನ ಮುತ್ತುವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಪುಷ್ಪ ಹಾಗೂ ಉಪಾಧ್ಯಕ್ಷರಾಗಿ ಕೆ.ಎನ್. ಅಶೋಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಅನುಸೂಚಿತ ಜಾತಿ ಮಹಿಳೆಗೆ ಹಾಗೂ ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಪುಷ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಎನ್.ಅಶೋಕ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಪಿಆರ್‌ಇಡಿ ಇಲಾಖೆ ಎಇಇ ಹಾಗೂ ಚುನಾವಣಾಧಿಕಾರಿ ಚರಿತಾ ಘೋಷಿಸಿದರು. ಗ್ರಾಪಂನ ಒಟ್ಟು 16 ಸದಸ್ಯರ ಪೈಕಿ ಸಿದ್ದಮ್ಮ ಹಾಗೂ ಎಂ. ನಾಗೇಶ್ ಹೊರತುಪಡಿಸಿ 14 ಮಂದಿ ಸದಸ್ಯರು ಚುನಾವಣೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಗ್ರಾಪಂ ಆವರಣದಲ್ಲಿ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಉಪಾಧ್ಯಕ್ಷ ಕೆ.ಎನ್. ಅಶೋಕ್ ಮಾತನಾಡಿ, ನನ್ನ ಅವಿರೋಧ ಆಯ್ಕೆಗೆ ಎಲ್ಲರೂ ಸಹಕಾರ ನೀಡಿದ್ದಾರೆ. ಪಂಚಾಯ್ತಿಗೆ ಸರ್ಕಾರದಿಂದ ಬರುವ ಅನುದಾನವನ್ನು ತಂದು ಗ್ರಾಮದ ಅಭಿವೃದ್ಧಿಗೆ ಶ್ರಮಿಸಲು ಅಧ್ಯಕ್ಷರೊಂದಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಚುನಾವಣೆಯಲ್ಲಿ ನಿಕಟಪೂರ್ವ ಅಧ್ಯಕ್ಷ ಕೆ.ಎಂ.ರಮೇಶ್, ಸದಸ್ಯರಾದ ಶಿವಸ್ವಾಮಿ, ನಾಗರತ್ನಮ್ಮ, ಪಿ.ಮಹದೇವಯ್ಯ, ನಾಗಮಣಿ, ಆರ್.ಸರಸ್ವತಿ, ಎಂ.ರೇಖಾ, ಹೆಚ್.ಎ. ಮಹಾಲಿಂಗಸ್ವಾಮಿ, ಮಂಗಳಮ್ಮ, ಮಂಜುಳಾ, ಪ್ರಕಾಶ್, ಎಸ್.ಸಿದ್ದರಾಜು ಹಾಜರಿದ್ದರು.

ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಪಿಎಸಿಎಸ್ ಅಧ್ಯಕ್ಷ ಶಿವರಾಂ, ಉಪಾಧ್ಯಕ್ಷ ಮಹೇಶ್, ಮುಖಂಡರಾದ ಬಸವರಾಜು, ಮಹದೇವಯ್ಯ, ಪುಟ್ಟಸ್ವಾಮಿ, ಕೃಷ್ಣ, ಕಾಮಹಳ್ಳಿ ಪ್ರಭಾಕರ್, ಗೌಡ್ರ ನಾಗಣ್ಣ, ನಾಗರಾಜಣ್ಣ, ಶಿವಮೂರ್ತಿ, ನಂಜುಂಡಸ್ವಾಮಿ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ನಾಲೆಗೆ ನೀರು ಹರಿಸಲು ಆಗ್ರಹಿಸಿ ರೈತರ ಪ್ರತಿಭಟನೆ



ಬನ್ನೂರು, ಆ.7– ನಾಲೆಗೆ ನೀರು ಹರಿಸಲು ಆಗ್ರಹಿಸಿ ನೂರಾರು ರೈತರು ಪಟ್ಟಣದಲ್ಲಿ ರಸ್ತೆ ತಡೆಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಮೈಸೂರು ಮುಖ್ಯರಸ್ತೆಯ ಸಂತೇಮಾಳದ ಬಸವೇಶ್ವರ ವೃತ್ತದಲ್ಲಿ ಜಾನುವಾರುಗಳೊಂದಿಗೆ ಜಮಾಯಿಸಿದ ರೈತರು ರಸ್ತೆ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ನಾರಾಯಣ್ ಮಾತನಾಡಿ, ಕೆಆರ್‌ಎಸ್ ಅಣೆಕಟ್ಟು ಭರ್ತಿ ಹಂತ ತಲುಪಿದ್ದರೂ, ಅಣೆಕಟ್ಟೆಯಿಂದ ಇನ್ನೂ ನೀರು ಬಿಡದಿರುವ ಪರಿಣಾಮ ರೈತರು ನಾಟಿ ಕಾರ್ಯಕ್ಕೆ ಮುಂದಾಗಿಲ್ಲ. ಸಕಾಲಕ್ಕೆ ನೀರು ಬಿಡದೇ ಕೃಷಿ ಕಾರ್ಯಗಳು ಸ್ಥಗಿತಗೊಂಡಿದೆ. ಹೀಗಾಗಿ ಕೂಡಲೇ ಬನ್ನೂರು ವ್ಯಾಪ್ತಿಯ ನಾಲೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ಕಾವೇರಿ ನಾಲೆಗಳ ಮುಖ್ಯ ಇಂಜಿನಿಯರ್ ಹಾಗೂ ಸಹಾಯಕ ಇಂಜಿನಿಯರ್‌ಗಳು ಸರ್ವೇ ಮಾಡಿ ರೈತರಿಗೆ ಅಗತ್ಯವಿರುವ ನೀರಿನ ಅವಶ್ಯಕತೆ ಬಗ್ಗೆ ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವ ಕೆಲಸ ಮಾಡಿಕೊಡಬೇಕಿತ್ತು. ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಈ ಭಾಗದ ರೈತರು ಬೆಳೆ ಬೆಳೆಯಲು ಮೀನಾಮೇಷ ಎಣಿಸುವಂತಾಗಿದೆ. ಬೆಳೆ ಬೆಳೆಯದಿದ್ದರೆ, ಬರಗಾಲ ಸೃಷ್ಟಿಯಾದರೆ ಪ್ರತಿ ಮನೆ ಮನೆಗೂ ಸರ್ಕಾರವೇ ಉಚಿತವಾಗಿ ಆಹಾರ ಧಾನ್ಯ ವಿತರಿಸಬೇಕಾಗುತ್ತದೆ. ಜೊತೆಗೆ ರೈತನ ಜೀವನಾಧಾರಕ್ಕೆ ಜೀವನಾಂಶವನ್ನು, ಎಕರೆಗೆ 1 ಲಕ್ಷ ಪರಿಹಾರ ಧನವನ್ನು ಸರ್ಕಾರ ಇಲ್ಲವೇ ನೀರಾವರಿ ಇಲಾಖೆ ಅಧಿಕಾರಿಗಳು ಭರಿಸಬೇಕಾಗುತ್ತದೆ ಎಂದರು.

ಈ ವೇಳೆ ಸ್ಥಳಕ್ಕಾಗಮಿಸಿದ ನೀರಾವರಿ ಇಂಜಿನಿಯರ್ ಮಂಜುನಾಥ್ ಇಂದು ನೀರು ಹರಿಸುವ ಸಂಬಂಧ ಸಭೆ ನಡೆಯುತ್ತಿದ್ದು, ಮೇಲಾಧಿಕಾರಿಗಳ ಗಮನಕ್ಕೆ ತಂದು ನೀರು ಹರಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಪ್ರತಿಭಟನೆಯಲ್ಲಿ ಮುಖಂಡರಾದ ವೆಂಕಟೇಶ್, ಶಿವರಾಂ, ಕುಚೇಲ, ರಂಗಸ್ವಾಮಿ, ರಾಜು, ಚೇತನ್, ಚಿನ್ನಸ್ವಾಮಿ, ಎಂ.ವಿ. ಕೃಷ್ಣಪ್ಪ ಸೇರಿದಂತೆ ರೈತ ಮುಖಂಡರು ಇದ್ದರು.

ಮಕ್ಕಳ ಪಾಲಿಗೆ ಪೋಷಕರು ಎಟಿಎಂ ಆಗಬಾರದು



ಮೈಸೂರು, ಆ.7(ಸಿಎನ್)–ಮೊಬೈಲ್ ಎಂಬುದು ಈಗಿನ ಕಾಲದ ಬಹುದೊಡ್ಡ ಪಿಡುಗಾಗಿ ಕಾಡುತ್ತಿದೆ. ಬಹುಪಾಲು ವಿದ್ಯಾರ್ಥಿಗಳ ಭವಿಷ್ಯ ಇದರಿಂದಾಗಿ ಹಾಳಾಗುತ್ತಿದೆ. ಪೋಷಕರು, ನಿಮ್ಮ ಮಕ್ಕಳ ಬಗ್ಗೆ ನಿಗಾ ವಹಿಸಿ, ಆದಷ್ಟು ಮೊಬೈಲ್‌ನಿಂದ ದೂರವಿಟ್ಟರೆ ಒಳ್ಳೆಯದು ಎಂದು ಲಯನ್ಸ್ ಕ್ಲಬ್ ಆಫ್ ಮೈಸೂರು ನಾರ್ತ್(ಉತ್ತರ) ಅಧ್ಯಕ್ಷಅಂಥೋಣಿ ಪಾಲ್ ರಾಜ್ ಕಿವಿಮಾತು ಹೇಳಿದರು.

ನಗರದ ಬೋಗಾದಿಯ ಮರಿಯನಿಕೇತನ ಶಾಲೆಯಲ್ಲಿ ಆಯೋಜಿಸಲಾಗಿದ್ದ ಪೋಷಕರ ಸಭೆಯಲ್ಲಿ 'ಇಂದಿನ ತಂತ್ರಜ್ಞಾನ ಮತ್ತು ಮೊಬೈಲ್ ಯುಗದಲ್ಲಿ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ' ಎಂಬ ವಿಷಯವಾಗಿ ಮಾತನಾಡಿದ ಅವರು, ಇತರೆ ಮಕ್ಕಳ ಪ್ರಗತಿಯನ್ನು ಮುಂದಿಟ್ಟುಕೊಂಡು, ನಿಮ್ಮ ಮಕ್ಕಳನ್ನು ಹೀಯ್ಯಾಳಿಸಬೇಡಿ, ಮಕ್ಕಳನ್ನು ಬೆಳೆಸುವಲ್ಲಿ ಹೆತ್ತವರಿಗೆ ಇರಬೇಕಾದ ಕಾಳಜಿ ಮತ್ತು ಕರ್ತವ್ಯಗಳು ಸಾಕಷ್ಟಿವೆ ಎಂದು ತಿಳಿಸಿದರು.

ಹೆತ್ತವರು ಮಕ್ಕಳ ಪಾಲಿಗೆ ಎಟಿಎಂ ರೀತಿ ಆಗಬಾರದು, ಕೇಳಿದ್ದನ್ನೆಲ್ಲಾ ತಕ್ಷಣ ಮಕ್ಕಳಿಗೆ ಕರುಣಿಸಬಾರದು. ಮಕ್ಕಳು ಹಾಳಾದರೇ ಅದರ ಹೊಣೆಗಾರಿಕೆ ಪಾಲಕರೇ ಹೊರಬೇಕು. ಏಕೆಂದರೆ ಮಕ್ಕಳನ್ನು ಬೆಳಸುವಲ್ಲಿ ಪೋಷಕರು ಅಜಾಗರೂಕರಾಗಿ ನಡೆದುಕೊಳ್ಳುತ್ತಿದ್ದಾರೆ. ಮಕ್ಕಳ ಮೇಲಿನ ಕುರುಡು ವ್ಯಾಮೋಹ ಅವರನ್ನು ಕಟ್ಟಿಹಾಕಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಮೊಬೈಲ್, ಟೆಕ್ನಾಲಜಿಗಳಿಂದಾಗಿ ಮಕ್ಕಳ ಹಾಗೂ ಪೋಷಕರ ಸಂಬಂಧಗಳು ಅಂತರ ಪಡೆಯುತ್ತಿದೆ. ಹುಟ್ಟಿದಾಗಿನಿಂದಲೂ ಮಕ್ಕಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದು ಇದೀಗ ಮೊಬೈಲ್ ಎಂಬ ಗಿಡುಗನ ಕೈಗೆ ನೀಡುತ್ತಿರುವುದು ಆಘಾತಕಾರಿ ಬೆಳವಣಿಗೆಯಾಗಿದೆ. ಈ ಬಗ್ಗೆ ಪೋಷಕರು ಗಮನ ಹರಿಸದಿದ್ದರೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಕೈ ಮೀರಿ ಹೋಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲೆ ಕಾರ್ಯದರ್ಶಿ ಡಾ.ಆನಿ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ರೂಪ ಲೋಫೀಸ್, ಸುಮಾರು 500ಕ್ಕೂ ಹೆಚ್ಚು ಪೋಷಕರು, ಮತ್ತಿತರರು ಭಾಗವಹಿಸಿದ್ದರು.

ಕರೆಂಟ್ ಬಿಲ್ ಜಾಸ್ತಿ ಬಂತೆಂದು ಮೀಟರ್ ರೀಡರ್‌ನನ್ನೇ ಇರಿದು ಕೊಂದರು!

ಗಂಜಾಂ (ಒಡಿಶಾ): ಒಡಿಶಾದ ಗಂಜಾಂ ಜಿಲ್ಲೆಯಲ್ಲಿ ಭೀಕರ ಹತ್ಯೆಯೊಂದು ನಡೆದಿದೆ. ಅಧಿಕ ಪ್ರಮಾಣದ ಬಿಲ್ ನೀಡುತ್ತಿದ್ದಾನೆ ಎಂಬ ಆರೋಪದ ಮೇಲೆ ವಿದ್ಯುತ್ ಮೀಟರ್ ರೀಡರ್‌ನನ್ನೇ ಹರಿತವಾದ ಆಯುಧಗಳಿಂದ ಇರಿದು ಹತ್ಯೆ ಮಾಡಲಾಗಿದೆ. ಹಂತಕರು ಪರಾರಿಯಾಗಿದ್ದು, ಪ್ರಕರಣ ದಾಖಲಾಗಿದೆ.

ಘಟನೆಯ ವಿವರ: ಗಂಜಾಂ ಜಿಲ್ಲೆಯ ಕುಪಾಟಿ ಗ್ರಾಮದಲ್ಲಿ ಬೆಚ್ಚಿ ಬೀಳಿಸುವ ಹತ್ಯೆಯಾಗಿದೆ. ಲಕ್ಷ್ಮೀ ನಾರಾಯಣ ತ್ರಿಪಾಠಿ ಮೃತ ವ್ಯಕ್ತಿ. ಹಲವು ವರ್ಷಗಳಿಂದ ಇವರು ವಿದ್ಯುತ್ ಬಿಲ್ ರೀಡರ್ ಆಗಿ ಕೆಲಸ ಮಾಡುತ್ತಿದ್ದರು. ಪ್ರತಿ ತಿಂಗಳು ತಮ್ಮ ವ್ಯಾಪ್ತಿಯಲ್ಲಿ ಬರುತ್ತಿದ್ದ ಮನೆಗಳಿಗೆ ವಿದ್ಯುತ್ ಬಿಲ್ ವಿತರಿಸುತ್ತಿದ್ದರು. ಆದರೆ ಕೆಲವರು ಜನರು ವಿದ್ಯುತ್ ಬಿಲ್ ಪ್ರತಿ ತಿಂಗಳು ಹೆಚ್ಚಾಗಿ ಬರುತ್ತಿದ್ದುದ್ದಕ್ಕೆ ಅಸಮಾಧಾನಗೊಂಡಿದ್ದರು. ಈ ಬಗ್ಗೆ ಹಲವು ಬಾರಿ ರೀಡರ್ ಲಕ್ಷ್ಮೀ ನಾರಾಯಣ ತ್ರಿಪಾಠಿ ಜೊತೆಗೆ ವಾಗ್ವಾದವನ್ನೂ ನಡೆಸಿದ್ದರು. ಆದರೂ ವಿದ್ಯುತ್ ಬಿಲ್ ಅಧಿಕವಾಗಿಯೇ ಬರುತ್ತಿತ್ತು. ಇದು ಜನರನ್ನು ರೊಚ್ಚಿಗೆಬ್ಬಿಸಿದೆ.

ಎಂದಿನಂತೆ ರೀಡರ್ ಲಕ್ಷ್ಮೀ ನಾರಾಯಣ ತ್ರಿಪಾಠಿ ಅವರು ಸೋಮವಾರ (ಆಗಸ್ಟ್ 7) ವಿದ್ಯುತ್ ಬಿಲ್ ನೀಡಲು ಕುಪಾಟಿ ಗ್ರಾಮಕ್ಕೆ ತೆರಳಿದ್ದಾರೆ. ಈ ವೇಳೆ ಕೆಲ ದುಷ್ಕರ್ಮಿಗಳು ತ್ರಿಪಾಠಿ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಬಳಿಕ ಹರಿತವಾದ ಆಯುಧ ಬಳಸಿ ಇರಿದಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದು ಮನೆಯೊಂದರ ಮುಂದೆ ಅವರು ಸಾವನ್ನಪ್ಪಿದ್ದಾರೆ.

ಘಟನೆಯ ಬಳಿಕ ಆರೋಪಿಗಳು ಊರಿನಿಂದ ಪರಾರಿಯಾಗಿದ್ದಾರೆ. ಮನೆಯೊಂದರ ಮುಂದೆ ತ್ರಿಪಾಠಿ ಹೆಣವಾಗಿದ್ದನ್ನು ಕಂಡು ಜನರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಖಾಕಿ ಪಡೆ ಪರಿಶೀಲನೆ ನಡೆಸಿದೆ. ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಜಾಲ ಬೀಸಿದ್ದಾರೆ. ಇತ್ತ ವಿಷಯ ತಿಳಿದ ವಿದ್ಯುತ್ ಮೀಟರ್ ರೀಡರ್ ನೌಕರರ ಸಂಘದ ಸದಸ್ಯರು ಮತ್ತು ಮೃತ ಸಿಬ್ಬಂದಿಯ ಕುಟುಂಬಸ್ಥರು ಗ್ರಾಮಕ್ಕೆ ಆಗಮಿಸಿ ಪ್ರತಿಭಟನೆ ನಡೆಸಿದ್ದಾರೆ. ಹಂತಕರನ್ನು ಪತ್ತೆ ಮಾಡಿ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ನನ್ನ ಸಹೋದರ ಕುಪಾಟಿ ಗ್ರಾಮಕ್ಕೆ ಮೀಟರ್ ರೀಡಿಂಗ್‌ಗೆ ಬಂದಿದ್ದಾಗ ದುಷ್ಕರ್ಮಿಗಳು ಹಲ್ಲೆ ಮಾಡಿ ಹತ್ಯೆ ಮಾಡಿದ್ದಾರೆ. ಆತ ಯಾವುದೇ ತಪ್ಪು ಮಾಡಿಲ್ಲ. ಹೀಗಿದ್ದರೂ ಭೀಕರವಾಗಿ ಕೊಲೆ ಮಾಡಲಾಗಿದೆ. ಈ ಬಗ್ಗೆ ಗ್ರಾಮಸ್ಥರು ಕೂಡ ನಮಗೆ ಮಾಹಿತಿ ನೀಡಿಲ್ಲ. ಸೂಕ್ತ ತನಿಖೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂದು ಮೃತನ ಸಹೋದರ ಆಗ್ರಹಿಸಿದರು.

ಮಣಿಪುರ ಹಿಂಸಾಚಾರ

ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಆರಂಭ, ಎಸ್‌ಐಟಿ ಸ್ಥಾಪಿಸಲು ರಾಜ್ಯ ಪ್ರಸ್ತಾಪ

ನವದೆಹಲಿ: ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಆರಂಭವಾಗಿದೆ. ಇನ್ನು ಪ್ರಕರಣಗಳ ತನಿಖೆಗಾಗಿ ಜಿಲ್ಲಾ ಎಸ್‌ಪಿಗಳ ನೇತೃತ್ವದಲ್ಲಿ ಎಸ್‌ಐಟಿ ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಮಣಿಪುರ ಡಿಜಿಪಿ ರಾಜೀವ್ ಸಿಂಗ್ ಅವರು ಮುಖ್ಯ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ನೇತೃತ್ವದ ಪೀಠದ ಮುಂದೆ ಹಾಜರಾಗಿ ಜನಾಂಗೀಯ ಹಿಂಸಾಚಾರ ಮತ್ತು ಆಡಳಿತವು ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸಿದರು. ಈ ವೇಳೆ ಅವರು ಪರಿಣಾಮಕಾರಿ ತನಿಖೆಯ ಉದ್ದೇಶಗಳಿಗಾಗಿ ಪ್ರಕರಣಗಳನ್ನು ಪ್ರತ್ಯೇಕಿಸುವುದರ ಜೊತೆಗೆ ಎಸ್‌ಐಟಿ ಸ್ಥಾಪಿಸುವುದಾಗಿ ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಪರವಾಗಿ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಆಗಸ್ಟ್ 1ರಂದು ಪ್ರಕರಣಗಳ ಪ್ರತ್ಯೇಕತೆ ಸೇರಿದಂತೆ ವಿಷಯಗಳ ಕುರಿತು ಸುಪ್ರೀಂಕೋರ್ಟ್ ಕೋರಿದ ವರದಿಯನ್ನು ಸಲ್ಲಿಸಿದರು. ಸರ್ಕಾರವು ಅತ್ಯಂತ ಪ್ರಬುದ್ಧ ಮಟ್ಟದಲ್ಲಿ ಪರಿಸ್ಥಿತಿಯನ್ನು ನಿಭಾಯಿಸುತ್ತಿದೆ ಎಂದು ಅಟಾರ್ನಿ ಜನರಲ್ ಅವರು ನ್ಯಾಯಮೂರ್ತಿಗಳಾದ ಜೆ ಬಿ ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠಕ್ಕೆ ತಿಳಿಸಿದರು.

ಸೂಕ್ಷ್ಮ ಪ್ರಕರಣಗಳ ತನಿಖೆಗೆ ಜಿಲ್ಲಾಮಟ್ಟದಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಎಸ್‌ಐಟಿಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಪ್ರಸ್ತಾಪಿಸಿದೆ. ಜೊತೆಗೆ 11 ಪ್ರಕರಣಗಳನ್ನು ಸಿಬಿಐ ತನಿಖೆ ನಡೆಸಲಿದೆ ಎಂದು ಅವರು ಹೇಳಿದರು.

ಆಗಸ್ಟ್ 1ರಿಂದ ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಸಾಂವಿಧಾನಿಕ ಯಂತ್ರಗಳ ಸಂಪೂರ್ಣ ಸ್ಥಗಿತವಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಜನಾಂಗೀಯ ಹಿಂಸಾಚಾರದ ಘಟನೆಗಳ, ವಿಶೇಷವಾಗಿ ಮಹಿಳೆಯರನ್ನು ಗುರಿಯಾಗಿಸುವ ಘಟನೆಗಳ 'ತಡ' ಮತ್ತು 'ಆಲಸ್ಯ' ತನಿಖೆಗಾಗಿ ಅದು ರಾಜ್ಯ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತು. ಆಗಸ್ಟ್ 7ರಂದು ಅದರ ಪ್ರಶ್ನೆಗಳಿಗೆ ಉತ್ತರಿಸಲು ಡಿಜಿಪಿಗೆ ಸಮನ್ಸ್ ನೀಡಿತ್ತು.

ಬೆಂಗಳೂರಿನಲ್ಲಿ ಮತ್ತೊಂದು ಹಿಟ್ ಅಂಡ್ ರನ್ ಅಪಘಾತ; ಬೈಕ್‌ನಲ್ಲಿ ತೆರಳುತ್ತಿದ್ದ ತಂದೆ–ಮಗ ಸಾವು

ಬೆಂಗಳೂರು: ಬೆಂಗಳೂರಿನಲ್ಲಿ ಬೈಕ್‌ನಲ್ಲಿ ಮನೆಗೆ ಹಿಂತಿರುಗುತ್ತಿದ್ದ ತಂದೆ ಮತ್ತು ಮಗ ಹಿಟ್ ಅಂಡ್ ರನ್ ಅಪಘಾತದಲ್ಲಿ ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಎಂಎಸ್ ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ಬಳಿಯ ಇಸ್ರೋ ವೃತ್ತದಲ್ಲಿ ಭಾನುವಾರ ತಡರಾತ್ರಿ ಈ ಅವಘಡ ಸಂಭವಿಸಿದೆ.



ಕಾರಿನಲ್ಲಿದ್ದವರು ಪಾನಮತ್ತರಾಗಿದ್ದು, ಬೈಕ್‌ಗೆ ಡಿಕ್ಕಿ ಹೊಡೆಯುವ ಮುನ್ನವೇ ಸರಣಿ ಅಪಘಾತದಲ್ಲಿ ಭಾಗಿಯಾಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು 65 ವರ್ಷದ ರಘು ಮತ್ತು ಅವರ 25 ವರ್ಷದ ಮಗ ಚಿರಂಜೀವಿ ಎಂದು ಗುರುತಿಸಲಾಗಿದೆ. ರಘು ಕೋರಮಂಗಲದಲ್ಲಿ ಪುಸ್ತಕ ಮಳಿಗೆ ನೋಡಿಕೊಂಡಿದ್ದರು.

ಅಪಘಾತದಲ್ಲಿ ಮತ್ತೊಬ್ಬ ವಾಸು ಎಂಬುವವರು ಗಾಯಗೊಂಡಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಮೊದಲು ಆಟೋಗೆ ಡಿಕ್ಕಿ ಹೊಡೆದಿದೆ. ಆಟೋ ರಸ್ತೆಯಲ್ಲಿ ಉರುಳಿ ಬಿದ್ದಿದೆ. ಈ ಘಟನೆಯಿಂದ ತಪ್ಪಿಸಿಕೊಳ್ಳಲು ಘಟನಾ ಸ್ಥಳದಿಂದ ವೇಗವಾಗಿ ಹೊರಡಲು ಪ್ರಯತ್ನಿಸುತ್ತಿರುವಾಗ, ಕಾರು ಪಾದಚಾರಿ ವಾಸುಗೆ ಡಿಕ್ಕಿ ಹೊಡೆದಿದೆ. ನಂತರ, ಕಾರು ಸಂತ್ರಸ್ತರು ಪ್ರಯಾಣಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬೈಕ್ ಸಂಪೂರ್ಣ ಜಖಂಗೊಂಡಿದ್ದು, ತಂದೆ–ಮಗ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಸ್ಥಳೀಯರು ವಾಹನವನ್ನು ತಡೆದು ಆರೋಪಿ ಆಕಾಶ್‌ನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಆದರೆ, ಉಳಿದವರು ಪರಾರಿಯಾಗಿದ್ದಾರೆ. ಆಕಾಶ್ ರಾಜಕೀಯ ಹಿನ್ನೆಲೆ ಹೊಂದಿದ್ದು, ಆತನ ತಾಯಿ ಜಿಲ್ಲಾ ಪಂಚಾಯತ್ ಸದಸ್ಯೆ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಉಳಿದ ಆರೋಪಿಗಳ ಬಗ್ಗೆ ಪೊಲೀಸರು ಮಾಹಿತಿ ಸಂಗ್ರಹಿಸಿದ್ದು, ಅವರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ಘಟನೆ ಸಂಬಂಧ ಸದಾಶಿವನಗರ ಸಂಚಾರ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲೋಕಸಭೆ ಚುನಾವಣೆಗೆ ಗುಜರಾತ್‌ನಲ್ಲಿ ಕಾಂಗ್ರೆಸ್ ಜತೆ ಎಎಪಿ ಮೈತ್ರಿ

ಅಹಮದಾಬಾದ್: ಗುಜರಾತ್‌ನಲ್ಲಿ ಎಎಪಿ ಮತ್ತು ಕಾಂಗ್ರೆಸ್ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಸೀಟು ಹಂಚಿಕೆ ಸೂತ್ರದಡಿ ಸ್ಪರ್ಧಿಸಲಿವೆ ಎಂದು ಆಮ್ ಆದ್ಮಿ ಪಕ್ಷದ ಗುಜರಾತ್ ಘಟಕದ ಮುಖ್ಯಸ್ಥ ಇಸುದನ್ ಗಧ್ವಿ ಸೋಮವಾರ ಹೇಳಿದ್ದಾರೆ. ಎರಡು ಪಕ್ಷಗಳು ವಿರೋಧ ಪಕ್ಷಗಳ ಮೈತ್ರಿಕೂಟ INDIAದ ಸದಸ್ಯರಾಗಿದ್ದಾರೆ. ಇನ್ನು, ಗಧ್ವಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪಕ್ಷವು ಕೇಂದ್ರ ನಾಯಕರ ನಿರ್ದೇಶನಗಳನ್ನು ಪಾಲಿಸುತ್ತದೆ ಎಂದು ಹೇಳಿದೆ.

ಎಎಪಿ ಮತ್ತು ಕಾಂಗ್ರೆಸ್ ನಡುವಿನ ಮೈತ್ರಿಯಿಂದ, ಆಡಳಿತ ಪಕ್ಷದ ಚುನಾವಣಾ ಭವಿಷ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಭಾರತೀಯ ಜನತಾ ಪಕ್ಷ ಹೇಳಿದೆ ಮತ್ತು ಎಎಪಿ ಕಾಂಗ್ರೆಸ್‌ನ ಬಿ ಟೀಮ್ ಎಂದು ಟೀಕಿಸಿದೆ.

"ಎಎಪಿ ಮತ್ತು ಕಾಂಗ್ರೆಸ್ ಎರಡೂ ಇಂಡಿಯಾ ಮೈತ್ರಿಕೂಟದ ಭಾಗವಾಗಿವೆ. ಈ ಚುನಾವಣಾ ಮೈತ್ರಿ ಗುಜರಾತ್‌ನಲ್ಲಿಯೂ ಜಾರಿಗೆ ಬರಲಿದೆ. ಮೈತ್ರಿಯ ಮಾತುಕತೆಗಳು ಪ್ರಾಥಮಿಕ ಹಂತದಲ್ಲಿದ್ದರೂ, ಮುಂಬರುವ ಲೋಕಸಭೆಯಲ್ಲಿ ಆಪ್ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಒಟ್ಟಾಗಿ ಹೋರಾಡುವುದು ಖಚಿತ. ಸೀಟು ಹಂಚಿಕೆ ಸೂತ್ರದ ಅಡಿಯಲ್ಲಿ ಗುಜರಾತ್‌ನಲ್ಲಿ ಲೋಕಸಭೆ ಚುನಾವಣೆ ಎದುರಿಸಲಿವೆ ಎಲ್ಲವೂ ಅಂದುಕೊಂಡಂತೆ ನಡೆದರೆ, ಈ ಬಾರಿ ಗುಜರಾತ್‌ನಲ್ಲಿ ಬಿಜೆಪಿ ಎಲ್ಲಾ 26 ಸ್ಥಾನಗಳನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ನಾನು ಗ್ಯಾರಂಟಿ ಕೊಡುತ್ತೇನೆ ಎಂದು ಗಧ್ವಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಅರವಿಂದ್ ಕೇಜ್ರಿವಾಲ್ ನೇತೃತ್ವದ ಪಕ್ಷವು INDIA ಜೊತೆ ಮೈತ್ರಿ ಮಾಡಿಕೊಂಡಿದೆ ಎಂದು ಗಧ್ವಿ ಹೇಳಿದ್ದಾರೆ.